SAPTHAGIRI(KANNADA)
ILLUSTRATED MONTHLY
Volume:01, Issue:10, Pages:56
May - 2022, Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮೇ 2022
ಬೆಲೆ ರೂ. 5/-



## ಶ್ರೀಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ

2022 ಮೇ 10 ರಿಂದ 12 ರ ವರೆಗೆ



## ತಿರುಪತಿ ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
## 2022 ಜೂನ್ 04 ರಿಂದ 13 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 04-06-2022 | ಶನಿವಾರ | -- | ಅಂಕುರಾರ್ಪಣೆ |
| 05-06-2022 | ಭಾನುವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 06-06-2022 | ಸೋಮವಾರ | ಚಿಕ್ಕಶೇಷವಾಹನ | ಹಂಸವಾಹನ |
| 07-06-2022 | ಮಂಗಳವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 08-06-2022 | ಬುಧವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 09-06-2022 | ಗುರುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 10-06-2022 | ಶುಕ್ರವಾರ | ಹನುಮದ್ವಾಹನ ಸಾ।। : ವಸಂತೋತ್ಸವ | ಗಜವಾಹನ |
| 11-06-2022 | ಶನಿವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 12-06-2022 | ಭಾನುವಾರ | ರಥೋತ್ಸವ | ಅಶ್ವವಾಹನ |
| 13-06-2022 | ಸೋಮವಾರ | ಚಕ್ರಸ್ನಾನ | ಧ್ವಜಾವರೋಹಣ |

## ಅಪ್ಪಲಾಯಗುಂಟ
## ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
## 2022 ಜೂನ್ 9 ರಿಂದ 18 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 09-06-2022 | ಗುರುವಾರ | -- | ಅಂಕುರಾರ್ಪಣೆ |
| 10-06-2022 | ಶುಕ್ರವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 11-06-2022 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 12-06-2022 | ಭಾನುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 13-06-2022 | ಸೋಮವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 14-06-2022 | ಮಂಗಳವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 15-06-2022 | ಬುಧವಾರ | ಹನುಮದ್ವಾಹನ | ಗಜವಾಹನ |
| 16-06-2022 | ಗುರುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 17-06-2022 | ಶುಕ್ರವಾರ | ರಥೋತ್ಸವ | ಅಶ್ವವಾಹನ |
| 18-06-2022 | ಶನಿವಾರ | ಚಕ್ರಸ್ನಾನ | ಧ್ವಜಾವರೋಹಣ |



# ಭಗವದ್ಗೀತೆ



**ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತ ಚೇತಸಃ।**
**ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್॥**

(ಶ್ರೀ ಮದ್ಭಗವದ್ಗೀತೆ, ಅಧ್ಯಾಯ - 1, ಶ್ಲೋಕ -37)

**ಆಸೆಗೆ ಬಲಿಯಾಗಿ ಬುದ್ಧಿ ಕಳಕೊಂಡ ಈ ಮಂದಿ ಕುಲನಾಶದ ಕೆಟ್ಟ ಪರಿಣಾಮವನ್ನೂ ಗೆಳೆಯರಿಗೆ ಎರಡು ಬಗೆದ ಪಾಪವನ್ನೂ ಅರ್ಥ ಮಾಡಿ ಕೊಳ್ಳುತ್ತಿಲ್ಲ, ನಿಜ.**

---



ದಯವಿರಲಿ ಎನ್ನಲ್ಲಿ ಧರಣಿಧರನೆ
ಭಯಗಳನು ಪೋಗಾಡು ಭಕ್ತ ಜನಪ್ರಿಯಾ

ಎರಗಿಸುವುದು ಚರಣದಲಿ ಶಿರಸು
ಎರಗಲಿ ನಿನ್ನ ಧ್ಯಾನದಲಿ ಮನಸು
ಎರವೆರವು ಮಾಡದಲೆ ನಿನ್ನ ನಾಮಾಮೃತವ
ಎರೆದು ಸಾಕುವುದು ಸಂತತ ಎನ್ನ ಬಿಡದೆ

ಮತಿಗೆಟ್ಟ ಮಾನವಗೆ ಗತಿ ನೀನೆ ಆವಾಗ
ಶೃತಿಗಳೂ ಪೇಳುತಿವೆ ಒರದೊರದೂ
ಕ್ಷಿತಿಯೊಳಗೆ ರವಿಶಶಿಯ ಗತಿತಪ್ಪಿದರೇನು
ಪತಿತಪಾವನ ನಿನ್ನ ಕೃಪೆಗೆ ಎಣೆಗಾಣೆ

ಕೊಡುವಲ್ಲಿ ಕೊಳುವಲ್ಲಿ ಅಡಿಗಡಿಗೆ ಭಕುತಿರಸ
ಕುಡಿಸುವಲಿ ಕಲಕಾಲ ಸಂತೋಷವ
ಬಡಿಸಿ ಪೊರೆವಲ್ಲಿ ನಿನಗಾವಲ್ಲಿ ಸರಿಗಾಣೆ
ಮೃಡನೊಡೆಯಾ ಸಿರಿವಿಜಯವಿಠಲ ತಿರುಮಲೇಶಾ

ಶ್ರೀ ವಿಜಯದಾಸರು

(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಜಗಜ್ಜನ್ಮಸ್ಥೇಮ ಪ್ರಲಯರಚನಾಕೇಳಿರಸಿಕೋ ವಿಮುಕ್ತ್ಯೈಕ ದ್ವಾರಂ ವಿಘಟಿತಕವಾಟಂ ಪ್ರಣಯಿನಾಮ್।**

**ಇತಿ ತ್ವಯ್ಯಾಯತ್ತಂ ದ್ವಿತಯ ಮುಪಧೀಕೃತ್ಯ ಕರುಣೇ ವಿಶುದ್ಧಾನಾಂ ವಾಚಾಂ ವೃಷಶಿಖರಿನಾಥಃ ಸ್ತುತಿಪದಮ್ ॥ ೭೮॥**

ಹಿಂದಿನ ಪದ್ಯದಲ್ಲಿ ಶ್ರೀನೀವಾಸನ ಸಮಸ್ತಗುಣಗಳೂ ದಯೆಯ ಸಂಬಂಧದಿಂದ ವೇದವೆಂಬ ಯುವತಿಯರ ನಾಲಿಗೆಗೆ ಪಚ್ಚ ಕರ್ಪೂರ ಗುಳಿಗೆಗಳಂತಿರುವುವೆಂದು ವರ್ಣಿಸಿರುತ್ತಾರೆ. ಅಂದರೆ, ದಯೆಯ ಸಂಬಂಧದಿಂದಲೇ ಆ ಗುಣಗಳು ಮಹತ್ವವನ್ನು ಹೊಂದಿ ವೇದಗಳು ಹೊಗಳುವಂತಹ ನೆಲೆಯನ್ನು ಹೊಂದಿರುವುವು. ಈ ಶ್ಲೋಕದಲ್ಲಿ ಆ ಗುಣಗಳಿಗೆ ಆವಾಸಸ್ಥಾನವಾದ ಸಾಕ್ಷಾತ್ ಶ್ರೀನಿವಾಸನನ್ನು ವೇದಗಳು ಹೊಗಳುವುದು ಕೂಡ ಆ ದಯಾ ದೇವಿಗೆ ಅಧೀನವಾಗಿ ಭಗವಂತನಲ್ಲಿರುವ ಜಗತ್ಕಾರಣತ್ವ (ಸೃಷ್ಟಿ) ಮೋಕ್ಷ ಪ್ರದತ್ವವೆಂಬ ಎರಡು ಗುಣಗಳ ಕಾರಣಗಳಿಂದಲೇ ಎಂದು ವರ್ಣಿಸಿ ದಯೆಯ ಹಿರಿಮೆಯನ್ನು ವರ್ಣಿಸುತ್ತಾರೆ.

ಶ್ರೀನಿವಾಸನೆಂಬ ಪರಮಪುರುಷನು ಸಮಸ್ತಜಗತ್ತಿನ ಸೃಷ್ಟಿ , ಸ್ಥಿತಿ, ಸಂಹಾರವೆಂಬ ಕಾರ್ಯಗಳನ್ನು ತನ್ನ ಲೀಲೆಗಳನ್ನಾಗಿ ಮಾಡಿಕೊಂಡು ಇತರ ಯಾವ ದೇವತೆಗಳಿಗೂ ಇಲ್ಲದಂತಹ 'ಜಗತ್ಕಾರಣ' ನೆಂಬ ಹಿರಿಮೆಯನ್ನು ಪಡೆದಿದ್ದಾನೆ. ಹಾಗೆಯೇ ಮೋಕ್ಷ ಸಾಮ್ರಾಜ್ಯಕ್ಕೆ ತೆರದ ಬಾಗಿಲುಳ್ಳ ಒಂದೇ ದಾರಿಯಾದವನೂ ಇವನೇ. ಅಂದರೆ, ಭಗವಂತನಲ್ಲಿ ವಿಶೇಷವಾದ ಪ್ರೇಮವುಳ್ಳ ಭಕ್ತರು, ಪ್ರಪನ್ನರೆಂಬುವರಿಗೆ ಮೋಕ್ಷವನ್ನು ಕರುಣಿಸುವುದೆಂಬುದು ಇವನನ್ನು ಬಿಟ್ಟರೆ ಮತ್ತೊಂದು ದೇವತೆಯಿಂದ ಆಗಲಾರದ ಕೆಲಸ. ಆದ್ದರಿಂದ ಜಗತ್ಕಾರಣತ್ವವೆಂಬುದೂ ಮೋಕ್ಷಪ್ರದತ್ವವೆಂಬುದೂ ಭಗವಂತನ ಅಸಾಧಾರಣವಾದ ಗುಣಗಳು. ಈ ಎರಡು ಗುಣಗಳೂ ಕೂಡ ದಯೆಗೆ ಅಧೀನವಾಗಿದ್ದು ಕೊಂಡೇ ಭಗವಂತನಲ್ಲಿ ಪ್ರಕಾಶಿಸುವುವು. ಅಂದರೆ ಎರಡನೆಯ ದಶಕದಲ್ಲಿ ನಿರೂಪಿಸಿರುವಂತೆ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಿ ಮೋಕ್ಷ ಪ್ರದತ್ವ-ಇವೆಲ್ಲವೂ ದಯೆಯಿಂದಲೇ ಏರ್ಪಡುವುವೆಂದು ಭಾವವು. ದಯೆಯ ಸಂಬಂಧದಿಂದಲೇ ಏರ್ಪಡುವುವೆಂಬ ಕಾರಣದಿಂದಲೇ ಯಾವುದೊಂದು ವಿಧವಾದ ದೋಷಕ್ಕೂ ಪ್ರಸಕ್ತಿಯಿಲ್ಲದ ಅಪೌರುಷೇಯವಾದ ವೇದಗಳು. ಆ ಎರಡು ಗುಣಗಳಿಗೂ ವಾಸಸ್ಥಾನವಾದ ಶ್ರೀನಿವಾಸನನ್ನು ಹೊಗಳುವುವು ಕೇವಲ ಶ್ರೀನಿವಾಸನನ್ನು ಹೊಗಳಲಾರವು. ಈ ರೀತಿಯಾಗಿ ದಯೆಯ ವಿಶೇಷವಾದ ಹಿರಿಮೆಯನ್ನು ಆಚಾರ್ಯರು ನಿರೂಪಿಸಿರುತ್ತಾರೆ.

ಜಗತ್ಸ್ಕೃಷ್ಟಿಯೇ ಮೊದಲಾದ ಕಾರ್ಯಗಳೂ, ಮೋಕ್ಷಪ್ರದತ್ವವೂ ದಯೆಯಿಂದಲೇ ಉಂಟಾಗುವುವೆಂಬುದು ಇಲ್ಲಿನ ಶಾಸ್ತ್ರಾರ್ಥ.

ಪುರುಷ (ಮನುಷ್ಯ) ರಚಿತವಾದರೆ ಭ್ರಮ, ಪ್ರಮಾದಾದಿದೋಷಗಳಿಗೆ ಅವಕಾಶವುಂಟು. ಅಂತಹ ಯಾರಿಂದಲೂ ರಚಿತವಾಗದಂತೆ ನಿತ್ಯವಾಗಿರುವುದರಿಂದ ವೇದಗಳಲ್ಲಿ ಇಂತಹ ಯಾವುದೊಂದು ದೋಷಕ್ಕೂ ಅವಕಾಶವಿಲ್ಲವೆಂಬುದೇ "ವಿಶುದ್ಧಾನಾಂ ವಾಚಾಂ" ಎಂಬ ಪದದ ತಾತ್ಪರ್ಯ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಶುಭಕೃತ್ ನಾಮ ಸಂವತ್ಸರ ವೈಶಾಖ - ಜ್ಯೇಷ್ಠ ಮಾಸ ಸಂಚಿಕೆ

ಸಂಪುಟ - 01 ಮೇ 2022 ಸಂಚಿಕೆ -10



**ಗೌರವ ಸಂಪಾದಕರು**
ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಶ್ರೀ ರಾಮಾನುಜರ ಮತ್ತು ಆಳ್ವಾರುಗಳ ಸಂಪೂರ್ಣ ಚರಿತ್ರೆಯೇ ಪ್ರಪನ್ನಾಮೃತ | -ಪಿ.ಜಿ.ಶ್ರೀನಿವಾಸನ್ | 7 |
| ಶ್ರೀ ಆದಿಶಂಕರಾಚಾರ್ಯರು | -ಹನುಮಂತ ಮ.ದೇಶಕುಲಕರ್ಣಿ | 9 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 11 |
| ಭಾಗವತ ವ್ಯಾಖ್ಯಾನಕಾರರು ಶ್ರೀ ವಿಜಯಧ್ವಜ ತೀರ್ಥರು | -ಶ್ರೀಧರ ರಾಯಸಂ | 13 |
| ಕರುಣೆಯ ದೈವ ಶ್ರೀ ಲಕ್ಷ್ಮೀನರಸಿಂಹ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 14 |
| ಬೆಂಡೆ ಪದಾರ್ಥವೊಂದೇ ಅಲ್ಲ | -ಡಿ.ಎಸ್. ಬದ್ರಿನಾಥ್ | 17 |
| ಪುಟ ಪುಟವೂ ಪ್ರೇರಣೆ (ಪುಸ್ತಕ ವಿಮರ್ಶೆ) | - | 19 |
| ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ | -ಡಾ॥ ಸುಭಾಸ ಕಾಖಂಡಕಿ | 22 |
| ನಾರದ ಮಹರ್ಷಿಗಳು ಭಕ್ತಿ ಮಾರ್ಗದ ಆದ್ಯಪ್ರವರ್ತಕರು | - ಪ್ರಣವ | 23 |
| ಜೀವದಾತೆ ಗಂಗಾಮಾತೆ | - ದೀಪಶ್ರೀ ಎಸ್ ಕೂಡ್ಲಿಗಿ | 31 |
| ತಿರುಮಲೆಯಲ್ಲಿ ರಾಮಾನುಜರು | - | 33 |
| 108 ವೈಷ್ಣವ ದಿವ್ಯಕ್ಷೇತ್ರಗಳು - ನಿಚುಳಾಪುರಿ | -ಶ್ರೀಮತಿ. ಸೂರ್ಯವಂಶಿ | 37 |
| ಕೂರ್ಮ ಅವತಾರ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 40 |
| ಅಕ್ಷಯ ತೃತೀಯ ವಿಶೇಷ ಲೇಖನ | -ಶ್ರೀಮತಿ. ಕೆ.ವಿ. ಲತಾ | 42 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 45 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ಹನುಮಂತನ ಜನ್ಮಸ್ಥಳ ತಿರುಮಲೆಯಲ್ಲಿನ ಅಂಜನಾದ್ರಿ ಪೌರಾಣಿಕ ಆಧಾರಗಳು | -ಶ್ರೀಮತಿ. ಬಿ. ಪದ್ಮಜ | 47 |
| ನೀತಿ ಕಥೆ - ಘಂಟನಾದವನ್ನು ಏಕೆ ಮಾಡುತ್ತೇವೆ? | - ಬಿ.ಆರ್.ಶ್ರೀಕಂಠಯ್ಯ | 51 |
| ಚಿತ್ರ ಕಥೆ -ಹನುಮಂತನ ಭಕ್ತಿ | - ಡಿ.ಶ್ರೀನಿವಾಸದೀಕ್ಷಿತರು | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರು
ಹಿಂಬದಿಚಿತ್ರ - ಅಂಜನಾದ್ರಿ ಹನುಮಂತನು

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಪವಿತ್ರವಾದ ಮಾಸವೇ ವೈಶಾಖಮಾಸ

ವೈಶಾಖ ಮಾಸವು ಅತ್ಯಂತ ಪವಿತ್ರವಾದ ಮಾಸವೆಂದು ಕರೆಯಲ್ಪಡುತ್ತಿದೆ ಏಕೆಂದರೆ ಮಾಸದಲ್ಲಿ ಅನೇಕ ಶುಭ ಘಳಿಗೆಗಳನ್ನು ನಾವು ಆಚರಿಸಬಹುದಾಗಿದೆ.

ಶ್ರೀಮನ್ನಾರಾಯಣನ ಅವತಾರಗಳ ಜಯಂತಿಯನ್ನು ಈ ತಿಂಗಳಿನಲ್ಲಿ ಆಚರಿಸುವಂತಹಾ ಸೌಭಾಗ್ಯ ಭಗವಂತನ ಭಕ್ತರಿಗೆ ಒದಗಿ ಬರಲಿದೆ. ವೈಶಾಖ ಶುದ್ಧ ತದಿಗೆಯಂದು ಅಕ್ಷಯ ತದಿಗೆಯ ದಿನವೇ ಪರಶುರಾಮ ಜಯಂತಿಯನ್ನು ಆಚರಿಸಲಾಗುತ್ತದೆ.

ಕ್ಷತ್ರಿಯರ ಕುಲವನ್ನು ನಾಶ ಮಾಡಿದ ಪರಶುರಾಮನ ತಂದೆಯ ಮಾತಿನಂತೆ ನಡೆದು ಹೆತ್ತತಾಯಿಯ ಶಿರವನ್ನೇ ಕಡಿದು ನ್ಯಾಯಪಾಲಕನಾದ ತಂದೆ ಜಮದಗ್ನಿ, ತಾಯಿ ರೇಣುಕಾದೇವಿಯ ನಾಲ್ಕನೆಯ ಮಗನಾಗಿ ಜನಿಸಿ ತನ್ನ ತಂದೆಯನ್ನು ವಿನಾಕಾರಣ ಕೊಂದ ಕ್ಷತ್ರಿಯನೊಬ್ಬನ ಮೇಲಿನ ಕೋಪದಿಂದಾಗಿ ಇಪ್ಪತ್ತೊಂದು ಬಾರಿ ಭೂ ಮಂಡಲವನ್ನು ಪ್ರದಕ್ಷಿಣೆ ಮಾಡಿ ಇಡೀ ಕ್ಷತ್ರಿಯ ಕುಲವನ್ನೇ ನಾಶಮಾಡಿದ ಯಾವ ಕ್ಷತ್ರಿಯನೋ, ದೈವ ಭಕ್ತನೋ ನೀತಿವಂತನೋ ಆತನನ್ನು ಬಿಟ್ಟು ಉಳಿದ ರಾಜರನ್ನು ನಾಶಮಾಡಿದ. ಹಾಗೆಯೇ ಅದರಿಂದ ತನಗೆ ಒದಗಿದ ಬ್ರಹ್ಮಹತ್ಯಾದೋಷವನ್ನು ಕಳೆದುಕೊಳ್ಳುವುದಕ್ಕಾಗಿ ತಪಸ್ಸನ್ನು ಆಚರಿಸಿ ಭೂದಾನವನ್ನು ಮಾಡಿದ. ದಕ್ಷಿಣ ಭಾರತದ ಅನೇಕ ಪ್ರದೇಶಗಳು ಇಂದಿಗೂ ಪರಶುರಾಮ ಕ್ಷೇತ್ರವೆಂದೇ ಕರೆಯಲ್ಪಡುತ್ತಿವೆ. ತ್ರೇತಾಯುಗದಲ್ಲಿ ರಾಮನ ಅವತಾರದೊಂದಿಗೆ ಪರಶುರಾಮನ ಅವತಾರವನ್ನು ನೋಡಬಹುದು ಒಂದೇ ಬಾರಿಗೆ ಇಬ್ಬರು ರಾಮರು ಅಂದರೆ ಭೃಗುರಾಮ ಮತ್ತು ರಘುರಾಮ ಭೇಟಿಯಾಗಿರುವುದನ್ನು ರಾಮಾಯಣದಲ್ಲಿ ನೋಡಬಹುದು. ಪರಶುರಾಮನು ಹುಟ್ಟಿದ ದಿನವೇ ಅಕ್ಷಯ ತದಿಗೆಯನ್ನು ಆಚರಿಸುತ್ತೇವೆ.ಆ ದಿನದಂದು ಬಂಗಾರವನ್ನು ಖರೀದಿಸಬೇಕೆಂಬ ನಿಯಮವನ್ನು ಹಲವರು ಆಚರಿಸುತ್ತಾರೆ.ಆದರೆ ಯಾವ ಪುರಾಣದಲ್ಲೂ ಅಥವಾ ಮತ್ತೆಲ್ಲೂ ಈ ಆಚಾರದ ಬಗೆಗಿನ ಖಚಿತವಾದ ವಿವರಣೆಗಳಿಲ್ಲ ಅಂದು ಶುಭಕರವಾದ ಅರಿಶಿನ, ಕುಂಕುಮ ಮೊದಲಾದ ಮಂಗಳ ದ್ರವ್ಯಗಳನ್ನು ಖರೀದಿಸುವುದು ಪ್ರತೀತಿ.

ಮಾನವತಾ ಸಮತಾಮೂರ್ತಿಯೆಂದೇ ಹೆಸರುವಾಸಿಯಾಗಿರುವ ಶ್ರೀರಾಮಾನುಜಾಚಾರ್ಯರ ಜಯಂತಿಯನ್ನು ವೈಶಾಖಮಾಸದಲ್ಲಿ ಆಚರಿಸಲಾಗುವುದು. ಆ ಸಮತಾಮೂರ್ತಿಯನ್ನು ಸ್ಮರಿಸುತ್ತಾ ಅವರ ಸಂದೇಶಗಳನ್ನು ಎಲ್ಲೆಡೆ ಹರಡಿ ಮಾನವರಲ್ಲಿ ಬೇರೂರಿರುವ ವೈಷಮ್ಯವನ್ನು ತೊಡೆದುಹಾಕೋಣ.

ಹಾಗೆಯೇ ಶ್ರೀಶಂಕರಾಚಾರ್ಯರ ಜಯಂತಿಯನ್ನು ಮೇ 6 ರಂದು ಆಚರಿಸಲಾಗುತ್ತದೆ. ಈ ಪವಿತ್ರವಾದ ಘಳಿಗೆಯಲ್ಲಿ ಶ್ರೀಶಂಕರಾಚಾರ್ಯರನ್ನು ನೆನೆದು ಅವರ ಆಧ್ಯಾತ್ಮಿಕ ಉಪದೇಶಗಳನ್ನು ಆಚರಿಸಿ ಧನ್ಯರಾಗೋಣ.

ವೈಶಾಖ ಶುದ್ದ ದಶಮಿಯಂದು ಶ್ರೀನಿವಾಸ ಪದ್ಮಾವತಿ ದೇವಿಯ ಪರಿಣಯಮಹೋತ್ಸವವನ್ನು ಆಚರಿಸಲಾಗುತ್ತದೆ. ಆ ದಿನದಂದೇ ಶ್ರೀನಿವಾಸನು ಪದ್ಮಾವತೀ ದೇವಿಯನ್ನು ವಿವಾಹವಾದನೆಂದು ಪುರಾಣಗಳು ತಿಳಿಸುತ್ತಿವೆ. ಅಂತಹಾ ದೇವದೇವಿಯರ ವಿವಾಹ ಮಹೋತ್ಸವವನ್ನು ತಿರುಮಲೆಯಲ್ಲಿ ಅತ್ಯಂತ ವೈಭವದಿಂದ ಆಚರಿಸುವುದು ವಾಡಿಕೆ.

ವೈಶಾಖ ಮಾಸದಲ್ಲಿ ಶ್ರೀಮನ್ನಾರಾಯಣನ ಮತ್ತೊಂದು ಅವತಾರವಾದ ಶ್ರೀನರಸಿಂಹಸ್ವಾಮಿಯ ಜಯಂತಿಯನ್ನೂ ವೈಭವದಿಂದ ಆಚರಿಸಲಾಗುತ್ತದೆ. ನರಸಿಂಹಸ್ವಾಮಿ ತನ್ನ ಪ್ರಿಯ ಭಕ್ತನಾದ ಪ್ರಹ್ಲಾದನನ್ನು ಕಾಪಾಡುತ್ತಾ ಅವನ ತಂದೆಯಾದ ಹಿರಣ್ಯಕಶಿಪುವಿನ ಕರುಳನ್ನು ಬಗೆದು ಭಕ್ತ ಜನರಿಗೆ ಶಾಂತಿಯುನ್ನುಂಟುಮಾಡಿ ಎಲ್ಲೆಡೆ ಧರ್ಮವನ್ನು ಉಳಿಸಿದ. ಅಂತಹಾ ಮಂಗಳಕರವಾದ ಶ್ರೀನರಸಿಂಹಸ್ವಾಮಿಯನ್ನು ಅರ್ಚಿಸಿ ಕೃತಾರ್ಥರಾಗೋಣ.

ವೈಶಾಖಮಾಸದಲ್ಲಿ ಶ್ರೀಮನ್ನಾರಾಯಣನ ಮತ್ತೊಂದು ಅವತಾರವಾದ ಕೂರ್ಮಜಯಂತಿಯನ್ನು ಅಂದೇ ಶ್ರೀನಿವಾಸನ ಪ್ರಿಯಭಕ್ತೆಯಾದ ತರಿಗೊಂಡ ವೆಂಗಮಾಂಬ ಜಯಂತಿಯನ್ನು ಆಚರಿಸಲಾಗುತ್ತದೆ. ಕೂರ್ಮಾವತಾರದಲ್ಲಿ ದೇವದೇವನು ದೇವತೆಗಳಿಗೆ ಅಮೃತವನ್ನು ಹಂಚಿ ಯಾವ ರೀತಿ ಜಗತ್ತಿನಲ್ಲಿ ಕೆಟ್ಟದ್ದಕ್ಕೆ ಉಳಿಗಾಲವಿಲ್ಲ ಎಂದು ಸಾರಿದನೋ ಅದೇ ರೀತಿ ನಾವೂ ಒಳ್ಳೆಯದನ್ನು ಬೆಳೆಸಿ ಕೆಡುಕನ್ನು ಅಳಿಸಿಹಾಕೋಣ.

**ಲೋಕಾಸಮಸ್ತಾ ಸುಖಿನೋ ಭವಂತು**

**ಗೋವಿಂದಾ-ಗೋವಿಂದಾ-ಗೋವಿಂದಾ !!**

# ಶ್ರೀ ರಾಮಾನುಜರ ಮತ್ತು ಆಳ್ವಾರುಗಳ ಸಂಪೂರ್ಣ ಚರಿತ್ರೆಯೇ ಪ್ರಪನ್ನಾಮೃತ



**- ಪಿ.ಜಿ. ಶ್ರೀನಿವಾಸನ್**

ಪ್ರಪನ್ನರಿಗೆ ಯಾವುದು ಅಮೃತಪ್ರಾಯವೋ ಅದು ಪ್ರಪನ್ನಾಮೃತ. ಶ್ರೀರಾಮಾನುಜರು ವಿಶಿಷ್ಟಾದ್ವೈತ ವೇದಾಂತವನ್ನು ವೇದ ಮತ್ತು ದ್ರಾವಿಡಾಮ್ನಾಯ ಉಭಯ ರೀತಿಯಲ್ಲಿ ಸಿದ್ಧಾಂತ ಮಾಡಿದ ಆಚಾರ್ಯರು ಶ್ರೀ ಭಾಷ್ಯ ಮತ್ತು ನಿತ್ಯ ಗ್ರಂಥಗಳೆಂಬ ಒಂಭತ್ತು ಗ್ರಂಥಗಳನ್ನು ರಚಿಸಿದರು.

ಶ್ರೀವೈಷ್ಣವ ಸಿದ್ಧಾಂತಕ್ಕೆ ನಿರ್ದಿಷ್ಟ ರೂಪ ನೀಡಿದ ರಾಮಾನುಜರು ದ್ರಾವಿಡಾಮ್ನಾಯವೆಂದು ಪ್ರಸಿದ್ಧವಾಗಿರುವ ನಾಲ್ಕು ಸಾವಿರ ಪಾಶುರಗಳನ್ನು ದಿವ್ಯ ದೇಶಗಳಲ್ಲಿ ಹಾಡಿ ಭಗವಂತನನ್ನು ಪೂಜಿಸಿದರು.

ಪ್ರಪನ್ನಾಮೃತ ಗ್ರಂಥವು ಸಂಸ್ಕೃತ ಸಂಶೋಧನಾ ಸಂಸತ್ತಿನಲ್ಲಿ ರಕ್ಷಿಸಲ್ಪಟ್ಟಿರುವ ಏಕೈಕ ಹಸ್ತ ಪ್ರತಿ, ಇನ್ನಾವುದೇ ಪ್ರಾಚೀನ ವಿದ್ಯಾ ಭಂಡಾರಗಳಲ್ಲಿ ಇದಕ್ಕೆ ಸರಿ ಹೊಂದುವ ಹಸ್ತಪ್ರತಿ ಲಭ್ಯವಿಲ್ಲ. ಇದರ ಕರ್ತೃ ರಾಯಸದ ಶ್ರೀವರದಾರ್ಯರು.

ಅಮೃತಂ ಯತ್ರಪನ್ನಾನಾಂ ತತ್ಪ್ರಪನ್ನಾನಾಂ ವಿದುಃ ಪ್ರಪನ್ನರಿಗೆ ಯಾವುದು ಅಮೃತಪ್ರಾಯವೋ ಅದು ಪ್ರಪನ್ನಾಮೃತ ಶ್ರೀರಾಮಾನುಜರ ವಿಶಿಷ್ಟಾದ್ವೈತ ವೇದಾಂತವನ್ನು ವೇದ ಮತ್ತು ದ್ರಾವಿಡಾಮ್ನಾಯ ಉಭಯ ರೀತಿಯಲ್ಲಿ ಸಿದ್ಧಾಂತ ಮಾಡಿದ ಆಚಾರ್ಯರು ಕಾಂಚೀಪೂರ್ಣರು, ಗೋಷ್ಠೀಪೂರ್ಣರು ಮತ್ತು ಮಹಾಪೂರ್ಣರು, ಶ್ರೀ ಶೈಲಪೂರ್ಣರು ಇವರುಗಳಿಂದ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಮತ್ತು ಅದರ ರಹಸ್ಯಗಳನ್ನು ತಿಳಿದರು. ಶ್ರೀರಾಮಾನುಜರು ಯಾಮುನಾಚಾರ್ಯರಲ್ಲಿ ಪ್ರತ್ಯಕ್ಷ ವ್ಯಾಸಂಗ ಮಾಡದಿದ್ದರೂ ಅವರನ್ನು ತಮ್ಮ ಗುರುಗಳೆಂದು ಸ್ವೀಕಾರ ಮಾಡಿ ಅವರ ಅಪೇಕ್ಷೆಯನ್ನು ಪೂರೈಸಿದರು. ಮೂಲತಃ ಪ್ರಪನ್ನಾಮೃತ ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದವರು, ಸಾಲಿಗ್ರಾಮದಲ್ಲಿದ್ದ ಶ್ರೀ ಅನಂತಾಚಾರ್ಯರು. ಈ ಗ್ರಂಥವು 100 ಆಶ್ವಾಸನೆಗಳನ್ನು ಹೊಂದಿದೆ. 53ನೇ ಆಶ್ವಾಸಕ್ಕೆ ರಾಮಾನುಜರ ಚರಿತ್ರೆ ಮುಕ್ತಾಯಗೊಳ್ಳುತ್ತದೆ. ಇನ್ನುಳಿದ 47 ಆಶ್ವಾಸಗಳು ಆಳ್ವಾರ್ ಚರಿತ್ರೆಗೆ ಮೀಸಲು.

ಆಳ್ವಾರ್ ಎನ್ನುವ ತಮಿಳು ಪದಕ್ಕೆ ಆಳವಾಗಿ ಮುಳುಗಿದವರು ಅಂದರೆ ಈ ಮಾತು ಭಗವದನುಭವವೆಂಬ ಸಮುದ್ರದಲ್ಲಿ ತಳವನ್ನು ಮುಟ್ಟಿದವರು ಎಂದರ್ಥ. ಈ ಮಾತು ಭಗವದನುಭವವನ್ನು ಪಡೆದು ಮೈಮರೆತ ಈ ಸಂತರಿಗೆ ಒಪ್ಪುವ ಮಾತು. ಇವರೆಲ್ಲರೂ ತಮಿಳುನಾಡಿನ ಪ್ರಾಚೀನ ಕಾಲದ ಭಕ್ತ ಶ್ರೇಷ್ಠರು, ಅನುಭಾವಿಗಳು, ಬೇರೆ ಬೇರೆ ಕಾಲದವರು, ಊರಿನವರು, ಬೇರೆ ಬೇರೆ ವೃತ್ತಿಗಳನ್ನು ಹಿಡಿದಿದ್ದವರು. ಇವರಿಗೆಲ್ಲಾ ಸಾಮಾನ್ಯವಾಗಿದ್ದ ಧರ್ಮವೆಂದರೆ ಅಚಲವಾದ ಗಾಢವಾದ ವಿಷ್ಣುಭಕ್ತಿ ಅದ್ಭುತವಾದ ಕವಿತಾ ಶಕ್ತಿ. ಇವರೆಲ್ಲಾ ತಮಿಳು ನಾಡಲ್ಲೆಲ್ಲಾ ತಿರುಗಾಡಿ, ಪ್ರಮುಖ ವಿಷ್ಣು ಕ್ಷೇತ್ರಗಳಲ್ಲಿ ಅಲ್ಲಿನ ಅರ್ಚಾಮೂರ್ತಿಗಳ ದರ್ಶನ ಮಾಡಿದಾಗ ತಮಗಾದ ಅನುಭವವನ್ನೂ, ಭಾವನೆಗಳನ್ನೂ, ಸರಳವಾದ ಮಾತಿನಲ್ಲಿ ನೇರವಾದ ಶೈಲಿನಲ್ಲಿ ಹಾಡಿದರು. ಇವರ ಹಾಡುಗಳಲ್ಲಿ, ಕ್ಷೇತ್ರ, ಉತ್ಸವ, ಪ್ರಕೃತಿ ವರ್ಣನೆ, ಅರ್ಚಾಮೂರ್ತಿಯ ವೈಭವ, ಭಕ್ತನ ಕಾತುರತೆ, ಭಗವಂತನ ಸಾಕ್ಷಾತ್ಕಾರದ ದಾರಿ, ಭಗವದನುಭವ ಜನಿತ ಆನಂದ, ಬಾಳಿಗೆ ಬೆಳಕನ್ನು ನೀಡುವ ಆಲೋಚನೆಗಳು, ಇರುವುದಲ್ಲದೇ ಇಡೀ ಮಾನವ ಸಮುದಾಯಕ್ಕೆ ಸರಿ ಹೊಂದಿಕೊಳ್ಳುವಂತಹ ಗುಣ ಕಾಣಬಹುದು.

ಆಳ್ವಾರರು ಎಲ್ಲ ವೇದಗಳ ಸಾರವನ್ನು ತಮ್ಮ ದಿವ್ಯ ಪ್ರಬಂಧಗಳ ಮೂಲಕ ಜನಸಾಮಾನ್ಯರಿಗೆ ತಲುಪುವಂತೆ ಪ್ರಸರಿಸಿದರು. ಇವರು ವಿಷ್ಣು ಭಕ್ತಿಯ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಿ ಭಕ್ತಿ ಪಂಥವನ್ನು ಅವಲಂಭಿಸಲು ಎಲ್ಲರೂ ಸಮಾನ ಅಧಿಕಾರಿಗಳೆಂದು ಅನೇಕ ರೀತಿಯಲ್ಲಿ ನಿರೂಪಿಸಿ ಭಕ್ತಿ ಸಿದ್ಧಾಂತ ಸ್ಥಾಪನೆಯಲ್ಲಿ ಅಗ್ರಮಾನ್ಯರಾದರು. ಇವರು ತಮ್ಮ ದಿವ್ಯ ಪ್ರಬಂಧಗಳಿಂದ ತಮಿಳು ಭಾಷೆಗೆ ಪಾವಿತ್ರ್ಯತೆಯನ್ನು ತಂದು ಕೊಟ್ಟಿದ್ದಲ್ಲದೆ, ತಮಿಳು ನಾಡಿಗೆ ಮಾತ್ರವಲ್ಲದೆ ಇಡೀ ಭಾರತಕ್ಕೆ ಭಕ್ತಿ ಪಂಥದ ಸ್ವರೂಪ ಬೆಳಗುವಂತೆ ಮಾಡಿದರು. ಇದಲ್ಲದೆ ಅವರ ಕಾಲದಲ್ಲಿ ದೇಶದಾದ್ಯಂತ ಆವರಿಸಿದ್ದ ಅವೈದಿಕ ಮತಗಳ ಪ್ರಲೋಭನೆಯಿಂದ ಜನರನ್ನು ವಿಮುಖಗೊಳಿಸಿ ಭಾರತದಲ್ಲೆಲ್ಲಾ ವಿಷ್ಣು ಭಕ್ತಿಮಯವಾದ ವಾತಾವರಣವನ್ನು ಸೃಜಿಸಿ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಆಳ್ವಾರರು ಭೂಲೋಕದ ಅರುಣೋದಯದ ಉಜ್ವಲ ನಕ್ಷತ್ರಗಳು.

ಆಳ್ವಾರರ ಕಾಲ ಮುಗಿಯುತ್ತಿದ್ದಂತೆ ವೈಷ್ಣವ ಭಕ್ತಿಯ ಇತಿಹಾಸದಲ್ಲಿ ಆಚಾರ್ಯರು ಅವತರಿಸಿದ್ದು ಒಂದು ಯೋಗಾಯೋಗವೆನ್ನಬಹುದು. ಮಧುರಕವಿ

ಆಳ್ವಾರರ ಸಮಕಾಲೀನರೆಂದು ಪರಿಗಣಿಸಲ್ಪಟ್ಟಿರುವ ಶ್ರೀನಾಥ ಮುನಿಗಳು ಆಚಾರ್ಯ ಪರಂಪರೆಗೆ ನಾಂದಿ ಹಾಡಿದರು. ಇದು ಮುಂದಿನ ಪ್ರತಿಭಾವಂತ ಆಚಾರ್ಯರುಗಳ ಅವತಾರಕ್ಕೆ ಸುಗಮ ದಾರಿಯಾಯಿತು.

ಶ್ರೀವೈಷ್ಣವ ಆಚಾರ್ಯ ಪರಂಪರೆಗೆ ಈಗ ದೊರಕುವ ಐತಿಹಾಸಿಕ ಆಧಾರಗಳ ಪ್ರಕಾರ ಆದಿ ಪ್ರವರ್ತಕರೆನಿಸಿದ ನಾಥಮುನಿಗಳಿಗೆ ಆಳ್ವಾರರ ಸಮಗ್ರ ಸಾಹಿತ್ಯ ದೊರಕದೆ ಹೋಯಿತು. ಇವರು ದಿವ್ಯ ಪ್ರಬಂಧವನ್ನು ದೊರಕಿಸಿದ ಬಗೆ ಕುತೂಹಲಕರವಾಗಿದೆ.ಒಂದು ಸಲ ತಿರುನಾರಾಯಣಪುರದ ನಿವಾಸಿಯಾಗಿದ್ದ ವಂಗಿಪುರಟ್ವಾಚಿಯಾರ್ ತಂಜಾವೂರು ಜಿಲ್ಲೆಯ ಕಾಟ್ಟುಮನ್ನಾರ್ ದೇವಾಲಯದಲ್ಲಿ 'ಆರಾವಮುದೇ' ಎಂಬ ಪ್ರಬಂಧವನ್ನು ಹಾಡಿದುದನ್ನು ಕೇಳಿ ಸ್ಫೂರ್ತಿ ಹೊಂದಿ ತಮ್ಮ ತಪಸ್ಸಿನ ಫಲವಾಗಿ ಮಧುರ ಕವಿ ಆಳ್ವಾರರ ವಂಶದವರಾದ ಪರಾಂಕುಶ ಮುನಿದಾಸ ಎಂಬುವವರಿಂದ 'ಕಣ್ಣಿನುಣ್ ಶಿರತ್ತಾಂಬಿನಾಲ್ ಎಂಬ ಪ್ರಬಂಧವನ್ನು ತಮ್ಮ ತಪಸ್ಸಿನ ಫಲವಾಗಿ ನಮ್ಮಳ್ವಾರರ ಅನುಗ್ರಹದಿಂದ ಮೊದಲು ಸಾವಿರ ಪ್ರಬಂಧಗಳನ್ನು ನಂತರ ಉಳಿದ ಪ್ರಬಂಧಗಳನ್ನು ಶೇಖರಿಸಿ ಶ್ರೀರಂಗದಲ್ಲಿ ತಿರುಮಂಗೈ ಆಳ್ವಾರರ ಕಾಲದಿಂದೀಚೆಗೆ ನಿಂತು ಹೋಗಿದ್ದ ತಿರುವಾರಾಧನ ಉತ್ಸವವನ್ನು ಮತ್ತೆ ಏರ್ಪಡಿಸಿ,ಎಲ್ಲ ಪ್ರಬಂಧಗಳಿಗೆ ರಾಗ ತಾಳಗಳನ್ನು ಗೊತ್ತು ಮಾಡಿ, ಹಾಡುವ ಕ್ರಮವನ್ನು ನಿರ್ಧರಿಸಿ,ಅವುಗಳನ್ನು ನರ್ತನಕ್ಕೂ ಅಳವಡಿಸಿ, ನಿರಂತರವಾಗಿ ಶ್ರೀರಂಗದಲ್ಲೂ, ಎಲ್ಲ ಶ್ರೀವೈಷ್ಣವ ದೇವಾಲಯಗಳಲ್ಲೂ ಇಂದಿಗೂ ನಡೆದು ಬರುವಂತೆ ವ್ಯವಸ್ಥೆ ಮಾಡಿದರು.



ಆಚಾರ್ಯ ಪರಂಪರೆಯಲ್ಲಿ ನಾಥಮುನಿಗಳ ನಂತರ ಯಮುನಾಚಾರ್ಯ ಮತ್ತು ಮಣವಾಳ ಮಹಾಮುನಿಗಳು, ಶ್ರೀವೈಷ್ಣವ ಸಿದ್ಧಾಂತ ಮತ್ತು ದಿವ್ಯ ಪ್ರಬಂಧಗಳಿಗೆ ಭದ್ರ ಬುನಾದಿ ಹಾಕಿದರು. ಯಾಮುನಾಚಾರ್ಯರು ಅದರ ಮೇಲೆ ಒಂದು ಭವ್ಯ ಮಂದಿರ ನಿರ್ಮಿಸಿದರು.ಇವರು ವಿಶಿಷ್ಟಾದ್ವೈತ ಸಂಪ್ರದಾಯವನ್ನು ಪುಷ್ಟಿಗೊಳಿಸಲು ಕಾರ್ಯೋನ್ಮುಖರಾಗಿ ಅದನ್ನು ಲೋಕಾದ್ಯಂತ ಬೆಳೆಸಬೇಕೆಂದು ಗುರಿ ಹೊಂದಿದ್ದರು. ತಮ್ಮ ವಾರ್ಧಕ್ಯದ ದೆಸೆಯಿಂದ ಇದನ್ನು ಮುಂದುವರೆಸುವ ಒಬ್ಬ ಮಹಾಪುರುಷನ ನಿರೀಕ್ಷೆಯಲ್ಲಿದ್ದರು.ಇದನ್ನು ಸಾಧಿಸಿದವರು ಶ್ರೀರಾಮಾನುಜಾಚಾರ್ಯರು ಇವರಿಗೂ ನಾಥಮುನಿಗಳಿಗೂ ನೆಂಟಸ್ತಿಕೆ ಉಂಟು ನಾಥಮುನಿಗಳ ಪೌತ್ರ ಯಾಮುನರ ಮೊಮ್ಮಗಳೇ ಶ್ರೀರಾಮಾನುಜರ ತಾಯಿ ಕಾಂತಿಮತಿ.

ವಿಶಿಷ್ಟಾದ್ವೈತ ದರ್ಶನ ಪ್ರವರ್ತಕರಾದ ಆಚಾರ್ಯ ರಾಮಾನುಜರ ಜೀವನ ಚರಿತ್ರೆಯನ್ನು ಕುರಿತಾದ ಮೊಟ್ಟ ಮೊದಲಿನ ಸಮಕಾಲೀನ ಸಂಸ್ಕೃತ ಗ್ರಂಥ "ಯತಿರಾಜ ವೈಭವಂ" ಅನ್ನು ರಚಿಸಿದವರು ಆಚಾರ್ಯರ ಕಾಲದ ಅವರ ಅಷ್ಟದಿಗ್ಗಜಗಳಲ್ಲಿ ಒಬ್ಬರಾದ ಆಂಧ್ರ ಪೂರ್ಣರೆಂಬ ವಡುಹನಂಬಿಗಳು, ಇವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರದಲ್ಲಿ ನೆಲೆಸಿದರು. ಸಾಲಿಗ್ರಾಮದಲ್ಲಿ ಈ ಸ್ಥಳವು ಆಚಾರ್ಯರ ಶ್ರೀಪಾದತೀರ್ಥದ ಕೊಳ ಮತ್ತು ದೇವಾಲಯಕ್ಕೆ ಪ್ರಸಿದ್ಧವಾಗಿದೆ. ಆಚಾರ್ಯರು ಸಾಲಿಗ್ರಾಮಕ್ಕೆ ಬಂದಾಗ ಆಂಧ್ರಪೂರ್ಣರು ಅವರ ಶಿಷ್ಯರಾಗಿ ಅವರು ಪರಮಪದಿಸುವವರೆಗೂ ಅವರೊಡನಿದ್ದು ಅವರ ಇಚ್ಛೆಯಂತೆ ಸಾಲಿಗ್ರಾಮಕ್ಕೆ ಹಿಂತಿರುಗಿದರು.

ಇತಿಹಾಸದ ದೃಷ್ಟಿಯಿಂದ ಯತಿರಾವೈಭವಂ 114 ಶ್ಲೋಕಗಳುಳ್ಳ ಆಚಾರ್ಯರ ಜೀವನ ಚರಿತ್ರೆಯ ಪ್ರಮುಖ ಘಟನೆಗಳನ್ನು ಚಿತ್ರಿಸಿರುವ ದಾಖಲೆಯಾಗಿದ್ದು ಆಚಾರ್ಯರ ಜೀವನ ಚರಿತ್ರೆ ಮತ್ತು ಸ್ತೋತ್ರಗಳಿಗೆ ದಾರಿದೀಪವಾದ ಆಕರ ಗ್ರಂಥವಾಗಿದೆ.ಆಚಾರ್ಯ ರಾಮಾನುಜರ ಜೀವನ ಚರಿತ್ರೆ ಸಂಬಂಧಪಟ್ಟ ಹಾಗೆ ಆಚಾರ್ಯರ ಜೀವಿತ ಕಾಲದಲ್ಲೇ ಅವರ ಹಾಗೂ ಕೂರೇಶನ ಶಿಷ್ಯರಾಗಿದ್ದ ತಿರುವರಂಗತ್ತ ಮುದನಾರ್ ಅವರನ್ನು ಕುರಿತಾದ 108 ತಮಿಳು ಪಾಶುರಗಳುಳ್ಳ 'ಇರಾಮಾನುಜ ನೂತ್ತಂದಾದಿ ' ಕೃತಿಯನ್ನು ರಚಿಸಿ , ಅದನ್ನು ಆಚಾರ್ಯರಿಗೆ ತೋರಿಸಿ ಒಪ್ಪಿಗೆ ಪಡೆದು ಬಿಡುಗಡೆ ಮಾಡಿದರು.


ಪ್ರಪನ್ನಾಮೃತ ಗ್ರಂಥವು ಆಗಿನ ಗ್ರಾಂಥಿಕ ಕನ್ನಡ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಇಡೀ ಗ್ರಂಥ ಹಳೆಗನ್ನಡದಲ್ಲಿ ಪ್ರಕಟವಾಗಿರುವುದರಿಂದ ಆಳ್ವಾರ್ ಆಚಾರ್ಯರ ಬಗೆಗಿನ ಜೀವನ ಹಾಗೂ ಅವರ ಕಾರ್ಯವ್ಯಾಪ್ತಿಯನ್ನು ಸವಿಸ್ತಾರವಾಗಿ ತಿಳಿಸಲಾಗಿದೆ ಗ್ರಾಂಥಿಕ ಕನ್ನಡದಲ್ಲಿ -

ಪಿಳ್ಳೈ ಲೋಕಾಚಾರ್ಯರ 'ಶ್ರೀ ವಚನಭೂಷಣಂ'
ಅಜ್ಞಾನತ್ತಾಲೇ ಪ್ರಪನ್ನರ್ ಅಸ್ಮದಾದಿಹಳ್,
ಜ್ಞಾನಾಧಿಕ್ಯತ್ತಾಲೇ ಪ್ರಪನ್ನರ್ ಪೂರ್ವಾಚಾರ್ಯರ್ ಹಳ್,
ಭಕ್ತಿಪಾರವಶ್ಯತ್ತಾಲೈ ಪ್ರಪನ್ನರ್ ಆಳ್ವಾರ್ಹಳ್ ॥43॥

# ಹಿಂದೂ ಧರ್ಮ
# ಪುನರುತ್ಥಾನಗೊಳಿಸಿದ ಆದಿ ಶಂಕರರು

– ಹನುಮಂತ.ಮ.ದೇಶಕುಲಕರ್ಣಿ

94803 64915



ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು (ಆದಿಶಂಕರರು) ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತವಾದ "ಅದ್ವೈತ" ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂಧೂ ಧರ್ಮವನ್ನು ಪುನರುತ್ಥಾನಗೊಳಿಸಿದರು. ಆದಿಶಂಕರರು ಭಗವದ್-ಗೀತೆ,ಉಪನಿಷತ್ ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು.



ಇವರು 8 ನೇ (ಕ್ರಿ.ಶ. 788) ಶತಮಾನದಲ್ಲಿ ಜನಿಸಿದರು ಎಂದು ನಂಬಲಾಗಿದೆ. ಇವರು ಹುಟ್ಟಿದ್ದು ಕೇರಳ ರಾಜ್ಯದ ಕಾಲಡಿ ಎಂಬ ಹಳ್ಳಿಯ ಒಂದು ಬಡ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ದಿನ ವಿಭವ ಸಂವತ್ಸರದ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮೀ ತಿಥಿಯಂದು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಆಧ್ಯಾತ್ಮಿಕತೆಯಲ್ಲಿ ಆಸಕ್ತಿ ತಳೆದ ಇವರು ಸನ್ಯಾಸತ್ವವನ್ನು ಸ್ವೀಕರಿಸುವತ್ತ ಒಲವು ತೋರಿದರು. ಆದರೆ ಒಬ್ಬನೇ ಮಗನಾಗಿದ್ದ ಶಂಕರರನ್ನು ಸನ್ಯಾಸಿಯಾಗಿ ನೋಡಲು ತಾಯಿಗೆ ಮನಸ್ಸಿರಲಿಲ್ಲ.

ಹಾಗಾಗಿ ತಾಯಿಯ ಮನವೊಲಿಸಲು ಶಂಕರರು ಬಹಳ ಕಷ್ಟಪಡಬೇಕಾಯಿತು. ಆಕೆಯ ಅಂತಿಮ ಕ್ಷಣಗಳಲ್ಲಿ ತಾನು ಎಲ್ಲಿದ್ದರೂ ಆಕೆಯ ಎದುರು ಬಂದು ನಿಲ್ಲುವುದಾಗಿ ಮಾತು ಕೊಟ್ಟ ಶಂಕರರು ಸೂಕ್ತ ಗುರುವಿಗಾಗಿ ಹುಡುಕುತ್ತಾ ತಮ್ಮ ಪಯಣವನ್ನಾರಂಭಿಸಿದರು. ತಾಯಿಗೆ ಕೊಟ್ಟ ಮಾತಿನ ಪ್ರಕಾರ ಆಕೆಯ ಕೊನೆಗಾಲದಲ್ಲಿ ಕಾಲಡಿಗೆ ಹಿಂದಿರುಗಿದ ಶಂಕರರು ಆಕೆಯ ಅಂತಿಮ ವಿಧಿಗಳನ್ನು ಪೂರೈಸಿದರು.

ಸಣ್ಣ ವಯಸ್ಸಿನಲ್ಲೇ ಕ್ರಾಂತಿಕಾರಕ ಚಿಂತನೆಯ ಮನೋಭಾವ ಬಾಲ ಶಂಕರರಲ್ಲಿ ಜಾಗೃತವಾಗಿದ್ದದನ್ನು ಅವರ ಬಗೆಗಿನ ಕತೆಗಳಲ್ಲಿ ಕಾಣುತ್ತೇವೆ. ಬ್ರಾಹ್ಮಣವಟುಗಳಲ್ಲಿ ಅಂದಿನ ದಿನಗಳಲ್ಲಿದ್ದ ಭಿಕ್ಷಾಧರ್ಮದ ಪ್ರಕಾರ ಇವರು ಮನೆ ಮನೆಗೆ ಹೋಗಿ "ಭವತಿ ಭಿಕ್ಷಾಂದೇಹಿ, ಭವಾನ್ ಭಿಕ್ಷಾಂ ದೇಹಿ"ಎನ್ನುವಾಗ ಒಬ್ಬ ಶ್ರೀಮಂತ ಧಾರಾಳವಾಗಿ ಕರೆದು ಎಲ್ಲರಿಗೂ ಹಂಚುತ್ತಿದ್ದ. ಆದರೆ ಬಾಲ ಶಂಕರರು ಆತನಲ್ಲಿ ಭಿಕ್ಷೆ ಪಡೆಯುವುದಕ್ಕೆ ಹತ್ತಿರ ಬರದೆ ದೂರದಿಂದ ನೋಡುತ್ತಿದ್ದರು. "ಬಾಪ್ಪಾ ಸ್ವೀಕರಿಸು ಬಾ" ಎಂದಾಗ, "ನೀನು ಅವಶ್ಯಕತೆಗಿಂತ ಹೆಚ್ಚು ಸಂಪತ್ತನ್ನು ಕೂಡಿಟ್ಟುಕೊಂಡಿದ್ದೀಯೆ, ನಾನು ನಿನ್ನ ಬಳಿ ಭಿಕ್ಷೆ ಸ್ವೀಕರಿಸಲು ನಿರಾಕರಿಸುತ್ತೇನೆ"ಎಂದು ಹೇಳಿದ ಅವರ ಚಿಂತನೆ ನಮ್ಮ ಮನಸ್ಸನ್ನು ಅತೀವವಾಗಿ ಸೆರೆ ಹಿಡಿದಿಡುತ್ತದೆ.

ನಮ್ಮಲ್ಲಿರುವ ಆತ್ಮವೇ ದೇವರಾಗಿರುವಾಗ ಎದುರಿಗೆ ಬಂದ ಚಾಂಡಾಲನನ್ನು ಕಂಡು ಮೈಲಿಗೆಯಾಗುತ್ತದೆ ಅತ್ತ ಸರಿ ಎಂದ ಅವರಿಗೆ ಕ್ಷಣದಲ್ಲೇ ತಪ್ಪಿನ ಅರಿವಾಗಿ ಆತನ ಕಾಲಿಗೆರಗಿ ಆತನೊಳಗೂ ಇರುವ ಶಿವ ಸ್ವರೂಪಿ ಭಗವಂತನನ್ನು ಕಾಣುವ ಶಂಕರರ ಆಧ್ಯಾತ್ಮದ ಅದ್ವೈತದ ಭಾವ ನಮ್ಮನ್ನು ಅತೀವವಾಗಿ ಮನಸೆಳೆಯುತ್ತವೆ. ನಾನು ನಾನಾವಿಕಲ್ಪಗಳಿಲ್ಲದವನು. ನಿರಾಕಾರನೂ ಎಲ್ಲ ಕಡೆ ಇರುವವನೂ ಆಗಿದ್ದೇನೇ ಎಲ್ಲ ಇಂದ್ರಿಯಗಳೊಡನೆ ಸಂಗತನೂ ನಾನಾಗಿದ್ದೇನೆ ನನಗೆ ಬಂಧವೂ ಇಲ್ಲ. ಮುಕ್ತಿಯೂ ಇಲ್ಲ. ಕೇವಲ ಆನಂದಸ್ವರೂಪನಾದ ಸದಾಶಿವನೇ ನಾನು.

ಶ್ರೀ ಶಂಕರರ ಮತ್ತೊಂದು ಪ್ರಸಿದ್ಧವಾದ "ಭಜಗೋವಿಂದಂ, ಭಜಗೋವಿಂದಂ, ಗೋವಿಂದಂ ಭಜಮೂಢಮತೆ, ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷಿತಿ ಕರಣೇ"



ಗೀತೆಯಂತೂ ನಾವು ಬದುಕುವ ರೀತಿಗೂ ನಮ್ಮ ಬದುಕಿನ ಮೂಲ ಪ್ರೇರಣೆಗಳಿಗೂ ಇರುವ ಅಜ ಗಜಾಂತರವನ್ನು ಸಾರ್ವಕಾಲಿಕವಾಗಿ ಕನ್ನಡಿ ಯಂತೆ ತೋರುವ ದಿವ್ಯದರ್ಶನವಾಗಿ ಕಣ್ಣೆದುರು ನಿಲ್ಲುತ್ತದೆ. ಈ ಸಾಲುಗಳನ್ನು ಶ್ರೀ ಶಂಕರರು ಒಂದು ಹಳ್ಳಿಯಲ್ಲಿ ಹಾದು ಹೋಗುತ್ತಾ ಓರ್ವ ವೃದ್ಧನು ವ್ಯಾಕರಣ ಸೂತ್ರ ಬಾಯಿಂದ ಪಾಠ ಮಾಡುವುದನ್ನು ಕಂಡು ಅವನ ಮೇಲೆ ಕನಿಕರಿಸಿ ಬರೆದರಂತೆ. ಸಾಯುವ ಹೊತ್ತಿನಲ್ಲಿ ಈ ಮುದುಕ ವ್ಯಾಕರಣ ಸೂತ್ರ ಬಡಬಡಿಸುವುದನ್ನು ಕಂಡು ಅವರಿಗೆ ಕರುಣೆಯುಂಟಾಯಿತು. ಬಾಳೆಲ್ಲಾ ಕಳೆದು ಆಗಿದೆ. ಈಗ ಕಡೆಯ ಕ್ಷಣ ವನ್ನೂ ಸಹಾ ಈತ ಕಳೆದುಕೊಳ್ಳುತ್ತಿರುವನು. ಪರಮಾತ್ಮನನ್ನು ಸ್ಮರಿಸದೆ ಜೀವನವೆಲ್ಲಾ ಗತಿ ಸಿತು.ಇನ್ನೂ ಇವನು ವ್ಯಾಕರಣ. ಸೂತ್ರವನ್ನು ಬಿಡುತ್ತಿಲ್ಲ. ಒಟಗುಟ್ಟುತ್ತಿರುವನು. ಈ ಸೂತ್ರ ಗಳಿಂದೇನು ಆಗಬೇಕಾಗಿದೆ? ಹೀಗೆ ಸುಂದರ ವಾಗಿ ಸಾಗುತ್ತದೆ ಶಂಕರರ ಬದುಕಿನ ಸೌಂದರ್ಯ ದೃಷ್ಟಿ.

ನರ್ಮದಾ ನದಿ ತೀರದಲ್ಲಿ ಗೋವಿಂದ ಭಗ ವತ್ಪಾದರನ್ನು ಭೇಟಿಯಾದ ಶಂಕರರು ಅವರನ್ನು ತನ್ನ ಗುರುಗಳನ್ನಾಗಿ ಸ್ವೀಕರಿಸಿದರು. ಅವರಿಂದ ಯೋಗ, ವೇದ, ಉಪನಿಷತ್, ವೇದಾಂತಗಳನ್ನು ಅಭ್ಯಾಸ ಮಾಡಿದ ನಂತರ ಕಾಶಿಗೆ ತೆರಳಿ ಅಲ್ಲಿ ಕೆಲವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡು ಅವರಿಗೂ ವೇದಾಂತದ ಪಾಠ ಹೇಳಿಕೊಟ್ಟರು.

ಶಂಕರರಿಗೆ ತಮ್ಮ ಚಿಂತನೆಯಲ್ಲಿ ಸ್ಪಷ್ಟತೆ ಇತ್ತು. ದೇಶದ ಮೂಲೆ ಮೂಲೆಗಳಲ್ಲಿ ಸಂಚರಿ ಸಿದ ಶಂಕರರ ವ್ಯಕ್ತಿತ್ವಕ್ಕೆ ತಮ್ಮ ವಿಚಾರ ಮಂಡನೆ ಯಲ್ಲಿ ಕೇಳುಗನನ್ನು ನೇರ ಒಳಹೊಕ್ಕುವ ಖಚಿತತೆ ಇತ್ತು.ಬುದ್ಧನ ಜೀವನದಲ್ಲೂ ತಾವು ಕಾಣು ವಂತಹ ಎಲ್ಲವನ್ನೂ ಸ್ಫಟಿಕದಂತೆ ನೇರವಾಗಿ ಖಚಿತವಾಗಿ ಕಾಣುವ ಶಕ್ತಿಯದು ಇದನ್ನು ಅಂದಿನ ಸಮಸ್ತ ಭಾರತವೂ ಕಾಣಲೂ ಸಾಧ್ಯವಾಯಿತೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಮಂಡನ ಮಿಶ್ರರಂತಹ ತೇಜಸ್ವೀ ಬ್ರಹ್ಮಜ್ಞಾನಿಗಳೇ ಶ್ರೀಸುರೇಶ್ವರಾಚಾರ್ಯ ಎಂಬ ಹೆಸರಿನಿಂದ ಪ್ರಸಿದ್ಧರಾದ ಶಂಕರರ ಶಿಷ್ಯರಾದರು. ಶಂಕರರು ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ, ಪ್ರತಿಯೊಂದು ಪೀಠಕ್ಕೂ ತಮ್ಮ ಒಬ್ಬೊಬ್ಬ ಶಿಷ್ಯರನ್ನು ಪೀಠಾಧಿಪತಿಯನ್ನಾಗಿಸಿದರು. ಹೀಗೆ ''ಅದ್ವೈತ'' ಸಿದ್ಧಾಂತವನ್ನು ಜನಪ್ರಿಯಗೊಳಿಸಿದರು.

ಬುದ್ಧಿವಂತಿಕೆಯ ತರ್ಕ ವಾದಗಳನ್ನೇ ಬಂಡವಾಳ ಮಾಡಿಕೊಂಡು,ಮತ್ತೊಬ್ಬರನ್ನು ಹೀಯಾಳಿ ಸುತ್ತಾ, ಮುಗ್ಧ ಜನರನ್ನು ಶೋಷಿಸುತ್ತಾ ತಾವೇ ಭಗವಂತನ ಅಪರಾವತಾರ ಎಂದು ಕೊಳ್ಳುವ ಜನ ಈ ಕಾಲದಲ್ಲಿ ಹೇಗಿದ್ದಾರೋ ಅಂದೂ ಇದ್ದರು. ಆದರೆ ಶಂಕರರ ದಿವ್ಯತೇಜಸ್ಸಿನ ಮುಂದೆ ಅವರೆಲ್ಲರೂ ಸೋಲು ಕಾಣಬೇಕಾಯಿತು. ಹೀಗೆ ಹಲವಾರು ಪಂಡಿತರನ್ನೂ ಶಾಸ್ತ್ರವೇತ್ತರನ್ನೂ ಜಯಿಸಿ, ಶಂಕರರು ಸರ್ವಜ್ಞಪೀಠವನ್ನೇರಿದರು. ಭಾರತದ ದಕ್ಷಿಣದಲ್ಲಿ ವಾದ ಮಾಡಿ ತಮ್ಮನ್ನು ಜಯಿಸುವವರೇ ಇಲ್ಲವೆಂದು ಹೀಗಳೆದು ಶಾರದೆಯ ದೇಗುಲದ ದಕ್ಷಿಣದ ಬಾಗಿಲನ್ನು ಮುಚ್ಚಿಸಿದ್ದ ಕಾಶ್ಮೀರದ ಪಂಡಿತರ ಬಾಯಿ ಮುಚ್ಚಿಸಿದರು.ಕಾಶ್ಮೀರಪುರವಾಸಿನಿ ಶಾರದೆಯ ದೇಗುಲದ ದಕ್ಷಿಣದ್ವಾರವನ್ನೂ, ಅದರೊಂದಿಗೆ ದುರ ಹಂಕಾರಿ ಔತ್ತರೇಯರ ಕಣ್ಣನ್ನೂ ತೆರೆಸಿದ ಮಹನೀಯರಾದರು.

ಉತ್ತರದಲ್ಲಿ ಬದರಿಪೀಠ, ಉತ್ತರಾಮ್ನಾಯ ಜ್ಯೋತಿರ್ ಮಠ : ದಕ್ಷಿಣದಲ್ಲಿ ಶೃಂಗೇರಿಪೀಠ - ದಕ್ಷಿಣಾಮ್ನಾಯ ಶಾರದಾ ಮಠ ಪೂರ್ವದಲ್ಲಿ ಪುರಿಪೀಠ-ಪೂರ್ವಾಮ್ನಾಯ ಗೋವರ್ಧನ ಮಠ ಪಶ್ಚಿಮದಲ್ಲಿ ದ್ವಾರಕಾಪೀಠ - ಪಶ್ಚಿಮಾಮ್ನಾಯ ಮಠ ಈ ನಾಲ್ಕೂ ಮಠಗಳು ಇಂದಿಗೂ ತಮ್ಮ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ. ಶಂಕರರು ಬಾದರಾಯಣರ ''ಬ್ರಹ್ಮಸೂತ್ರ'' (ವೇದಾಂತಸೂತ್ರ)ಗಳಿಗೆ ಭಾಷ್ಯವನ್ನು ರಚಿಸಿದರು. ಉಪನಿಷತ್ತುಗಳಿಗೆ ವ್ಯಾಖ್ಯಾನ ನೀಡಿದರು. ಅಲ್ಲದೆ ಶ್ರೀಮದ್ಭಗವದ್ಗೀತೆಗೆ ಭಾಷ್ಯವನ್ನು ಬರೆದು ಪ್ರಸ್ಥಾನತ್ರಯಗಳನ್ನು ಪೂರ್ಣಗೊಳಿಸಿದರು.'ಭಜ ಗೋವಿಂದಮ್' 'ಸೌಂದರ್ಯಲಹರಿ' ಮುಂತಾದ ಹಲವಾರು ಸೊಗಸಾದ ಸ್ತೋತ್ರಗಳನ್ನು ಕೂಡಾ ಶಂಕರರು ರಚಿಸಿದ್ದಾರೆ.

ತಾಯಿಗೆ ಕೊಟ್ಟ ಮಾತಿನ ಪ್ರಕಾರ ಆಕೆಯ ಕೊನೆಗಾಲದಲ್ಲಿ ಕಾಲಟಿಗೆ ಹಿಂದಿರುಗಿದ ಶಂಕರರು ಆಕೆಯ ಅಂತಿಮ ವಿಧಿಗಳನ್ನು ಪೂರೈಸಿದರು.ತಮ್ಮ ಮೂವತ್ತೆರಡನೇ ವಯಸ್ಸಿನಲ್ಲಿ ಶಂಕರರು ಬ್ರಹ್ಮೈಕ್ಯ ರಾದರು.

ಸಂಸ್ಕೃತದಲ್ಲಿ ''ದ್ವಿ'' ಎಂದರೆ ಎರಡು ಎಂದರ್ಥ ಹಾಗಾಗಿ ''ಅ+ದ್ವೈತ'' ಅಂದರೆ '' ಎರಡಲ್ಲದ್ದು'' ಎಂದು ಅರ್ಥೈಸಬಹುದು. ಅದ್ವೈತ ಸಿದ್ಧಾಂತದ ಮೂಲ ಸಾರವೇ ಇದು. ''ಆತ್ಮ'' ಮತ್ತು ''ಪರಮಾತ್ಮ'' ಎಂಬುದು ಎರಡು ಬೇರೆ ಬೇರೆ ಅಂಶಗಳಲ್ಲ. ಇರುವುದು ಒಂದೇ ಆತ್ಮನೇ ಪರಮಾತ್ಮ(ದೇವರು). ಪರಮಾತ್ಮನೇ ಆತ್ಮ ''ಅಹಂ ಬ್ರಹ್ಮಾಸ್ಮಿ'' (ನನ್ನೊಳಿರುವ ಆತ್ಮವೇ ಪರಬ್ರಹ್ಮ) ''ತತ್ ತ್ವಮ್ ಆಸಿ''(ನೀನು ಅದೇ ಆತ್ಮದಿಂದ ಆಗಿರುವೆ) ಎಂಬುದು ಅದ್ವೈತ ತತ್ವದ ಮೂಲ ಮಂತ್ರ. ಆದಿ ಶಂಕರಾಚಾರ್ಯರು ಪರಮಾತ್ಮ ಅಂದರೆ ''ಆತ್ಮ', ಅದು ಮಾತ್ರ ಸತ್ಯ, ಈ ಜಗತ್ತಿನಲ್ಲಿ ಮಿಕ್ಕೆಲ್ಲವೂ ಮಿಥ್ಯ ಹಾಗೂ ''ಸರ್ವಂ ಬ್ರಹ್ಮಮಯಂ ಜಗತ್''(ಈ ಜಗತ್ತಿನಲ್ಲಿ ಎಲ್ಲವೂ ಪರಮಾತ್ಮನಿಂದಲೇ ಆವರಿಸಲ್ಪಟ್ಟಿದೆ) ಎಂಬುದಾಗಿ ಜಗತ್ತಿಗೆ ತಿಳಿಯುವಂತೆ ವಿವರಿಸಿದರು.



ಅಂಕಣ : 3

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ


- ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ

8059436752


**ಹಿಂದಿನ ಸಂಚಿಕೆಯಲ್ಲಿ...**

ಹರಿನಾಮಸ್ಮರಣೆಯಲ್ಲಿ ನಮ್ಮ ಆತ್ಮ ಉದ್ಧಾರವಾಗುವುದರ ಜೊತೆ ಕರ್ಮ ಬಂಧಕಗಳ ಕಡಿಮೆಯಾಗಿ ಮೋಚಕಪ್ರದನಾದ ಶ್ರೀಹರಿ ತಾಯಿಯಂತೆ ಸದಾ ನಮ್ಮ ಜೊತೆಯಿದ್ದು ಸಲಹುತ್ತಾನೆ. ತ್ರಿವಿಧ ಜೀವರಿಗೆ ಇದೊಂದು ಸಾಧನಾ ಮಾರ್ಗವಾಗಿದೆ.ನಿತ್ಯದಲ್ಲಿ ಯಾರ್‍ಯಾರನೋ ಹೊಗುಳಿ ನಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುತ್ತೇವೆ. ಇದರಲ್ಲಿ ಸ್ವಾರ್ಥತೆ ಅಡಗಿರುತ್ತದೆ. ಅದೇ ನಾವು ದಿನದಲ್ಲಿ ಕೆಲವು ಕ್ಷಣವಾದರೂ ಭಗವಂತನ ಸ್ಮರಣೆಯಲ್ಲಿ ಕಾಲ ಕಳೆದರೆ,ನಮ್ಜೋತೆಯಿದ್ದು ನಮ್ಮನ್ನು ಕೃಪೆಯಿಂದ ಕಾಪಾಡುತ್ತಾನೆ. ಶಾಸ್ತ್ರನುಭವದಿಂದ ಅಪರೋಕ್ಷವಾದ ನಂತರದಲ್ಲಿ ಆದ ಅನುಭವದಿಂದ ರಚನೆ ಮಾಡಿದ ಗ್ರಂಥವಾದ್ದರಿಂದ ಇದನ್ನು ಅಶ್ರುತ ಆಗಮವಾಗಿದೆ.

**ಮುಂದುವರಿದ ಭಾಗ....**

**ಹರಿಕಥಾಮೃತ ಸಾರದ ವಿಶೇಷತೆ :**

೧) ಕೇಶವಾದಿ ನಾಮಗಳು ೨೪ (ಕೇಶವ,ನಾರಾಯಣ, ಮಾಧವ,ಗೋವಿಂದ,ವಿಷ್ಣು,ಮಧುಸೂದನ,ತ್ರಿವಿಕ್ರಮ, ವಾಮನ, ಶ್ರೀಧರ. ಹೃಷಿಕೇಶ, ಪದ್ಮನಾಭ,ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ ಅಧ್ಯೋಕ್ಷಜ, ನಾರಸಿಂಹ,ಅಚ್ಯುತ, ಜನಾರ್ಧನ ಪರಶುರಾಮ, ಹರಿ, ಕೃಷ್ಣ ಮತ್ತು ೮ ವಿಶ್ವಾದಿ ಮೂರ್ತಿಗಳು (ವಿಶ್ವ.ತೈಜಸ, ಪ್ರಾಜ್ಞ, ತುರ್ಯ, ಆತ್ಮ.ಅಂತರಾತ್ಮ, ಪರಮಾತ್ಮ)

೨) ಭಗವಂತ ೩೨ ಲಕ್ಷಗಳಿಂದ ಯುಕ್ತನು. ಅಂತೆಯೇ ಹರಿಕಥಾಮೃತಸಾರವು ೩೨ ಸಂಧಿಗಳು.

ಶ್ರೀ ಹರಿಯ ರೂಪವನ್ನು ೩೨ ಲಕ್ಷಣಗಳಿಂದ ಚಿಂತಿಸಬೇಕು.

ಭುಜ,ನೇತ್ರ,ಗದ್ದ ತೊಡೆ, ನಾಸಿಕ (ಭಗವಂತನ ನಾಸಿಕ ಧೀರ್ಘವಾಗಿರುತ್ತದೆ.)

5 ಲಕ್ಷಣಗಳು:

ತೊಗಲು, ಕೂದಲು, ಬೆರಳು, ಹಲ್ಲು ಬೆರಳುಗಳಲ್ಲಿರುವ ರೇಖೆ ಸೂಕ್ಷ್ಮವಾಗಿವೆ. ೫ ಲಕ್ಷಣಗಳು. ಕಣ್ಣಿನ ಅಂಚು,ಉಗುರು, ಅಂಗೈ,ಅಂಗಾಲು,ತಾಲು (ನಾಲಿಗೆಯ ಮೇಲಿನ ಭಾಗ), ನಾಲಿಗೆ, ಕಳೆದುಟಿ ಕೆಂಪಾಗಿವೆ ೭ ಲಕ್ಷಣಗಳು.

ಕಕ್ಷ,ಕುಕ್ಷಿ, ವಕ್ಷಸ್ಸು,ಮೂಗು, ಹೆಗಲು, ಹಣೆ ಉನ್ನತವಾಗಿವೆ. ೬ ಲಕ್ಷಣಗಳು.

ಹಣೆ, ಸೊಂಟ,ಎದೆ ವಿಶಾಲವಾಗಿದೆ. ೩ ಲಕ್ಷಣಗಳು,

ಕುತ್ತಿಗೆ,ಜನನೇಂದ್ರಿಯ ಬೆನ್ನು, ಹ್ರಸ್ವವಾಗಿವೆ.೩ ಲಕ್ಷಣಗಳು ಸ್ವರ, ಶಕ್ತಿ ನಾಭಿ ಗಂಭೀರವಾಗಿವೆ.

**೩ ಲಕ್ಷಣಗಳು:**

ಹೀಗೆ ಎಲ್ಲ ಲಕ್ಷಣಗಳು ಕೂಡಿಸಿದಾಗ ೩೨ ಲಕ್ಷಣಗಳಾಗುತ್ತದೆ.ಇವೆಲ್ಲವೂ ಭಗವಂತನ ಚಿಂತನೆಯ ರೂಪ.

“ಹರಿ” ಎಂದರೆ “ನಾರಾಯಣ” “ಹರಿಕಥಾ ” ಎಂದರೆ ಹರಿಯ ವರ್ಣನೆ ಮಾಡುವ ವೇದ ಉಪನಿಷತ್ತುಗಳ ಅಭಿಮಾನಿ ದೇವಿ ರಮಾದೇವಿ, ಭಗವಂತನನ್ನು ನಿತ್ಯ ನೂತನವಾಗಿ ಅನುದಿನ ಕ್ಷಣವು ಹಾಡಿ ಹಿಗ್ಗುತ ನಲಿಯುವಳು.‘ಅಮೃತ’ ಎಂದರೆ ವಾಯುದೇವರು.೩೨ ಲಕ್ಷಣಗಳ ಯುಕ್ತನಾದ ಶ್ರೀ ಹರಿಯ ತರುವಾಯ ಅಂದರೆ ವಾಯುದೇವರು.

ತತ್ವಾಭಿಮಾನಿ ದೇವತೆಗಳು, ಜನಿಸಿದ ಚೇತನಜಗತ್ತು, ಈ ಜೀವ ಕೋಟಿಯ ವಿಚಾರ ಇಲ್ಲಿ ಹೇಳಲಾಗಿದೆ.

ಇದರಲ್ಲಿ ಶ್ರೀ ಹರಿಯ ಅನಂತ ಕಲ್ಯಾಣಗುಣ ಪರಿಪೂರ್ಣತ್ವ, ಅದರ ಅಂಗವಾಗಿ ಪಂಚಭೇದ ದೇವ ದೈತ್ಯ ತಾರತಮ್ಯ, ಬಿಂಬೋಪಾಸನೆ, ಮೋಕ್ಷ ಸಾಧನೆಯ ವಿವರಗಳು, ಭಕ್ತಿಯ ಮಹತ್ವ ಉಪಾಸನೆಯು ರೀತಿ ಮೊದಲಾದ ಪ್ರಮುಖ ತತ್ವಗಳನ್ನೆಲ್ಲಾ ಹೇಳಲಾಗಿದೆ.

ಶ್ರೀ ಹರಿಯ ಧ್ಯಾನದ ಅಮೃತಪಾನವನ್ನು ಸದಾ ಮಾಡುತ್ತಿದ್ದರೆ ನಿತ್ಯ ನೈಮಿತ್ತಿಕ ಮೊದಲಾದ ಕರ್ಮಭಾದೆಗಳು ತಟ್ಟುವುದಿಲ್ಲ. ಈ ಗ್ರಂಥದ ಸಾರವೆಂದರೆ ಧರ್ಮ, ಅರ್ಥ, ಕಾಮಗಳೆಂಬ ತ್ರಿವಿಧ ಪುರುಷಾರ್ಥಗಳನ್ನು ಅಪೇಕ್ಷಿಸದೇ ಶ್ರೀಹರಿಯ ಭಕ್ತಿ ಭಾಗ್ಯವನ್ನು ಪಡೆದವನೇ ಜೀವನ್ಮುಕ್ತನು. ಇಂತಹ ಭಾಗ್ಯ ಎಲ್ಲರಿಗೂ ದೊರೆಯುವುದಿಲ್ಲ.

ಮುಮುಕ್ಷುಗಳಾದ ಜೀವರು ಪರಮಾತ್ಮನ ಸಾಕ್ಷಾತ್ಕಾರವಾಗಬೇಕಾದರೆ ಭಗವಂತನ ಬಿಂಬೋಪಾಸನೆಯನ್ನು ಮಾಡಲೇಬೇಕು. ಈ ಬಿಂಬರೂಪನೇ ಶ್ರೀಹರಿ. ಭಗವಂತ ನಿರ್ಗುಣ ಸುಗಣ, ಅಕ್ಷರ ಪ್ರತಿಪಾದ್ಯ, ಅಪೌರುಷೇಯ ದೋಷ ವಿದೂರ. ಸಕಲ ಜಗದನಿಯಾಮಕ ಸಕಲೇಷ್ಟ ಪ್ರದಾಯಕ ಶ್ರೀಹರಿ.

ಹರಿಕಥಾಮೃತಸಾರ ಗ್ರಂಥವು ನಿಜಕ್ಕೂ ಒಂದು ಮಂಗಳ ಕೃತಿಯಾಗಿದೆ. ಸುಲಭ ಹಾಗೂ ಸರಳವೆಂದನಿಸಿದರೂ. ಇದರಲ್ಲಿ ಅಡಗಿರುವ ಒಳ ಅರ್ಥವು ಅಷ್ಟೇ ಕಠಿಣವಾಗಿದೆ.

ಸಾಮಾನ್ಯವಾಗಿ ಜನರು ಈ ಕೃತಿಯ ಭಾವಾರ್ಥವನ್ನು ತಿಳಿದುಕೊಂಡು ಓದಿ, ಆಳವಾಗಿ ಅಧ್ಯಯನ ಮಾಡಿದರೆ, ಒಂದು ಸಾತ್ವಿಕ ಭಾವ ಹುಟ್ಟುತ್ತದೆ. ಹರಿಕಥಾಮೃತಸಾರವು ನಿತ್ಯ ಅರ್ಥೈಸಿ ಪಠಣ ಮಾಡುತ್ತಿದ್ದರೆ ಹೃದಯ ಕಮಲದಲ್ಲಿ ಬಿಂಬ ರೂಪಿ ಭಗವಂತ ವಿರಾಜಮಾನನಾಗುತ್ತಾನೆ. ಚಿಂತನ- ಮಂಥನ ಮಾಡಿದರೆ ಭವರೋಗಹರ, ಮುಕ್ತಿ ಪ್ರದಾಯಕವಾಗುತ್ತದೆ. ಇದೊಂದು ಆಧ್ಯಾತ್ಮ ಶಾಸ್ತ್ರದ ಮೋಕ್ಷಶಾಸ್ತ್ರ ಎಂದು ಹೇಳಬಹುದು.

"ಪರಮಾತ್ಮ - ಜೀವಾತ್ಮರ ಸಂಬಂಧ" ಅಂದರೆ ಬಿಂಬ ಪ್ರತಿಬಿಂಬಗಳ ಅರ್ಥದ ಬಗ್ಗೆ ಹೇಳಿದ್ದಾರೆ. ಶ್ರೀಜಗನ್ನಾಥದಾಸರು ಈ ಕೃತಿಯಲ್ಲಿ ಭಗವಂತನ ಪಾದಗಳಿಗೆ ಶರಣಾಗುವುದು ಬಿಟ್ಟರೆ ನಮಗೆ ಬೇರೆ ಮಾರ್ಗವಿಲ್ಲವೆಂದು ಹೇಳಿದ್ದಾರೆ.

ಇಂತಹ ಶ್ರೇಷ್ಟ ಹರಿಕಥಾಮೃತಸಾರದ ೩೨ ಸಂಧಿಗಳ ಹೆಸರು ಮಂಗಳಾಚರಣಸಂಧಿ,ಕರುಣಾಸಂಧಿ,ವ್ಯಾಪ್ತಿಸಂಧಿ, ಭೋಜನ ರಸ ವಿಭಾಗ ಸಂಧಿ, ವಿಭೂತಿ ಸಂಧಿ.

ಪಂಚಮಹಾಯಜ್ಞ ಸಂಧಿ,ಪಂಚ ತನ್ಮಾತ್ರ ಸಂಧಿ, ಮಾತೃಕಾ ಸಂಧಿ , ವರ್ಣ ಪ್ರಕ್ರಿಯಾ ಸಂಧಿ, ಸರ್ವಪ್ರತಿಕ ಸಂಧಿ, ಧ್ಯಾನ ಪ್ರಕ್ರಿಯಾ ಸಂಧಿ.ನಾಡಿ ಪ್ರಕರಣ ಸಂಧಿ, ನಾಮಸ್ಮರಣ ಸಂಧಿ, ಪಿತೃಗಣ ಸಂಧಿ, ಶ್ವಾಸ ಸಂಧಿ, ಸ್ವಾಗತ ಸ್ವಾತಂತ್ರ್ಯ ಸಂಧಿ, ದತ್ತ ಸ್ವಾತಂತ್ರ್ಯ ಸಂಧಿ,ಕರ್ಮ ವಿಮೋಚನ ಸಂಧಿ ಗುಣಾ ತಾರ ತಮ್ಯ ಸಂಧಿ,ಬೃಹತ್ತಾರತಮ್ಯ ಸಂಧಿ, ಭಕ್ತಾಪರಾಧ ಸಹಿಷ್ಣು ಸಂಧಿ,ಕಲ್ಪಸಾಧನ ಸಂಧಿ ಬಿಂಬಾ ಪರೋಕ್ಷ ಸಂಧಿ, ಆರೋಹಣ ತಾರತಮ್ಯ ಸಂಧಿ, ಅವರೋಹಣ ಸಂಧಿ, ಅನುಕ್ರಮಣಿಕಾ ಸಂಧಿ, ವಿಷ್ಣೇಶ್ವರ ಸಂಧಿ, ಅಣುತಾರತಮ್ಯ ಸಂಧಿ, ದೈತ್ಯ ತಾರತಮ್ಯ, ಸಂಧಿ ನೈವೇದ್ಯ ಪ್ರಕರಣ ಸಂಧಿ ದೇವತಾ ತಾರತಮ್ಯ ಸಂಧಿ.

ಈ ಮೇಲಿನ ಎಲ್ಲ ಸಂಧಿಗಳ ಸಾರ ಭಗವಂತನ ಸರ್ವೋತ್ತಮತತ್ವವನ್ನು ಸಾರುತ್ತದೆ. ಒಂದೊಂದು ಸಂಧಿಗೂ ಫಲವುಂಟು.

ಈ ಗ್ರಂಥವು ಶ್ರೀ ವ್ಯಾಸರಾಜರು. ಶ್ರೀಪುರಂದರದಾಸರು, ಶ್ರೀವಾದಿರಾಜರು, ಶ್ರೀಸತ್ಯಭೋದರು ಇವರೆಲ್ಲರ ಅನುಗ್ರಹದ ಬಲದಿಂದ ಶ್ರೀಜಗನ್ನಾಥದಾಸರು ರಚಿಸಿದ್ದಾರೆ.

ಜಗನ್ನಾಥದಾಸರು ಸಹ ಪ್ರಾರಬ್ಧವಶಾತ ಅಹಂನಿಂದ ಕನ್ನಡ ಭಾಷೆಯನ್ನು ತಿರಸ್ಕಾರ ನೋಟದಿಂದ ನೋಡುತ್ತಿದ್ದರು.ಗುರುಗಳಾದ ಶ್ರೀವಿಜಯದಾಸರ ನಿಂದನೆ ಮಾಡಿ, ಅವರ ಅತಿಥ್ಯ ಸ್ವೀಕರಿಸದೇ ಜ್ಞಾನಿಗಳನ್ನು ನಿಂದನೆ ಮಾಡಿ, ಉದರ ಶೂಲೆಗೆ ಒಳಗಾಗಿ ಕೊನೆಗೆ ವಿಜಯದಾಸರಿಗೆ ಶರಣಾಗಿ, ಅವರ ಶಿಷ್ಯರಾದ ಗೋಪಾಲದಾಸರ ಮುಖಾಂತರ ನೋವು ಹೋಗಲಾಡಿಸಿ ಭಗವಂತನ ಅನುಗ್ರಹ ಮತ್ತು ಗೋಪಾಲದಾಸರ ಆಯುರ್ ದಾನದ ಫಲವಾಗಿ ಇಂತಹ ಶ್ರೇಷ್ಟ ಗ್ರಂಥ ರಚಿಸಲು ಘಟನೆಗಳು ಕಾರಣವಾಗಿದೆ.

ಮುಂದಿನ ಸಂಚಿಕೆಯಲ್ಲಿ ಇಂತಹ ಶ್ರೇಷ್ಠ ಗ್ರಂಥದ ಕರ್ತೃ ಶ್ರೀ ಜಗನ್ನಾಥದಾಸರ ಜೀವನ ಚರಿತ್ರೆಯನ್ನು ತಿಳಿಯೋಣ.

(-ಮುಂದುವರೆಯುತ್ತದೆ)

# ಭಾಗವತ ವ್ಯಾಖ್ಯಾನಕಾರರು ಶ್ರೀ ವಿಜಯಧ್ವಜ ತೀರ್ಥರು

- ಶ್ರೀಧರ ರಾಯಸಂ

98453 27129

ಉಡುಪಿ ಅಷ್ಟಮಠದಲ್ಲಿ ಒಂದಾದ ಪೇಜಾವರ ಮಠದ ಅಧೋಕ್ಷಜ ತೀರ್ಥರ ಪರಂಪರೆಯ ಏಳನೇ ಯತಿಶ್ರೇಷ್ಠರಾಗಿ, ಅದ್ಭುತವಾಗಿ ಭಾಗವತಕ್ಕೆ ವ್ಯಾಖ್ಯಾನ ಮಾಡಿ ಪ್ರಸಿದ್ಧಿಯಾಗಿದ್ದ ಶ್ರೀವಿಜಯಧ್ವಜತೀರ್ಥರು, ಭಕ್ತ ಜನರಿಗೆ ಮಹದುಪಕಾರ ಮಾಡಿದ ಮಹಾನುಭಾವರು. ಶ್ರೀಮಧ್ವಾಚಾರ್ಯರ ಸಿದ್ಧಾಂತ ಪ್ರಚಾರ ಮಾಡುತ್ತಾ, ಅವರ ಭಾಗವತ ತಾತ್ಪರ್ಯ ಸಾರ ಸಂದೇಶ ಸುಲಭವಾಗಿ ತಿಳಿಯಲು ಭಾಗವತ ವ್ಯಾಖ್ಯಾನ ಮಾಡಿ, ದಿವ್ಯವಾದ ಅದರ ಅರ್ಥ ತಿಳಿಸಿದ್ದಾರೆ. ಇವರು ಸಾಕ್ಷಾತ್ ಮುಖ್ಯ ಪ್ರಾಣದೇವರ ಸನ್ನಿಧಾನವುಳ್ಳ ಶುಕಮುನಿಗಳ ಅಂಶ ವುಳ್ಳವರಾಗಿದ್ದರು.

ಪೇಜಾವರ ಮಠದ ಆರನೇ ಯತಿಗಳಾಗಿದ್ದ ಶ್ರೀಮಹೇಂದ್ರ ತೀರ್ಥರಿಂದ ಆಶ್ರಮ ಸ್ವೀಕರಿಸಿ."ವಿಜಯಧ್ವಜತೀರ್ಥರೆಂದು"ನಾಮಾಂಕಿತರಾಗಿ, ಸರ್ವಜ್ಞ ಪೀಠ ಅಲಂಕರಿಸಿದ ಮಹಾನ್ ಯತಿಗಳು. ಉಡುಪಿಯಿಂದ ಸುಮಾರು 75 ಕಿ.ಮೀ. ದೂರದ ಮಂಜೇಶ್ವರ ಹತ್ತಿರ, ಸಮುದ್ರ ತಟದಲ್ಲಿರುವ ಕಣ್ವತೀರ್ಥದ ಹತ್ತಿರ, ವಾಸ ಮಾಡುತ್ತಾ ವಿಜಯಧ್ವಜತೀರ್ಥರು ಸ್ವಾಧ್ಯಾಯರೂಪವಾದ ವಾಙ್ಮಯ ತಪಸ್ಸು ಮಾಡಿದ ಸಂತ ಶ್ರೇಷ್ಠರು. ಕಣ್ವತೀರ್ಥರು ಅತ್ಯಂತ ಸುಂದರ ವಾಗಿ, ಸಮುದ್ರ ತೆರೆಗಳ ಕಲರವ ರಾಮತೀರ್ಥ, ಕಣ್ವತೀರ್ಥದ ತಿಳಿನೀರಿನ ಸರೋವರ, ತೆಂಗು,ಬಾಳೆತಾಳೆಮರಗಳ ಸಮೂಹ ಪೂರ್ವದಲ್ಲಿ ಕಂಗೊೞ ಿಸುವ ಅಶ್ವತ್ಥ ವೃಕ್ಷಗಳು, ರಮಣೀಯವಾಗಿ, ತಪೋವನದಂತೆ ಕಂಗೊಳಿ ಸುತ್ತದೆ. ಶ್ರೀರಾಮದೇವರ ಭಕ್ತರಾದ ವಿಜಯಧ್ವಜ ತೀರ್ಥರು, ಕಣ್ವತೀರ್ಥದ ಹತ್ತಿರ ಮುಖ್ಯ ಪ್ರಾಣದೇವರನ್ನು ಪ್ರತಿಷ್ಠೆ ಮಾಡಿದ್ದ ಕಾರಣ ಈಗ ಅದು ಜಾಗೃತ ಸ್ಥಳವಾಗಿದೆ.

ಶ್ರೀಮಧ್ವಾಚಾರ್ಯರು ಇಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಾಗ, ಎಂಟು ವಟು ಗಳಿಗೆ ಪರಮಹಂಸ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿ, ಇಬ್ಬಿಬ್ಬರು ಯತಿಗಳು ಅಶ್ವತ್ಥ ವೃಕ್ಷದ ದ್ವಾರದಲ್ಲಿ ಬರುವಂತೆ ತಿಳಿಸಿ, ಆ ಯತಿಗಳನ್ನು ದ್ವಂದ್ವ ಮಠಕ್ಕೆ ಅಧಿಪತಿಗಳನ್ನಾಗಿ ಮಾಡಿದ ಪವಿತ್ರ ಕ್ಷೇತ್ರ !!

ವಿಜಯಧ್ವಜ ತೀರ್ಥರು ತಮ್ಮ ಗ್ರಂಥ ಬರೆಯಲು, ತಪಸ್ಸು ಮಾಡಲು ಸಮುದ್ರ ಮಧ್ಯದ ಬಂಡೆಯ ಮೇಲೆ ಕುಳಿತುಕೊಳ್ಳುತ್ತಿದ್ದರು.ತಮಗೆ ಗೋಚರವಾದ ಅನೇಕ ಜ್ಞಾನ, ಧ್ಯಾನದ ವಿಷಯವನ್ನು ಆ ಸಮುದ್ರದ ಶಿಲೆಯ ಮೇಲೆ ಕೊರೆದು, ನಂತರ ತಾಳೆ ಪತ್ರಗಳ ಮೇಲೆ ಬರೆಯುತ್ತಿದ್ದರಂತೆ !! ಈಗಲೂ ಅವರ ಹಸ್ತಾ ಕ್ಷರದ ಅನೇಕ ವರ್ಣಮಾಲೆಯನ್ನು ಕಡಲ ಬಂಡೆಯ ಮೇಲೆ ನೋಡಬಹುದು.

ಶ್ರೀ ವಿಜಯಧ್ವಜ ತೀರ್ಥರು ಭಾಗವತಕ್ಕೆ"ಪದರತ್ನಾವಳಿ" ಎಂಬ ವ್ಯಾಖ್ಯಾನ ಬರೆದು, ಅದರ ಕೊನೆಯ ಒಂದು ಪದ್ಯದಲ್ಲಿ ತಮ್ಮ ಕೃತಿಯನ್ನು ಶ್ರೀ ಕೃಷ್ಣನ ಪಾದಾರವಿಂದಕ್ಕೆ ಸಮರ್ಪಣೆ ಮಾಡುತ್ತಾ ಮೂರು ವರಗಳನ್ನು ಕೇಳಿದ್ದಾರೆ.

ಸಂಪೂರ್ಣ.ದಾರಿದ್ರ್ಯ ಪ್ರತಿ ಜನ್ಮದಲ್ಲೂ ನಿನ್ನ ಪಾದಾರವಿಂದದಲ್ಲಿ ಭಕ್ತಿ ಸರ್ವಜ್ಞ ಶಾಸ್ತ್ರದಲ್ಲಿ ಆಸಕ್ತಿ. ವಿಜಯಧ್ವಜರ ವೈರಾಗ್ಯ ವರ್ಣಿಸಲಸಾಧ್ಯ. ಅವರ ಹರಿಭಕ್ತಿ,ಮಧ್ವಶಾಸ್ತ್ರದ ದೀಕ್ಷೆ,ಉತ್ಕೃಷ್ಟವಾಗಿತ್ತು. ಭಾಗವತದ ವ್ಯಾಖ್ಯಾನ ಬರೆಯುವಾಗ, ವಿಜಯಧ್ವಜತೀರ್ಥರು ಪ್ರತಿಯೊಂದು ಸ್ಕಂಧದ ಪ್ರಾರಂಭದಲ್ಲಿ, ಆ ಇಡಿ ಸ್ಕಂಧದ ಭಾವಾರ್ಥ ತೇಲಿ ಬರುವಂತೆ, ಸುಂದರವಾದ ಪದ್ಯಗಳನ್ನು ರಚಿಸಿದ್ದಾರೆ. ಹನ್ನೆರಡು ಪದ್ಯಗಳು ಇವರಿಂದ ರಚಿತವಾಗಿ, ಪಾರಾಯಣ ಮಾಡಲು. "ವಿಜಯ ಧ್ವಜ ಮಂಗಲ ದ್ವಾದಶಿ" ಎಂಬ ಶ್ಲೋಕಗಳಿಂದ ಪ್ರಸಿದ್ಧಿಯಾಗಿದೆ. ಭಾಗವತ ವ್ಯಾಖ್ಯಾನ ಅಲ್ಲದೇ, ವಿಜಯಧ್ವಜ ತೀರ್ಥರು ವಿಶ್ವಗುರು ಆಚಾರ್ಯ ಮಧ್ವರ ಮಹಾಭಾರತ ತಾತ್ಪರ್ಯ ನಿರ್ಣಯ ಮತ್ತು ಯಮಕ ಭಾರತಕ್ಕೆ ವ್ಯಾಖ್ಯಾನ ಮಾಡಿ ದ್ದಾರೆ.ಸಂಸ್ಕೃತ ಭಾಷೆಯಲ್ಲೂ ಹರಿಗಾಥಾ ಎಂಬ ಸ್ತೋತ್ರ ಕೃತಿ ರಚಿಸಿದ್ದಾರೆ. ಸೂರತ್ಕಲ್ ಹತ್ತಿರ ಇರುವ ಚಿತ್ರಾಪುರ ಮಠದಲ್ಲಿದ್ದ ಭಟ್ಟಾಚಾರ್ಯ ಸಂಪ್ರದಾಯದ ಶ್ರೀಗಳವರನ್ನು ವಾದದಲ್ಲಿ ಸೋಲಿಸಿ ತಮ್ಮ ಶಿಷ್ಯರನ್ನಾಗಿ ಮಾಡಿ ಕೊಂಡಿದ್ದು ಈಗ ಇತಿಹಾಸ! ಅದನ್ನೇ ವೈಷ್ಣವ ಮಠವನ್ನಾಗಿ ಮುಂದುವರೆಸಿದರೆಂದು ತಿಳಿದು ಬಂದಿದೆ. ಶ್ರೀಪಾದರಾಜರೂ ಸಹ ವಿಜಯಧ್ವಜ ತೀರ್ಥರನ್ನು ಸ್ತೋತ್ರ ಮಾಡಿದ್ದು ಉಡುಪಿ ಪೇಜಾವರ ಮಠದ ಗ್ರಂಥಾಲಯದಲ್ಲಿ ದಾಖಲಾಗಿದೆ. ಶ್ರೀವಿಶ್ವಪತಿ ತೀರ್ಥರು ವಿಜಯಧ್ವಜ ತೀರ್ಥರನ್ನು ಕುರಿತು "ವಿಜಯಧ್ವಜಾಷ್ಟಕ" ಕೃತಿಯನ್ನು ರಚಿಸಿದ್ದಾರೆ. ಪ್ರಸಿದ್ಧ ಭಾಗವತದ ವ್ಯಾಖ್ಯಾನಕಾರರದ ಶ್ರೀಯದುಪತ್ಯಾಚಾರ್ಯರು, ಬಿದರ ಹಳ್ಳಿ ಶ್ರೀನಿವಾಸತೀರ್ಥರು, ಸತ್ಯಧರ್ಮ ತೀರ್ಥರು ಮುಂತಾದವರು ವಿಜಯ ಧ್ವಜ ತೀರ್ಥರನ್ನು ಗೌರವದಿಂದ ಸ್ಮರಿಸಿದ್ದಾರೆ.

ಶ್ರೀ ವಿಜಯಧ್ವಜತೀರ್ಥರು ಪವಿತ್ರವಾದ ಕಣ್ವಾ ಶ್ರಮದಲ್ಲಿ ಕಣ್ವ ಋಷಿಗಳಿಂದ ಪೂಜಿಸಲ್ಪಟ್ಟ ಶ್ರೀರಾಮದೇವರನ್ನು ಸರ್ವಜ್ಞ ಕರಾರ್ಚಿತ ವಿಠಲ ದೇವರನ್ನು ಪೂಜೆ ಮಾಡುತ್ತಾ, ಶಿಷ್ಯರಿಗೆ ಪಾಠ ಪ್ರವಚನ ಮಾಡಿ ಬಹುಕಾಲ ಸರ್ವಜ್ಞ ಪೀಠ ಅಲಂ ಕರಿಸಿದ್ದ ಮಹಾನುಭಾವರು. ಶ್ರೀ ಉತ್ತಮ ತೀರ್ಥ ರಿಗೆ ಆಶ್ರಮ ನೀಡಿ,ಕ್ರಿ.ಶ.1438ನೇ ಇಸ್ವಿ ಸಿಧ್ಧಾರ್ಥ ಸಂವತ್ಸರ ವೈಶಾಖ ಶುದ್ಧ ಅಕ್ಷಯ ತೃತೀಯಾ ತಿಥಿಯಂದು ಕಣ್ವತೀರ್ಥದಲ್ಲಿ ಬೃಂದಾ ವನಸ್ಥರಾದರು.

ಪ್ರತಿವರ್ಷ ಇವರ ಆರಾಧನೆ ಉಡುಪಿ, ಇನ್ನಿ ತರ ಸ್ಥಳಗಳಲ್ಲಿ ಜ್ಞಾನಕಾರ್ಯದೊಂದಿಗೆ ವಿಜೃಂ ಭಣೆಯಿಂದ ಜರುಗುತ್ತದೆ.

ಹಿರಣ್ಯಕಶಿಪು ನಮ್ಮೊಳಗಿನ ಅಹಂಕಾರ, ದರ್ಪ, ನಮ್ಮೊಳಗಿನ ಮಿಥ್ಯಾಹಂಕಾರ ಎಂದು ಸಮೀಕರಿಸಿಕೊಂಡರೆ ಮತ್ತೊಂದು ಬಗೆಯಲ್ಲಿ ನರಸಿಂಹಾವತಾರವನ್ನು ವ್ಯಾಖ್ಯಾನಿಸಿಕೊಳ್ಳಬಹುದು. ಈ ಅಹಂ ಕೆಟ್ಟದೆಂದು ನಮಗೆ ಗೊತ್ತಿದ್ದರೂ ನಾವು ಅದರಿಂದ ಹೊರಬಂದರೆ ಒದ್ದಾಡುತ್ತೇವೆ. ಅಹಂಕಾರದಿಂದ ಹೊರಬಂದರೆ ನಮ್ಮ ಗುರುತನ್ನೇ, ಅಸ್ತಿತ್ವವನ್ನೇ ಕಳೆದುಕೊಳ್ಳುತ್ತೇವೆ ಎಂಬ ಭಯ ನಮ್ಮೊಳಗಿರುತ್ತದೆ. ಈ ಆತ್ಮ ವಿಸ್ಮೃತಿಯನ್ನು ಕಳಚಿಕೊಳ್ಳುವುದಕ್ಕಾಗಿ, ನಮ್ಮ ಉದ್ಧಾರವಾಗುವುದಕ್ಕಾಗಿ ಭಗವಂತ ಅವತರಿಸಿಬರಬೇಕು. ನಮ್ಮೊಳಗೆ ಅವತರಿಸಬೇಕು. ಅದಕ್ಕಾಗಿ ನಾವು ಮೊರೆಯಿಡಬೇಕು.

ಕಶ್ಯಪ ಮುನಿ ಮತ್ತು ದಿತಿ ದಂಪತಿಗೆ ಅಕಾಲ ಸಂಯೋಗದ ಫಲವಾಗಿ ಹಿರಣಾಕ್ಷ ಮತ್ತು ಹಿರಣ್ಯಕಶಿಪು ಎಂಬ ರಾಕ್ಷಸ ಗಣದ ಮಕ್ಕಳು ಜನಿಸಿ ರಾಕ್ಷಸ ಗುಣಗಳನ್ನೇ ಮೈಗೂಡಿಸಿಕೊಂಡು ಬೆಳೆದು ದೈತ್ಯರಾಗಿ ದೇವತೆಗಳನ್ನೆಲ್ಲ ಗೆದ್ದು ಪ್ರಪಂಚಕ್ಕೆಲ್ಲ ಪೀಡನೆ ಇತ್ತು ಅಟ್ಟಹಾಸ ಮಾಡುತ್ತ ಮೆರೆಯುತ್ತಿದ್ದರು. ಅವರ ಹಿಂಸೆ, ಕಾಟ ತಾಳಲಾರದೆ ದೇವತೆಗಳು ಮಹಾವಿಷ್ಣುವಿನ ಮೊರೆ ಹೊಕ್ಕರು. ವಿಷ್ಣುವು ವರಾಹಾವತಾರದಿಂದ ಹಿರಣಾಕ್ಷನನ್ನು ಸಂಹರಿಸಿದನು. ಈಗ ಹಿರಣ್ಯಕಶಿಪು ತನ್ನನ್ನು ಸಂರಕ್ಷಿಸಿಕೊಳ್ಳಲು ಬ್ರಹ್ಮನನ್ನು ಕುರಿತು ತಪಸ್ಸಿಗೆ ತೊಡಗುತ್ತಾರೆ. ಅತ್ಯಂತ ನಿಷ್ಠೆಯಿಂದ ಕೂಡಿದ ದೀರ್ಘ ತಪಸ್ಸು. ಆ ಬ್ರಹ್ಮ ಸೋತು ವರ ನೀಡಲೇಬೇಕಾಗಿ ಬರುತ್ತದೆ! ಹಿರಣ್ಯಕಶಿಪು ಕೇಳಿದ ವರವಾದರೂ ಏನು?



# ಕರುಣೆಯ ದೈವ ಶ್ರೀಲಕ್ಷ್ಮೀ ನರಸಿಂಹ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ಭಗವಂತನಾದ ಮಹಾವಿಷ್ಣುವಿನ ದಶಾವತಾರಗಳಲ್ಲಿ ನಾಲ್ಕನೆಯ ಅವತಾರ ಮಾನವಾಕೃತಿಯ ಸಿಂಹಮುಖನಾದ ನರಸಿಂಹಾವತಾರ, ಶ್ರೀಮನ್ನಾರಾಯಣನ ಇದಕ್ಕೂ ಹಿಂದಿನ ಅವತಾರಗಳಲ್ಲಿ ಮತ್ಸ್ಯ (ಮೀನು ) ಕೂರ್ಮ (ಆಮೆ) ವರಾಹ (ಹಂದಿ) ಮನುಷ್ಯನ ರೂಪುರೇಷೆ ಪ್ರಕಟವಾದದ್ದೇ ಇಲ್ಲ. ನರಸಿಂಹನೆಂದರೆ ಅರ್ಥವೇ ಮಾನವಶ್ರೇಷ್ಠ ಎಂಬುದಾಗಿ. ಶ್ರೇಷ್ಠ ಮಾನವನು ಪ್ರಪ್ರಥಮ ಆವಿರ್ಭಾವವೇ ಶ್ರೀನರಸಿಂಹನ ಅವತಾರವಾಯಿತು.

ಅವತಾರ, ಅವತರಣ ಎಂದರೆ ಕೆಳಗಿಳಿದು ಬರುವುದು ಎಂಬ ಅರ್ಥವಿದೆ. ದುಷ್ಟ ಶಿಕ್ಷಣ-ಶಿಷ್ಟ ರಕ್ಷಣ ಕಾರ್ಯಗಳಿಗಾಗಿ ಭಗವದ್ ಶಕ್ತಿಯು ಮೇಲಿನಿಂದ ಭೂಲೋಕಕ್ಕೆ ಕೆಳಗಿಳಿದು ಬರುವುದನ್ನೇ ಅವತಾರ ಕಾರ್ಯವೆನ್ನುತ್ತಾರೆ. ಭಗವಂತ ಅವತರಣ ಮಾಡುವುದೇ ದುರ್ಜನರನ್ನು ಶಿಕ್ಷಿಸಿ ಸಜ್ಜನರನ್ನು ರಕ್ಷಿಸುವುದಕ್ಕಾಗಿ. ಶ್ರೀ ನರಸಿಂಹಾವತಾರವೂ ಕೂಡ ದುಷ್ಟ ಶಿಕ್ಷಣ ಶಿಷ್ಟ ರಕ್ಷಣದ ಮೂಲೋದ್ದೇಶದ ಕಾರ್ಯಕ್ಕಾಗಿ ಆವಿರ್ಭಾವಗೊಂಡಿದ್ದು.

ಅತ್ಯಂತ ಬುದ್ಧಿವಂತಿಕೆಯಿಂದ ಕೇಳಿದ ವರ ಅದು! "ಹಗಲಾಗಲೀ, ರಾತ್ರಿಯಾಗಲೀ, ಕೆಳಗಾಗಲೀ, ಮೇಲಾಗಲೀ ನನಗೆ ಸಾವು ಬರಬಾರದು. ಮಾನವರಿಂದಾಗಲೀ, ಪ್ರಾಣಿಗಳಿಂದಾಗಲೀ ಮೃತ್ಯು ಘಟಿಸಕೂಡದು. ಮನೆಯ ಒಳಗೂ ಹೊರಗೂ ಯಾವುದೇ ಆಯುಧದಿಂದಲೂ ನನಗೆ ಮರಣವು ಬರಕೂಡದು" ಎಂಬ ವರವನ್ನು ಕೊಡುವಂತೆ ಕೇಳಿದ್ದಕ್ಕೆ ಬ್ರಹ್ಮ ಅಸ್ತು ಎನ್ನಲೇಬೇಕಾಯಿತು.

ಹೀಗೆ ವರವನ್ನು ಪಡೆದು ಬೀಗಿ ತಾನೆ ಅಧಿಕಾರಕ್ಕೆ ಬಂದು ಅಹೋಬಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಾ ದೇವತೆಗಳನ್ನು ಪೀಡಿಸುವ ಕಾರ್ಯವನ್ನು ಇನ್ನೂ ಹೆಚ್ಚಾಗಿ ಮುಂದುವರಿಸುತ್ತ ಅಟ್ಟಹಾಸ ಮಾಡತೊಡಗಿದ.

ಆದರೆ ದೈವದ ಇಚ್ಛೆ ಮತ್ತೊಂದೇ ಯೋಜನೆ ಸಿದ್ಧಗೊಳಿಸಿರುತ್ತದಲ್ಲವೆ? ಹಿರಣ್ಯಕಶಿಪು ತಪಸ್ಸಿಗೆ ಹೋಗುವಾಗ ಆತನ ಹೆಂಡತಿ ಕಯಾದು ಗರ್ಭಿಣಿ. ನಾರದರ ಆಶ್ರಮದಲ್ಲಿ ಕಾಲ ಕಳೆಯಬೇಕಾಗಿ ಬಂದಿತ್ತು. ಅಲ್ಲಿ ಆಕೆ ನಾರದರಿಂದ ಶ್ರೀಹರಿಯ



ಮಹಿಮೆಯನ್ನು ದಿನದಿನವೂ ಕೇಳುತ್ತ ಬರಬೇಕಾಗಿತ್ತು. ಆಕೆಯ ಗರ್ಭದ ಮೇಲೆ ಅದು ಪ್ರಭಾವ ಬೀರಿತು. ಈ ಗರ್ಭ ಸಂಸ್ಕಾ ರದ ಪ್ರಭಾವದಿಂದಲೇ ಜನಿಸಿದ ಶಿಶು ಪ್ರಹ್ಲಾದ ಹುಟ್ಟಿನಿಂದಲೂ ನಾರಾಯಣ ಪರಮ ಭಕ್ತ ನಾಗಿಯೇ ಬೆಳೆದ.ತನ್ನ ಸಹಪಾಠಿಗಳನ್ನು ತನ್ನಂತೆಯೇ ಶ್ರೀಹರಿಯ ಭಕ್ತರನ್ನಾಗಿ ಪರಿ ವರ್ತನೆ ಮಾಡಿದ. ತಂದೆಗೂ,ಮಗನಿಗೂ ಸದಾವಾಗ್ಯುದ್ಧ. ತಂದೆಯೋ ಶ್ರೀಹರಿಯ ಬದ್ಧವೈರಿ ಮಗನೋ ಶ್ರೀಹರಿಯ ಪರಮಭಕ್ತ! ಅಪ್ಪ ನಾರಾ ಯಣನ ದಾಸಾನುದಾಸನಾದ ಭಕ್ತ ಜೀವ! ಎಂಥಾ ವೈರುದ್ಧ್ಯಗಳ ಸಂಗಮ ವಾದ ಪಿತೃ ಪುತ್ರರಿವರು!

ಸದಾ ಪರಪೀಡನೆಯಲ್ಲಿ ಆಸುರೀ ಆಡ ಳಿತದ ರಾಜ ಕಾರ್ಯದ ಆಗು ಹೋಗುಗಳಲ್ಲಿ ವ್ಯಸ್ತನಾಗಿದ್ದ ಹಿರಣ್ಯಕಶಿಪುವಿಗೆ ಮಗನ ಭೇಟಿಗೆ ಸಮಯ ಅಷ್ಟಷ್ಟೇ ಮಗನು ಹರಿಸ್ತುತಿ ಯಲ್ಲಿ ತೊಡಗುತ್ತಿದ್ದುದು ರಕ್ಕಸನನ್ನು ಕೆರಳಿ ಸುತ್ತಿತ್ತು.ಎಷ್ಟುಹಿಂಸೆ,ಕ್ರೌರ್ಯ,ಶಿಕ್ಷೆ ಕೊಟ್ಟರೂ ಕೇಳದೆ ಬಾಲಕ ಪ್ರಹ್ಲಾದ ಹರಿಗೆ ನಿಷ್ಠನಾಗಿ ದ್ದುದನ್ನು ಕಂಡ ಹಿರಣ್ಯಕಶಿಪು ತನ್ನ ಕಡು ವೈರಿ ಯಾದ ಹರಿಯನ್ನು ಹೀಗೆ ಸ್ಮರಿಸುವುದು ತರವಲ್ಲವೆಂದು ಪರಿಪರಿಯಾಗಿ ಹೇಳಿದರೂ ಕೇಳದ ಈ ಬಾಲಕನನ್ನು ಬಗೆ ಬಗೆಯಾಗಿ ಚಿತ್ರ ಹಿಂಸೆ ಕೊಟ್ಟರೂ ಬಗ್ಗದ ಈ ಹುಡುಗನ್ನು ಕಟ್ಟಕಡೆಯದಾಗಿ ರೋಷದಿಂದ ಪ್ರಶ್ನಿಸುವುದು ಹೀಗೆ, “ನಿನ್ನ ಆ ಶ್ರೀಹರಿ ಎಲ್ಲ ಕಡೆ ಇದ್ದಾ ನೆಯ?” ಹೌದು ಅಪ್ಪಾಜಿ “ಈ ಅರಮನೆಯ ಸಭಾ ಭವನದ ಈ ಕಂಭದಲ್ಲಿಯೂ?. ಹಿರಣ್ಯಕಶಿಪುವಿನ ಈ ಪ್ರಶ್ನೆ ವ್ಯಂಗ್ಯದಿಂದ ಕೂಡಿತ್ತು. ಆದರೆ ಪ್ರಹ್ಲಾದನ ಉತ್ತರ ಅಷ್ಟೇ ಭಕ್ತಿ ತತ್ಪರತೆಯಿಂದ ಕೂಡಿದ್ದಾಗಿತ್ತು. “ಖಂಡಿತವಾಗಿಯೂ ಭಗವಂತ ಅಲ್ಲಿಯೂ ಇದ್ದಾನೆ. ಆತ ಇಲ್ಲದ ಸೆಳೆದು ಅಟ್ಟಹಾಸದಿಂದ ಕಂಬವನ್ನು ಹೊಡೆದ. ತತ್‌ಕ್ಷಣದಲ್ಲಿಯೇ ಬ್ರಹ್ಮ ಸೃಷ್ಟಿಯಲ್ಲದ ಕುತ್ತಿಗೆಯವರೆಗೂ ಮಾನವನ ಹಾಗಿರುವ, ಸಿಂಹದ ಮುಖ ಹೊಂದಿರುವ ನರ ಸಿಂಹನ ಆವಿರ್ಭಾವವಾಗಿ ಹಗಲೂ ಅಲ್ಲದ ರಾತ್ರಿಯೂ ಅಲ್ಲದ ಸಂಧ್ಯಾ ವೇಳೆಯಲ್ಲಿ ಹೊರಗೂ ಒಳಗೂ ಅಲ್ಲದ ಹೊಸ್ತಿಲಲ್ಲಿ ಕುಳಿತು ಯಾವ ಆಯುಧವೂ ಶಸ್ತ್ರ ಅಸ್ತ್ರವೂ ಅಲ್ಲದ ಕೇವಲ ತನ್ನ ಉಗುರುಗಳಿಂದಲೇ ತನ್ನ ತೊಡೆಯ ಮೇಲೆ ಹಿರಣ್ಯಕಶಿಪುವಿನ ದೇಹವನ್ನು ಎತ್ತಿಹಾಕಿಕೊಂಡು ಬಗಿದು ಕೊಂದು ಹಾಕಿದ.

ಅಣು ಮಹತ್ತಿನಲ್ಲೆಲ್ಲ ಸರ್ವವ್ಯಾಪಕತ್ವವನ್ನು ಹೊಂದಿರುವ ಭಗವಂತನಲ್ಲಿ ಅಚಲ ನಂಬಿಕೆ, ಭಕ್ತಿ ಮಗು ಪ್ರಹ್ಲಾದನದು. ದೈತ್ಯ ಹಿರಣ್ಯಕಶಿಪುವಿದಾದರೋ ತಾನೇ ದೇವರು, ತನ್ನನ್ಯಾರೂ ಮೀರಿಸುವವರಿಲ್ಲ ಎಂಬ ಅಹಂಕಾರ, ಗರ್ವ ತುಂಬಿ ಕೊಂಡ ಪರಿಪೀಡನಾ ನಡವಳಿಕೆ. ಭಕ್ತನ ಮೊರೆಲಾಲಿಸಿ ಭಗವಂತ ಕಂಭವ ನ್ನೊಡೆದು ಬರಲೇಬೇಕಾಯಿತು. ದೈತ್ಯನ ಸಂಹಾರವಾಗಲೇ ಬೇಕಾಯಿತು.

ಮೇಲುನೋಟಕ್ಕೆ ಅತ್ಯಂತ ಕ್ರೂರನಾಗಿ ಭಗವಂತ ದೈತ್ಯನ ಕರುಳು ಬಗೆದು ಸಂಹರಿಸಿದ ಹಾಗೆ ಕಂಡರೂ ಇದು ಆಂತರ್ಯದಲ್ಲಿ ಸ್ವಾಮಿ ದೈತ್ಯನ ಎಲ್ಲ ಕರಾ ರುಗಳಿಗೆ ಹೊಂದುವಂತೆ ತಾನು ವಿಶೇಷವಾಗಿ ಅವತರಿಸಿ ಬಂದು ಮರಣವನ್ನು ಕರುಣಿಸಿ ಆ ಅಟ್ಟಹಾಸ ನಡೆಸಿದ್ದ ಜೀವಕ್ಕೆ ಸದ್ಗತಿಯನ್ನು ಪಾಲಿಸಿ ಮುಕ್ತಿ ಪಥವನ್ನು ತೋರಿಸಿದ ದಯೆಯನ್ನು ಪರಿಭಾವಿಸಬೇಕು.ಹೊರನೋಟಕ್ಕೆ ಇದು ಉಗ್ರನರ ಸಿಂಹನ ಕ್ರೌರ್ಯವೆಂದು ಕಾಣುವುದಾದರೂ ಭಗವಂತನ ತೊಡೆಯ ಮೇಲೆ ಮಲಗಿ ಮರಣಿಸಿದ ದೈತ್ಯನ ಪುಣ್ಯದಲ್ಲಿ ಬಹುಶಃ ಪಾಪ ಕಾರ್ಯಗಳನ್ನು ಕ್ಷಮಿಮಿ ಹಾಲೂ ಡುವ ತಾಯಿಯ ವಾತ್ಸಲ್ಯವೇ ಅಂತಿಮ ಗಳಿಗೆಯಲ್ಲಿ ಮರಣ ಸಂದ ರ್ಭದಲ್ಲಿ ಕಂಡು ಹಿಡಿದ್ದಿರಬಹುದಾಗಿಯೂ ಪರಿಭಾವಿಸುತ್ತಾರೆ. ಏಕೆಂದರೆ ಭಗ ವಂತ ಎಲ್ಲ ಜೀವಗಳ ತಾಯಿ! ಸತ್ತ್ವ,ರಜೋ,ತಾಮಸ ಗುಣಗಳೆಲ್ಲದರ ಮೊತ್ತ ಗಳ ಜೀವಿಗಳೆಲ್ಲದಕ್ಕೂ ಆತ ತಾಯಿಯೇ.ಅವುಗಳ ಕರ್ಮ ಫಲಗಳಿಗನು ಗುಣ ವಾಗಿಯಾದರೂ ಸಲಹಲು ಆತ ಬಾರದಿರುವುದಿಲ್ಲ! ಶಾಪಗ್ರಸ್ಥನಾಗಿ ಭೂಮಿಯಲ್ಲಿ ಅಸುರ ದೇಹದೊಂದಿಗೆ ಗುರುತಿಸಿಕೊಂಡು ಅನ್ಯಾಯದ ಬಾಳ್ವೆ ನಡೆಸುತ್ತಿದ್ದಾನೆ. ಅಂಥವನಿಗೆ ಸದ್ಗತಿಯ ಪಥ ತೋರಿಸುವುದು ಮರಣದ ಮೂಲಕವೊಂದೇ ಸರಿ, ಅದನ್ನು ತೋರಬೇಕಾದರೆ ಭಗವಂತನಿಂದಲ್ಲದೆ ಬೇರಾರಿಂದ ಸಾಧ್ಯವಿತ್ತು ಇಲ್ಲಿ? ಏನೆಲ್ಲ ಕರಾರು ಹಾಕಿ ತನ್ನ ರಕ್ಷೆ ಮಾಡಿಕೊಂಡಿದ್ದ ದೈತ್ಯ ನಾತ!ಅಂಥವನಿಗೆ ಮುಕ್ತಿ ನೀಡಲು ನರಸಿಂಹನಾಗಿ ಭಗವಂತನೇ ಭುವಿಗೆ ಅವತರಿಸಿ ಬರಬೇಕಾ ಯಿತು.

ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ ಎಂಬ ಸೂಕ್ತಿಯಂತೆ ತನ್ನ ಭಕ್ತನ ಮಾತನ್ನು ಸತ್ಯಮಾಡಿ ತೋರಿಸಲೆಂದೇ ಪರಮಾತ್ಮನು ಈ ಅವತಾರವನ್ನು ಮಾಡಿ ದುದು ಕೃತಯುಗದಲ್ಲಿ.ಆದರೆ ಈ ತನ್ನ ಅವತಾರವನ್ನು ಉಪಸಂಹಾರ ಮಾಡ

ಅಲ್ಲ. ಪುರಾಣಗಳು ತಿಳಿಸುವಂತೆ ಭಗವಂತನ ಉಳಿದೆಲ್ಲ ಅವತಾರಗಳಿಗೆ ಅಂತ್ಯವಿದೆ. ಉದಾಹರಣೆಗೆ ವರಾಹ ಶರೀರವನ್ನು ಕೋಕಾಮುಖ ತೀರ್ಥದಲ್ಲಿ ಪರಿತ್ಯಾಗ ಮಾಡಿದನೆಂದು ನೃಸಿಂಹ ಪುರಾಣವೇ ಹೇಳುತ್ತವೆ. ಸರಯೂ ನದಿಯಲ್ಲಿ ಶ್ರೀರಾಮನ ದೇಹ ತ್ಯಾಗವಾದರೆ ಪ್ರಭಾಸ ತೀರ್ಥದಲ್ಲಿ ಶ್ರೀಕೃಷ್ಣನ ಶರೀರ ನಿರ್ಯಾಣ. ಆದರೆ ನೃಸಿಂಹಾವತಾರದಲ್ಲಿ ಮಾತ್ರ ಅವತಾರದ ಉದ್ದೇಶ ಈಡೇರಿದರೂ ಆ ನರಸಿಂಹ ಶರೀರವು ಅವಿನಾಶಿಯಾಗಿಯೇ ಇರುವುದು ಎಂಬ ನಂಬಿಕೆ ಉಳಿದು ಬಂದಿದೆ. ಒಂದೊಂದು ಕಲ್ಪದಲ್ಲಿ (ಬ್ರಹ್ಮನ ಒಂದು ದಿನ) ಯೂ ಈ ಅವತಾರ ಆವರ್ತಿತವಾಗುವುದರಿಂದಾಗಿ ನರಸಿಂಹ ಶರೀರಗಳು ಅನೇಕವಾಗುತ್ತವೆ. 'ನ್ಯಾಯ ಸಿದ್ಧಾಂತ ಮುಕ್ತಾ ವಲಿ' ಎಂಬ ತರ್ಕಗ್ರಂಥದಲ್ಲಿಯೂ ಈ ವಿಶೇಷವನ್ನು ವಿವರವಾಗಿ ಉಲ್ಲೇಖಿಸಲಾಗಿದೆ. ಅವತಾರ ಕಾರ್ಯಮುಗಿದ ಮೇಲೆ ಶ್ರೀ ನೃಸಿಂಹನು ತನಗೆ ಬೇಕಾದ ಪ್ರದೇಶದಲ್ಲಿ ನೆಲೆಸುತ್ತಾನೆಂದು ಅದರಲ್ಲಿ ಹೇಳಲಾಗುತ್ತದೆ.

### ನರಸಿಂಹ ಮಂತ್ರದ ಜಪಿಸೋ

ಶಂಕರಾಚಾರ್ಯರು, ಮಧ್ವಾಚಾರ್ಯರು ಇಬ್ಬರೂ ಲಕ್ಷ್ಮೀನರಸಿಂಹನನ್ನು ಕುರಿತು ಮನದುಂಬಿ ಸ್ತೋತ್ರ ರಚಿಸಿದ್ದಾರೆ. ಶಂಕರಾಚಾರ್ಯರ "ಲಕ್ಷ್ಮೀನರಸಿಂಹ ಕರಾವಲಂಬನ ಸ್ತೋತ್ರ" ವಂತೂ ತುಂಬ ಹೃದಯಸ್ಪರ್ಶಿಯಾಗಿ ಮನಕರಗುವಂತೆ ರಚಿಸಲ್ಪಟ್ಟಿದ್ದು ಮಾನವಜನ್ಮದ ಎಲ್ಲ ಕಷ್ಟ ಕಾರ್ಪಣ್ಯಗಳ, ಸಾಂಸಾರಿಗ ಬಂಧನಗಳ, ತೊಂದರೆ ತಾಪತ್ರಯಗಳ, ಆಪತ್ತು ವಿಪತ್ತುಗಳ ಸುಳಿಗಳಿಂದ ಬಿಡುಗಡೆಯನ್ನು ಕೋರುತ್ತ ಜೀವವು ಲಕ್ಷ್ಮೀನರಸಿಂಹನನ್ನು ಮೊರೆ ಮೊರೆದು ಕರೆಯುವ ರೀತಿಯಲ್ಲಿದೆ. ಒಟ್ಟು ಇಪ್ಪತ್ನಾಲ್ಕು ಉದಾಹರಣೆಗಾಗಿ ಇಲ್ಲಿ ನೀಡಲಾಗಿದೆ.

ಸಂಸಾರಯೂಥ ಗಜಸಂಹತಿ ಸಿಂಹದಂಷ್ಟ್ರ
ಭೀತಸ್ಯ ತೀಕ್ಷ್ಣಮತಿಶೇಷ ಭಯಂಕರೇಣ ।
ಪ್ರಾಣಪ್ರಯಾಣ ಭವಭೀತಿ ನಿವಾರಣೇನ
ಲಕ್ಷ್ಮೀನರಸಿಂಹ ಮಮದೇಹಿ ಕರಾವಲಂಬಂ॥

ಈ ಕರಾವಲಂಬನ (24 ಪೂರ್ತಿ ಪದ್ಯಗಳನ್ನು) ಸ್ತೋತ್ರವನ್ನು ಪ್ರತಿದಿನವೂ ಪಠಿಸಿದಲ್ಲಿ ಎಂಥ ಆಪತ್ತು, ಕಷ್ಟ ತೊಂದರೆಗಳೂ ಪರಿಹಾರವಾಗಿ ನೆರವು ದೊರೆತು ಲಕ್ಷ್ಮೀನರಸಿಂಹನು ಒದಗಿ ಬಂದು ಕಾಯುವವನು ಎನ್ನುವುದು ಭಕ್ತರ ಅಚಲವಾದ ನಂಬಿಕೆ, ಶಂಕರಾಚಾರ್ಯರು ನೀಡಿರುವ ಭರವಸೆ ಕೂಡ !

ಮಧ್ವಾಚಾರ್ಯರು ನರಸಿಂಹನ ಪ್ರಾರ್ಥನಾ ರೂಪವಾಗಿ 'ನಖಸ್ತುತಿ'ಯನ್ನು ರಚಿಸಿದ್ದಾರೆ. ನಾರಾಯಣ ಪಂಡಿತರು ಎಂಬ ಕವಿಯಿಂದ ರಚಿತವಾದ ನರಸಿಂಹ ಸ್ತುತಿ ಕೂಡ ಇವರಿಂದ ಕನ್ನಡಕ್ಕೆ ಅನುವಾದಗೊಂಡಿದೆ. ಹರಿದಾಸ ಸಾಹಿತ್ಯದಲ್ಲಂತೂ ನರಸಿಂಹದೇವರು ಆದ್ಯ ಸ್ಥಾನವನ್ನು ಪಡೆದುಕೊಂಡಿದ್ದಾನೆ. ದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಶ್ರೀಪಾದರಾಜ ಯತಿಗಳು "ಶ್ರೀ ಲಕ್ಷ್ಮೀನರಸಿಂಹ ಪ್ರಾದುರ್ಭಾವದಂಡಕಂ" ಎಂಬ ಅದ್ಭುತವಾದ, ಸೊಗಸಾದ ಕಾವ್ಯವವನ್ನೇ ರಚಿಸಿ ನೀಡಿದ್ದಾರೆ. ಭಾಗವತದಲ್ಲಿ ಉಕ್ತವಾದ ಶ್ರೀ ವಿಷ್ಣುವು "ಶ್ರೀ ಲಕ್ಷ್ಮೀ ನರಸಿಂಹಾವತಾರವೆತ್ತಿ ಹಿರಣ್ಯಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ಅನುಗ್ರಹಿಸಿದ ಕಥಾವಸ್ತುವನ್ನೇ ಇಲ್ಲಿ ಸುಂದರವಾದ ಕಾವ್ಯ ವಸ್ತುವಾಗಿ ಅನುವಾದಿಸಿದ್ದಾರೆ.

ಕನಕದಾಸರಿಗೂ ನರಸಿಂಹ ಅತ್ಯಂತ ಪ್ರಿಯನಾದ ದೇವರು. "ಯಾದವಗಿರಿ ವಾಸನಹುದೋ ಶ್ರೀನರಸಿಂಹ ! ಆದಿ ನಾರಾಯಣ ಅಚ್ಯುತನಹುದೋ" ಎಂದು ಹಾಡಿದ್ದಾರೆ. ಇದಲ್ಲದೆ ಕನಕದಾಸರ "ಏನು ಕಾರಣ ಬಾಯಿ ತೆರೆದೆಯೋ ಪೇಳೆಲೋ ದಾನವಾಂತಕ ಅಹೋಬಲ ನಾರಸಿಂಹನೇ" ಎಂಬೊಂದು ಕೀರ್ತನೆ ತುಂಬ ಸ್ವಾರಸ್ಯಕರವಾಗಿದೆ. ಹೀಗೆಯೇ ಜಗನ್ನಾಥ ದಾಸರು, ವಿಜಯದಾಸರು, ಪ್ರಸನ್ನ ವೆಂಕಟದಾಸರು ಮುಂತಾದ ದಾಸವರೇಣ್ಯರು ಲಕ್ಷ್ಮೀನರಸಿಂಹನನ್ನು ಮನದುಂಬಿ ಸ್ತುತಿಸಿ ಕೀರ್ತನೆಗಳನ್ನು ರಚಿಸಿದ್ದಾರೆ. ವಿಜಯದಾಸರಂತೂ ಲಕ್ಷ್ಮೀ ನರಸಿಂಹನ ಮೇಲೆ ಸುಳಾದಿಯನ್ನೇ ರಚಿಸಿ ಧನ್ಯತೆಯನ್ನು ಮೆರೆದಿದ್ದಾರೆ. ನರಸಿಂಹ ಮಂತ್ರವ ಜಪಿಸೋ! ಆ ಮಂತ್ರ, ಈ ಮಂತ್ರ ಎಂದು ನೆಚ್ಚಿ ನೀ ಕೆಡಲು ಬೇಡ ಎಂದು ತಮ್ಮ ಕೃತಿಯೊಂದರಲ್ಲಿ ಪುರಂದರದಾಸರು ತಿಳಿ ಹೇಳಿದ್ದಾರೆ. ನರಸಿಂಹ ಸ್ವಾಮಿಯ ಮಹತ್ವವನ್ನು ಆ ಕೀರ್ತನೆಯಲ್ಲಿ ಸಾದ್ಯಂತವಾಗಿ ವಿವರಿಸಿ ಹಾಡಿದ್ದಾರೆ. ಹೇಳಲಾಗಿರುವುದು ಭಗವಂತನ ಸಾವಿರ ರೂಪಗಳನ್ನು ಸಾಧಿಸುತ್ತದೆ. ಅವುಗಳಲ್ಲಿ ಯೋಗಾನರಸಿಂಹ, ವ್ಯಾಘ್ರ ನರಸಿಂಹ, ಗಂಡ ಭೇರುಂಡ ನರಸಿಂಹ ಮುಂತಾದ ಕೆಲವೇ ರೂಪಗಳು ಮಾತ್ರ ಪರಿಚಿತವಾಗಿವೆ. ಆದರೆ ಸಹಸ್ರ ನಾಮಗಳನ್ನು ಪಠಿಸುವಾಗ ಅವುಗಳಿಗೆ ಶ್ರೀನೃಸಿಂಹ ಶಬ್ದವನ್ನು ಸೇರಿಸಿ ಹೇಳುವ ರೂಢಿ ಇದೆ. ಉದಾಹರಣೆಗೆ ಶ್ರೀಯೋಗಾಯ ಶ್ರೀನೃಸಿಂಹಾಯ ನಮಃ ಈ ಎಲ್ಲ ನಾಮಗಳಿಗೆ ಶಂಕರಾಚಾರ್ಯರು ವಿವರಣೆ ವ್ಯಾಖ್ಯಾನ ನೀಡಿದ್ದಾರೆ. ಹೆಚ್ಚಿನ ಶಂಕರ ಮಠಗಳಲ್ಲಿ ಶ್ರೀನೃಸಿಂಹನ ಸನ್ನಿಧಿಯಿರುವುದನ್ನು ಇಂದಿಗೂ ಕಾಣಬಹುದು.

(ವಿವಿಧ ಮೂಲಗಳಿಂದ)



# ಬೆಂಡೆ ಆಹಾರ ಪದಾರ್ಥವೊಂದೇ ಅಲ್ಲ ಔಷಧೀಯ ಪದಾರ್ಥ

ತೆಲುಗು ಮೂಲ : ಡಾ|| ಸಿ. ಮಧುಸೂದನಶರ್ಮ

ಅನುವಾದ : ಡಿ.ಎಸ್. ಬದ್ರಿನಾಥ್

ನಮಗೆ ವರ್ಷ ಪೂರ್ತಿ ಲಭ್ಯವಾಗುವ ಬೆಂಡೆಕಾಯಿಗಳು ಪೋಷಕಾಂಶಗಳ ನೆಲೆಯಾಗಿದ್ದು ಆರೋಗ್ಯ ಸಂರಕ್ಷಣೆಗೆ ಚೆನ್ನಾಗಿ ಉಪಯುಕ್ತವಾಗಿದೆ.

ಬೆಂಡೆಕಾಯಿಯಿಂದ ಗೊಜ್ಜು, ಪಲ್ಯೆ, ಹುಳಿಯಂತಹ ರುಚಿ ಕರವಾದ ಆಹಾರ ಪದಾರ್ಥಗಳನ್ನು ತಯಾರು ಮಾಡಿಕೊಂಡು ಸೇವಿಸುವುದು ನಮ್ಮೆಲ್ಲರಿಗೂ ವಿಧಿತವಾದದ್ದೇ.

ಪ್ರಕೃತಿಯು ಈ ಬೆಂಡೆಕಾಯಲ್ಲಿ ಕೇವಲ ಆಹಾರ ಪರವಾದ ಪೋಷಕಾಂಶಗಳನ್ನೊಂದೇ ಅಲ್ಲದೇ ವಿವಿಧ ಅನಾರೋಗ್ಯ ಸಮಸ್ಯೆಗಳು ಶಮನವಾಗಲು ಉಪಯುಕ್ತವಾಗುವ ವಿವಿಧ ರಸಾಯನಿಕಗಳ ನಿಕ್ಷೇಪವನ್ನಾಗಿಸಿ ನಮಗೆ ಕೊಡುಗೆಯಾಗಿ ನೀಡಿದೆ.ದೈನಂದಿನ ಜೀವನದಲ್ಲಿ ಎದುರಾಗುವ ಸಾಮಾನ್ಯವಾದ ಅನಾರೋಗ್ಯ ಸಮಸ್ಯೆಗಳಿಗೆ ಬೆಂಡೆಕಾಯಿಗಳನ್ನು ಉಪಯೋಗಿಸಿ ಹೇಗೆ ಪರಿಷ್ಕಾರವನ್ನು ಪಡೆಯಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

### ಕೀಲುಗಳ ಬಿರಿತದಿಂದುಂಟಾಗುವ ಮೊಣಕಾಲು ನೋವಿಗೆ:

ದಿನವೂ ಒಂದು ಬಾರಿ 250 ಮಿ.ಲೀ ನೀರಿನಲ್ಲಿ 4-5 ಬೆಂಡೆಕಾಯಿಗಳನ್ನು ಅಡ್ಡವಾಗಿ ತುಂಡುಗಳಾಗಿ ಕತ್ತರಿಸಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ಮೇಲೆ ಶೋಧಿಸಿ ಕುಡಿಯಬೇಕು. ಇದೇ ಕಷಾಯವನ್ನು ಮುಕ್ಕಳಿಸಿ ಉಗುಳುತ್ತಿದ್ದರೆ ಬಾಯಿ ಹುಣ್ಣು, ಗಂಟಲು ನೋವು ಕಮ್ಮಿಯಾಗುತ್ತದೆ.

### ತಲೆಹೊಟ್ಟಿಗೆ :

ವಾರದಲ್ಲಿ 2-3 ಬಾರಿ ರಾತ್ರಿ ಸಮಯ ಬೆಂಡೆಕಾಯಿ ಗೊಜ್ಜನ್ನು ತಲೆಗೆ ಹೆಚ್ಚಿ ಬೆಳಗ್ಗೆ ತಲೆಸ್ನಾನ ಮಾಡಿದರೆ ಶೀಘ್ರದಲ್ಲಿ ವಿಕಾಸ ಕಂಡು ಬರುತ್ತದೆ.

### ಹೊಟ್ಟೆಯಲ್ಲಿನ ಉರಿಗೆ:

ದಿನವೂ ಒಂದು ಬಾರಿ 250 ಮಿ.ಲೀ. ನೀರಿನಲ್ಲಿ 4-5 ಎಲೆ ಬೆಂಡೆಕಾಯಿಯನ್ನು ತುಂಡುಮಾಡಿ ಹಾಕಿ 100 ಮಿ.ಲೀ ನೀರು ಉಳಿಯುವಂತೆ ಮರಳಿಸಿ,ಕೆಳಗಿಳಿಸಿ,ಬಿಸಿಯಾರಿದ ನಂತರ ಶೋಧಿಸಿ ಅದಕ್ಕೆ ಒಂದು ಟೀ ಸ್ಪೂನು ಜೇನು, 2 ಚಿಟಿಕೆ ಸೈಂಧವ ಲವಣ ಪುಡಿ ಕಲಿಸಿ ಸೇವಿಸುತ್ತಿರಬೇಕು. ಈ ಔಷಧಿ ಬಳಸು ವುದರಿಂದ ಮಲ-ಮೂತ್ರದ್ವಾರಗಳಲ್ಲಿನ ಉರಿ ಕೂಡ ತಗ್ಗುತ್ತದೆ.

### ಬಿಳಿಸೆರಗು ಕಾಯಿಲೆಗೆ :

ದಿನವೂ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ ಎರಡು ಬೀಜಗಳಿಲ್ಲದ ಬೆಂಡೆಕಾಯಿಗಳನ್ನು ಸಕ್ಕರೆಯೊಂದಿಗೆ ಕಲಿಸಿ ಸೇವಿಸುತ್ತಿದ್ದರೆ ಸ್ತ್ರೀಯರಲ್ಲಿ ಈ ಸಮಸ್ಯೆ ಶೀಘ್ರದಲ್ಲಿ ಕಮ್ಮಿಯಾಗುತ್ತದೆ. ಪುರುಷರಲ್ಲಿ ಸಹಾ ಶೀಘ್ರಸ್ಖಲನ ಸಮಸ್ಯೆ ಸಹಾ ತಗ್ಗುತ್ತದೆ. ಕಣ್ಣು, ಕಾಲು,ಮೈಯೆಲ್ಲಾ ಉರಿ,ನವೆಯ ಸಮಸ್ಯೆ ಕೂಡಾ ಪರಿಹಾರಗೊಳ್ಳುತ್ತವೆ.

### ಮೊಡವೆಗಳಿಗೆ :

ನಿತ್ಯವೂ ಒಂದು ಬಾರಿ ಬೆಂಡೆಕಾಯಿ ಗೊಜ್ಜನ್ನು ಮುಖಕ್ಕೆ ಲೇಪನ ಮಾಡಿ, ಒಂದೆರಡು ತಾಸು ಬಿಟ್ಟು ಮುಖವನ್ನು ಉಗುರು ಬೆಚ್ಚಗಿನ ನೀರಿನಲ್ಲಿ ತೊಳೆಯುತ್ತಿದ್ದರೆ ಮೊಡವೆಗಳ ಸಮಸ್ಯೆ ಕಡಿಮೆಯಾಗಿ ಮುಖದ ಚರ್ಮ ನುಣುಪಾಗಿ,ನಾಜೂಕಾಗಿ ಕಾಂತಿಯುತವಾಗಿ,ಕೋಮಲವಾಗಿ ತಯಾರಾಗುತ್ತದೆ.



**ಮಧುಮೇಹದ ನಿಯಂತ್ರಣಕ್ಕೆ:**

ಪ್ರತಿ ದಿನ ರಾತ್ರಿ ಹೊತ್ತು ತುದಿ ಕತ್ತರಿಸಿದ 2-3 ಬೆಂಡೆಕಾಯಿಗಳನ್ನು ತೆಗೆದುಕೊಂಡು ಉದ್ದವಾಗಿ ಹೆಚ್ಚಿ, 200 ಮಿ.ಲೀ. ನೀರಿನಲ್ಲಿ ಹಾಕಿ ಬೆಳಗ್ಗೆ ಶೋಧಿಸಿ ಆ ನೀರಿನಲ್ಲಿ ಒಂದು ಗ್ರಾಂ ಮೆಣಸಿನ ಪುಡಿ ಕಲಿಸಿ ಸೇವಿಸುತ್ತಿದ್ದರೆ ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಬಹಳ ಸಹಾಯಕವಾಗುತ್ತದೆ. ಈ ಔಷಧೀಯ ಸೇವನೆಯಿಂದ ಆಧುನಿಕ ಕೃತಕ ರಸಾಯನಿಕ ಔಷಧಿಗಳಾದ ಇನ್ಸುಲಿನ್ ಇತರ ಮಾತ್ರೆಗಳ ಪ್ರಮಾಣವನ್ನು (ಡೋಸ್) ಕಡಿಮೆ ಮಾಡಿಕೊಳ್ಳಬಹುದು.

**ಕೂದಲು ಸೊಂಪಾಗಿ ಬೆಳೆಯಲು :**

ವಾರಕ್ಕೆರಡು ಬಾರಿ 200 ಮಿ.ಲೀ. ನೀರಿನಲ್ಲಿ 3-4 ಬೆಂಡೆಕಾಯಿ ತುಂಡು ಮಾಡಿ ಹಾಕಿ ನೀರು ಮರಳುವವರೆಗೆ ಕುದಿಸಿ,ಕೆಳಗಿಳಿಸಿ, ಶೋಧಿಸಿ ಆ ನೀರನ್ನು ತಲೆಗೆ ಹಚ್ಚುತ್ತಿದ್ದರೆ ಕೇಶವು ಚೆನ್ನಾಗಿ, ನುಣುಪಾಗಿ, ಮೃದುವಾಗಿ, ದಟ್ಟವಾಗಿ ಬೆಳೆಯುತ್ತವೆ.

**ಮಲಬದ್ಧತೆಗೆ:**

7-10 ಬೆಂಡೆಕಾಯಿಯನ್ನು ತುಂಡಾಗಿ ಮಾಡಿ ಸ್ವಲ್ಪ ನೀರು ಸೇರಿಸಿ, ಕುದಿಸಿ ನಂತರ ಪೇಸ್ಟು, ಮಾಡಿ 2-3 ಗ್ರಾಂ ಜೀರಿಗೆ ಪುಡಿ, 2-3 ಗ್ರಾಂ ಹವೀಜದ ಪುಡಿ,2-3 ಚಿಟಿಕೆಯಷ್ಟು ಉಪ್ಪು ಸೇರಿಸಿ ರಾತ್ರಿ ಮಲಗುವಾಗ ಸೇವಿಸುತ್ತಿದ್ದರೆ ಬೆಳಗ್ಗೆ ಸಲೀಸಾಗಿ ಮಲವಿಸರ್ಜನೆಯಾಗುತ್ತದೆ.

**ಅಂಟುರೋಗ ಸಾಂಕ್ರಾಮಿಕ, ರಕ್ತ ನೀರಿನ ಸೋಂಕುಗಳಿಗೆ :**

ದಿನವೂ ಬೆಳಗ್ಗೆ ಸಾಯಂಕಾಲ ಬಾರಿಯೊಂದಕ್ಕೆ 200 ಮಿ.ಲೀ. 3 ಬೆಂಡೆಕಾಯಿಗಳನ್ನು ತುಂಡುಗಳಾಗಿ ಕತ್ತರಿಸಿ ಹಾಕಿ ಅರ್ಧ ಟೀಸ್ಪೂನ್ ತಾಳೆ ಕಲಕಂಡವನ್ನು ಕೂಡಾ ಹಾಕಿ 100 ಮಿ.ಲೀ ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿ ಕುಡಿಯುತ್ತಿದ್ದರೆ ವಿವಿಧ ಬಗೆಯ ಸೋಂಕುಗಳು ಅತಿ ಶೀಘ್ರದಲ್ಲೇ ಶಮನವಾಗುತ್ತವೆ.

**ಆ್ಯಂಟಿ ಬಯೋಟಿಕ್ಸ್ ದ್ವಾರ ಉಂಟಾಗುವ ದುಷ್ಪರಿಣಾಮಗಳನ್ನು ನಿವಾರಿಸಲು:**

ದಿನವೂ ಒಂದು ಬಾರಿ 100 ಮಿ.ಲೀ. ಮಜ್ಜಿಗೆಯಲ್ಲಿ 50 ಗ್ರಾಂ ಬೆಂಡೆಕಾಯಿಯ ಗೊಜ್ಜನ್ನು,ಚೆನ್ನಾಗಿ ಮಾಗಿರುವ ಒಂದು ಬಾಳೆ ಹಣ್ಣಿನೊಂದಿಗೆ ಕಲಿಸಿ ಸೇವಿಸುತ್ತಿದ್ದರೆ.ಹೆಚ್ಚು ಸಮಯ ಆ್ಯಂಟಿ ಬಯೋಟಿಕ್ಸ್ ಬಳಸುವ ಸಂದರ್ಭದಲ್ಲಿ ಹೊಟ್ಟೆ ಕಿವುಚುವುದು,ಕರಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ಆರೋಗ್ಯವು ಸಂರಕ್ಷಿಸಲ್ಪಡುತ್ತದೆ. ಮಧುಮೇಹ ವ್ಯಾಧಿಗ್ರಸ್ತರು ಬಾಳೆ ಹಣ್ಣಿಲ್ಲದೇ ಗೊಜ್ಜನ್ನು ಸೇವಿಸಬಹುದು.



## ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಪುಟ ಪುಟವೂ ಪ್ರೇರಣೆ




- **ಕೃತಿ :** ಸತ್ಸಂಗ ಸಂಪದ
- **ಲೇಖಕರು:** ಡಾ॥ಗುರುರಾಜ ಪೋಶೆಟ್ಟಿಹಳ್ಳಿ, ಸಂಸ್ಕೃತಿ ಚಿಂತಕರು
- **ಪ್ರಕಾಶಕರು :** ಪ್ರಣವ ಮೀಡಿಯಾ ಹೌಸ್ ಪ್ರಕಾಶನ , ಬೆಂಗಳೂರು
- **ದೂರವಾಣಿ :** 97393 69621
- **ಬೆಲೆ:** ರೂ. 200/-
- **ಪುಟ :** 248

ಕನ್ನಡ ಜನ ಕೋಟಿಯ ಜ್ಞಾನ ದೇಗುಲದಲ್ಲಿ ಪ್ರಣವ ಮೀಡಿಯಾ ಹೌಸ್ ಪ್ರಕಾಶನ ಇನ್ನೊಂದು ಹಣತೆ ಬೆಳಗಿಸಲು ಹರ್ಷಪಡುತ್ತಿದೆ. ಅದುವೇ ಸತ್ಸಂಗ ಸಂಪದ.

ಇಂದು ಪತ್ರಿಕೆಗಳಲ್ಲಿ ಅಂಕಣ ಬರೆಯುವುದು ಒಂದು ಫ್ಯಾಷನ್, ಕೆಲವು ಲೇಖಕರಿಗೆ ಪ್ರತಿಷ್ಠೆಯ ವಿಷಯ. ಸಾಹಿತಿ ಪತ್ರಿಕೋದ್ಯಮಗಳ ಸಾಲಿನಲ್ಲಿ ಸ್ಥಾನಮಾನ ಹೆಗ್ಗುರುತು.ಅನೇಕ ಅಂಕಣಕಾರರು ಬರೆಯುವ ಕೆಲವೇ ದಿನಗಳಲ್ಲಿ ಬಂಡವಾಳ ಮುಗಿದಿರುತ್ತದೆ. ಒತ್ತಡ ಹೆಚ್ಚಾಗುತ್ತದೆ. ಕ್ಲೀಷೆ ಬೆಳೆಯುತ್ತದೆ. ಒಂದು ದೃಷ್ಟಿಯಲ್ಲಿ ಪತ್ರಿಕೆಯ ಅಂಕಣಕಾರರು ಪತ್ರಿಕೆಗೆ ವಿಶಿಷ್ಟ ಆಯಾಮ ಕೊಡಬಲ್ಲರು. ಮೌಲ್ಯ ಹೆಚ್ಚಿಸಬಲ್ಲರು. ಅಂಕಣ ಪತ್ರಿಕೆಗಳ ಜೀವವಾಹಿನಿಯಾಗಬೇಕು. ಹರಿಯುವ ನೀರಿನಂತೆ ಓದುಗರಿಗೆ ಪ್ರಚೋದನೆ, ತೃಪ್ತಿ, ಆನಂದ ಕೊಡಬೇಕು.

ಸಾಹಿತ್ಯ ಪರಿಚಾರಿಕೆ ಚಟುವಟಿಕೆಗಳಿಂದ ಗಮನ ಸೆಳೆದ ಡಾ॥ ಗುರುರಾಜ ಪೋಶೆಟ್ಟಿಹಳ್ಳಿ ಸಾಹಿತ್ಯ ಮತ್ತು ಪತ್ರಿಕೋದ್ಯಮ ಎರಡೂ ಕ್ಷೇತ್ರಗಳನ್ನು ಅಭಿವ್ಯಕ್ತಿಯಾ ಮಾಧ್ಯಮವಾಗಿಸಿಕೊಂಡು ಕಳೆದೆರಡು ದಶಕದಿಂದ ದೇಸಿ ನೆಲೆಯ ಸಂಸ್ಕೃತಿ ಚಿಂತಕರಾಗಿದ್ದಾರೆ. ಕಿರಿ ವಯಸ್ಸಿನಲ್ಲೆ ಸಾರಸ್ವತ ಲೋಕದಲ್ಲಿ ಬಹುಮುಖಿ ಸಾಧನೆ ಮಾಡಿರುವ ಶ್ರೀಯುತರು ಬರೆಯುತ್ತಿರುವ ಅಂಕಣ 400 ದಿನಗಳ ಕಾಲ ನಿಯತವಾಗಿ ಪ್ರಕಟವಾಗಿ ಜನಮನ್ನಣೆ ಪಡೆದಿತ್ತು. ಈ ಲೇಖನಗಳಿಗೆ ಓದುಗರಿಂದ ಉತ್ತಮ ಪ್ರತಿಸ್ಪಂದನವಿತ್ತು. 'ಅಗುಳಿನಿಂದ ಅನ್ನ ಪರೀಕ್ಷೆ 'ನ್ಯಾಯದಂತೆ ಒಂದೆರಡು ಪ್ರಸಂಗಗಳನ್ನು ಓದಿದ ತತ್‌ಕ್ಷಣ ಅವುಗಳ ಸ್ವಾರಸ್ಯ ಗಮನಕ್ಕೆ ಬರುತ್ತದೆ. ಪತ್ರಿಕೆಯಲ್ಲಿ ಇದೊಂದು ವಿನೂತನ ಪ್ರಯೋಗವೆಂದೂರೂ ತಪ್ಪಾಗಲಾರದು.

ಸತ್ಸಂಗ ಸಂಪದ ಆಧ್ಯಾತ್ಮಿಕ ಜಾಗೃತಿಗೆ ಸರಳ, ಸ್ಪಷ್ಟ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ಮಾರ್ಗದರ್ಶನ ಮಾಡುವ ಮಹತ್ವದ ಕೃತಿಯಾಗಿದೆ. ಈ ಕೃತಿ ಶರಣರ ವಚನದಂತೆ ಮನ ತೆರೆದು ಮಾತನಾಡುತ್ತದೆ. ಕೃತಿಯ ಪರಿವಿಡಿ ನೋಡಿದರೆ ಅದರ ಆಳ ವಿಸ್ತಾರ ಅರ್ಥವಾಗುತ್ತದೆ. ರಾಮಾಯಣ / ಮಹಾಭಾರತ ಹಲವಾರು ದಾರ್ಶನಿಕರ ಜೀವನಾಲೋಕವನ್ನು ಅವರ ಆದರ್ಶ ವಿಚಾರಗಳು ಇಲ್ಲಿರುವುದರಿಂದ ಜಿಜ್ಞಾಸು ಓದುಗರಿಗೆ ಇದು ಸ್ಫೂರ್ತಿದಾಯಕ ಪುಸ್ತಕವಾಗುವುದರಲ್ಲಿ ಸಂದೇಹವಿಲ್ಲ.ಸುಪ್ತ ಪ್ರತಿಭೆಯನ್ನು ಓದುಗರಿಗೆ ಪರಿಚಯಿಸಿದ ಸಂಯುಕ್ತ ಕರ್ನಾಟಕಕ್ಕೆ ಧನ್ಯವಾದಗಳು.

**- ಡಾ ॥ ಲಕ್ಷ್ಮೀಕಾಂತ ಮೊಹರೀರ, ಸಂಸ್ಕೃತ ಉಪನ್ಯಾಸಕರು**

### ಲೇಖಕರ ಮನದಾಳದ ಮಾತು

ಈ ಪುಸ್ತಕದ ಉದ್ದೇಶ ಸರಳವಾಗಿದೆ. ಖಾಲಿ, ಹಾಳೆ, ಇಂಕು ಪೆನ್ನು ಅನುಭವ ಇಲ್ಲಿ ಬರೆಸಿದೆ. ಹಾಗೆ ಬರೆದಿದ್ದೂ ನನ್ನ ಆತ್ಮ ವಿಶ್ವಾಸವನ್ನು ನೆಮ್ಮದಿಯನ್ನು ಹೆಚ್ಚಿಸಿದೆ. ಒಂದು ಮಾತ್ರ ಅನುಭವಕ್ಕೆ ಬಂತು ಏನು ನೋಡಿದರೂ ಏನು ಓದಿದರೂ ಏನು ಕೇಳಿದರೂ, ಕಾಣುವ ವಿಷಯಗಳ ಹಿಂದೆ ಕಾಣದ ಅವುಗಳ ಮಹತ್ವ ದೊಡ್ಡದೆಂಬ ಅನುಭವ ಅದು. ಈ ಅನುಭವದ ಮಾರ್ಗದಲ್ಲಿ ಕಣ್ಣು ಮುಚ್ಚಿ ಕಾಣಬೇಕಾದ ಪರವಸ್ತುವನ್ನು ಕಾಣಲು ಎಷ್ಟು ದೂರ ನಡೆಯಬೇಕೆಂಬುದೇ ಅಳತೆ ಮಾಡಲು ಸಾಧ್ಯವಾಗುತ್ತಿಲ್ಲ. ಇದು ಶೈಶವವೇ ಆಗಿರಬಹುದು. ಈ ಜನ್ಮ ಸಾಲದೇ ಹೋಗಬಹುದು. ಮತ್ತೆಷ್ಟು ಜನ್ಮಗಳ ಪಯಣ ಸಾಗಬೇಕೋ ಕಾಲ ಕರ್ಮ ಸ್ವಭಾವ ಜೀವ ಇವೆಲ್ಲವೂ ಗುರಿ ಮುಟ್ಟ ಬೇಕಾದ ಪರವಸ್ತುವಿನ ಅಧೀನದಲ್ಲಿರುವಾಗ ನಮ್ಮ ಮುಂದಿನ ಗತಿ ನಮಗೆ ಅರಿವಾಗುವುದೂ ಹೇಗೆ? ಬರವಣಿಗೆಯ ದಿಕ್ಕು ದಿಸೆ ಪ್ರೇರಣೆ ಎಲ್ಲವೂ ಒಬ್ಬೊಬ್ಬರಿಗೆ ಒಂದು ರೀತಿ ಹಾಗಾಗಿಯೇ ಈ ಕೃತಿಯಲ್ಲಿ ಎಲ್ಲೂ ನಾನು ಹೇಳಿದ್ದೇ ದಾರಿ ಎಂದು ಸಾರುತ್ತಿಲ್ಲ.

ಬದುಕು ಮುಗಿಯದ ಪಯಣ. ಇಲ್ಲಿ ನಮ್ಮ ಅಂತರಂಗದ ಸ್ವಚ್ಛ ಮನಸ್ಸುಗಳನ್ನು ಸದೃಢವಾಗಿ ಬೆಸೆಯುವ ವಿಕಾಸಗೊಳಿಸುವ ಉನ್ನತ ಸಾಂಸ್ಕೃತಿಕ ಹಾಗೂ ಸಂಸ್ಕಾರಯುತ ಸಾಧನೆಯ ಶಕ್ತಿ ನಮ್ಮದಾಗಲಿ ಇಂತಹದೊಂದು ಪ್ರೇರಣೆ ನಿಮಗೆ ದೊರೆತರೆ ನನ್ನ ಶ್ರಮಕ್ಕೇ ಸಾರ್ಥಕತೆಯ ಪುಳಕ ಸಿಕ್ಕಂತೆ. ವೈಯುಕ್ತಿಕ ಸಾಮಾಜಿಕ ಹೀಗೆ ಏನಾದರೂ ಸಂದೇಶಗಳು ಹೊಳೆದರೆ, ನಿಮ್ಮ ಅಭಿಪ್ರಾಯ ಏನೇ ಇರಲಿ ಸ್ವೀಕೃತ.

18

# ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
9448386886



ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನಲ್ಲಿರುವ ಜಾವಗಲ್ಲು ಎಂಬ ಗ್ರಾಮವು ಹಳೇಬೀಡು ಬಾಣಾವರ ರಸ್ತೆಯಲ್ಲಿ ಹಳೇಬೀಡಿನಿಂದ 20 ಕಿ.ಮೀ ಹಾಗೂ ಬಾಣಾವರದಿಂದ 28 ಕಿ.ಮೀ. ದೂರದಲ್ಲಿದೆ.

ಜಾವಗಲ್ಲು ಸಹಾ ಹಿಂದೆ ಹೊಯ್ಸಳರ ಆಡಳಿತಕ್ಕೊಳಪಟ್ಟಿರುವ ಪ್ರದೇಶವಾಗಿದ್ದು ಅವರ ಕಾಲದಲ್ಲಿ ನಿರ್ಮಿಸಿರುವ ಲಕ್ಷ್ಮೀನರಸಿಂಹ, ಗಂಗಾಧರೇಶ್ವರ ಮತ್ತು ಜೈನಬಸದಿಯಿದೆ. ಜಾವಗಲ್ಲು ಗ್ರಾಮವನ್ನು ಬಾಣಾವರದ ಕಡೆಯಿಂದ ಪ್ರವೇಶಿಸುವಾಗ ಸಿಗುವ ಬೃಹತ್ ಕೆರೆಯನ್ನು ವಿಜಯನಗರಸರ ಕಾಲದಲ್ಲಿ ಜಾವಗಲ್ಲನ್ನು ಆಳುತ್ತಿದ್ದ ಭೈರನೆಂಬ ಮಾಂಡಲೀಕನು ನಿರ್ಮಿಸಿರುವನು. ಇವನ ಕಾಲದಲ್ಲಿ ಜಾವಗಲ್ಲಿನಲ್ಲಿ ಕೋಟೆ ಹಾಗೂ ಊರಿನ ಹೆಬ್ಬಾಗಿಲು ಸಹಾ ನಿರ್ಮಾಣವಾಗಿರುವುದು ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ದೊರೆತಿರುವ ಶಾಸನದಿಂದ ತಿಳಿದು ಬರುವುದು.

ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯವು ಹೊಯ್ಸಳರಸರು ನಿರ್ಮಿಸಿರುವ ಸುಂದರ ದೇವಾಲಯಗಳಲ್ಲೊಂದು. ದೇವಾಲಯವು ತ್ರಿಕೂಟಾಚಲವಾಗಿದ್ದು, ಪ್ರಧಾನ ಗರ್ಭಗುಡಿಯಲ್ಲಿ ಶ್ರೀಧರ (ಚಕ್ರ,ಗದಾ,ಶಂಖ,ಪದ್ಮ) ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹ ದಕ್ಷಿಣ ಗುಡಿಯಲ್ಲಿ ವೇಣುಗೋಪಾಲರ ಸೊಗಸಾದ ಮೂರ್ತಿಗಳಿವೆ. ದೇವಾಲಯವು ಮೂರು ಗರ್ಭಗೃಹಗಳು, ಒಂದು ಅಂತರಾಳ ಹಾಗೂ ನವರಂಗ, ಸಣ್ಣ ಮುಖಮಂಟಪ ಹಾಗೂ ಪ್ರವೇಶದ್ವಾರಗಳನ್ನು ಹೊಂದಿದೆ. ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯವು ನಕ್ಷತ್ರಾಕಾರದ ಜಗಲಿಯ ಮೇಲಿದ್ದು ಅಧಿಷ್ಠಾನ ಪಟ್ಟಿಗೆಯಲ್ಲಿ ಶಿಲ್ಪಗಳ ಸಾಲುಗಳಿವೆ. ಆನೆಗಳ, ಅಶ್ವಗಳ ಸಾಲು,ಲತಾ ಪಟ್ಟಿಗೆಗಳು ಹಾಗೂ ರಾಮಾಯಣದ ಕಥಾನಕಗಳನ್ನು ಚಿತ್ರಿಸಲಾಗಿದೆ. ದೇವಾಲಯದ ಹೊರ ಭಿತ್ತಿಯು ಎರಡು ಹಂತಗಳಲ್ಲಿ ಮೂಡಿಬಂದಿದ್ದು, ಮೇಲಿನ ಹಂತಗಳಲ್ಲಿ ಶಿಖರದ ಮಾದರಿಯ ಅಲಂಕಾರಗಳು ಮತ್ತು ಕೆಳಗಿನ ಹಂತದಲ್ಲಿ ದೇವಾನುದೇವತೆಗಳ ಶಿಲ್ಪಗಳು ಅತ್ಯಂತ ಸುಂದರವಾಗಿದ್ದು ದೇವಾಲಯದ ಅಂದವನ್ನು ಹೆಚ್ಚಿಸಿದೆ. ಹೊಯ್ಸಳರ ಕಾಲದ ಎಲ್ಲ ವೈಷ್ಣವ ದೇವಾಲಯಗಳಲ್ಲಿರುವಂತೆ ವಿಷ್ಣುವಿನ 24 ಮೂರ್ತಿಗಳು ಭೂ ವರಾಹ, ಪರವಾಸು ದೇವ, ವೇಣುಗೋಪಾಲ ಮುಂತಾದ ಮೂರ್ತಿಗಳು ಗಮನ ಸೆಳೆಯುತ್ತವೆ. ಮುಖಮಂಟಪದ ವಿತಾನದಲ್ಲಿ ಅಷ್ಟದಿಕ್ಪಾಲಕರು ತಮ್ಮ ವಾಹನಗಳ ಮೇಲೆ ಅಸೀನರಾಗಿರುವಂತೆ ಚಿತ್ರಿಸಲಾಗಿದೆ. ನವರಂಗದ ಮಧ್ಯದ ಭುವನೇಶ್ವರಿಯು ಬಹಳ ಅಂದವಾಗಿ ಮೂಡಿ ಬಂದಿದೆ. ಈ ದೇವಾಲಯದ ಪ್ರಧಾನ ಗರ್ಭಗುಡಿಗೆ ಅಂದವಾದ ಶಿಖರವಿದೆ. ಈ ದೇವಾಲಯದ ನಿರ್ಮಾಣದ ಕಾಲವನ್ನು ತಿಳಿಸುವ



ಶಾಸನಗಳು ದೊರೆಯುವುದಿಲ್ಲವಾದರೂ ದೇವಾಲಯವನ್ನು ನಿರ್ಮಿಸಿರುವುದು ಮಹಾಶಿಲ್ಪಿ ಮಲಿತಮನಾಗಿರುವುದರಿಂದ, ದೇವಾಲಯದ ಕಾಲವನ್ನು ಕ್ರಿ.ಶ. 1250 ರ ಸುಮಾರಿನಲ್ಲಿ ನಿರ್ಮಿತವಾಗಿರಬಹುದೆಂದು ನಿರ್ಧರಿಸಬಹುದು. ಜಾವ ಗಲ್ಲಿನ ಲಕ್ಷ್ಮೀನರಸಿಂಹ ಸ್ವಾಮಿಯು ಬ್ರಹ್ಮ ರಥೋತ್ಸವವು ಪ್ರತಿವರ್ಷ ಬುದ್ಧ ಪೌರ್ಣ ಮಿಯ ದಿನ ಬಹಳ ವೈಭವವಾಗಿ ನೆರವೇರುವುದು.

**ಹೀಗೆ ಬನ್ನಿ :**

ಹಾಸನ ಜಿಲ್ಲೆ, ಹಳೇಬೀಡು - ಬಾಣಾವರ ರಸ್ತೆಯಲ್ಲಿರುವ ಜಾವಗಲ್ಲು, ಹಳೇಬೀಡಿನಿಂದ ಸುಮಾರು 20 ಕಿ.ಮೀ. ದೂರದಲ್ಲಿದೆ. ಹಳೇಬೀಡಿನ ವಿಶ್ವ ಪ್ರಸಿದ್ಧ ಹೊಯ್ಸಳ ದೇವಾಲಯವನ್ನು ವೀಕ್ಷಿಸಿದ ಪ್ರವಾಸಿಗರು ನಂತರ ಬಾಣಾವರ ರಸ್ತೆಗೆ ಬಂದು ಜಾವಗಲ್ಲನ್ನು ಸೇರಬಹುದು ಅಥವಾ ಬೆಂಗಳೂರು ಹೊನ್ನಾವರ ರಸ್ತೆ ಯಲ್ಲಿರುವ ಬಾಣಾವರದಿಂದಲೂ ಅದೇ ಹಳೇಬೀಡು ರಸ್ತೆಯಲ್ಲಿ ತಿರುಗಿ ಜಾವ ಗಲ್ಲಿಗೆ ಬರಬಹುದು.

# ಗಾವೋ ವಿಶ್ವಸ್ಯ ಮಾತರಃ

ಗೋಮಾತೆ ವಿಶ್ವಮಾತೆಯಾಗಿ ನಮ್ಮಲ್ಲಿ ಮಹತ್ವವಿದೆ. ಗೋಮಾತೆಯ ಮಹತ್ವ ಹಿಂದೂ ಸಂಪ್ರದಾಯದಲ್ಲಿ ಮುಂದುವರೆದು ಪ್ರಸಿದ್ದವಾಗಿದೆ. ಶ್ರೀವೇದವ್ಯಾಸರು ಮಹಾಭಾರತದಲ್ಲಿ ಯುಧಿಷ್ಟಿರ ಮಹಾರಾಜನಿಗೆ ಗೋವಿನ ಮಹಾತ್ಮೆಯನ್ನು ಗೋಸಾವಿತ್ರಿ ಸ್ತೋತ್ರದಲ್ಲಿ ಬಣ್ಣಿಸುತ್ತ ಗೋವು ವಿರಾಡ್ರೂಪಿ ಭಗವಂತನ ಸ್ವರೂಪವಾಗಿದ್ದು ಎಲ್ಲ ಪಾಪಗಳಿಂದ ಮುಕ್ತನಾಗಲು ಭಗವಂತನ ಅನುಗ್ರಹ ಪಡೆಯಲು ಸುಲಭ ಸರಳ ರೀತಿಯಲ್ಲಿ ಆರಾಧಿಸುವ ದೇವತೆಯಾಗಿದೆ ಎಂದು ವಿವರಿಸಿರುವರು.''ಗಾವಾಂ ಅಂಗೇಷು ತಿಷ್ಟಂತಿ ಭುವನಾನಿ ಚತುರ್ದಶ''ಗೋವಿನ ದೇಹದ ಕಣಕಣದಲ್ಲೂ ೧೪ ಲೋಕಗಳನ್ನು ವ್ಯವಸ್ಥಿತವಾಗಿ ನಡೆಸತಕ್ಕ ಬೇರೆ ಬೇರೆ ಶಾಖೆಯು ಕರ್ತವ್ಯ ಮಾಡತಕ್ಕ ಮೂವತ್ಮೂರು ಕೋಟಿ ದೇವತೆಗಳು ಸ್ಥಳಗಳಲ್ಲಿ ನೆಲಸಿರುತ್ತಾರೆ. ಅಖಿಲ ಬ್ರಹ್ಮಾಂಡವನ್ನು ಒಳಗೊಂಡ ದೇವತೆಗಳು ಆ ವಾಸಸ್ಥಾನವು ಗೋವಿನ ಶರೀರವಾಗಿದ್ದು ಗೋವು ಚಲಿಸುವ ದೇವಾಲಯವಾಗಿದೆ. ಗೋವಿನಿಂದಾಗುವ ಪ್ರಯೋಜನ ವಾರದಲ್ಲಿ ಏಳು ದಿನವೂ ಗೋವನ್ನು ಪೂಜಿಸುವುದು ಸೂಕ್ತ. ಪ್ರತಿದಿನ ಒಂದೊಂದು ವಿಶೇಷತೆಯನ್ನು ಹೊಂದಿರುತ್ತದೆ. ಸೋಮವಾರದಂದು ಹಸುವಿಗೆ ಹುಲ್ಲು, ಆಹಾರ, ಸೊಪ್ಪು ಬಾಳೇಹಣ್ಣು ನೀಡುವುದರಿಂದ ನಮ್ಮ ಮನಸ್ಸು ಮೃದುವಾಗುತ್ತದೆ. ಪಿತೃದೋಷ ಕಳಿಯುವುದು. ಮಂಗಳವಾರ ಹಸುವಿಗೆ ನೀರು, ಆಹಾರ ಕೊಡುವುದರಿಂದ ವಸತಿ, ಭೂಮಿ ಖರೀದಿಗೆ ಅವಕಾಶ ಕಲ್ಪಿಸಿಕೊಡುತ್ತದೆ. ಬುಧವಾರ ಆಹಾರ ನೀಡಿದರೆ ವೃತ್ತಿ ಜೀವನದಲ್ಲಿ ಪ್ರಗತಿ ಉಂಟಾಗುತ್ತದೆ. ಗುರುವಾರ ಅಕ್ಕಿ ಗಂಜಿ ನೀಡಿದರೆ ಪೂರ್ವ ಜನ್ಮದ ದೋಷ ಕಳೆಯುವುದು ಶುಕ್ರವಾರ ಪೂಜಿಸುವುದರಿಂದ ಲಕ್ಷ್ಮಿ ಕಟಾಕ್ಷವಾಗುವುದು. ಶನಿವಾರ ಆಹಾರ ನೀಡಿದರೆ ಬಡತನ ಕಳೆಯುವುದು. ಗೋವಿಗೆ ಆಹಾರ, ಅನ್ನ, ನೀರು ನೀಡಿದರೆ ಸಾವಿರ ಜನ್ಮಕ್ಕೆ ಅನ್ನದಾನ ಮಾಡಿದ ಪುಣ್ಯ ಬರುವುದು. ಮಾನವ ಕೋಟಿಗೆ ಅಮೃತದಂತಹ ಹಾಲುಣಿಸುವ ಮಾತೆ ಗೋವು ಗೋಮೂತ್ರ, ತುಪ್ಪ, ಬೆಣ್ಣೆ ಮಜ್ಜಿಗೆ ಮೊಸರುಗಳಿಂದ ಜೀವನ ಸ್ವಾಸ್ಥ್ಯ ನಿರ್ಮಿಸುವ ಸಂಜೀವಿನಿ ಗೋವು. ತನ್ನ ಉಸಿರಾಟ ಸ್ಪರ್ಶ ದರ್ಶನಗಳಿಂದ ಪ್ರಕೃತಿ ಮಂಡಲವನ್ನೇ ಪಾವನಗೊಳಿಸುವ ಜಗದುಪಕಾರಿಯಾಗಿದೆ ಗೋವು. ಅಂತಹ ಗೋವನ್ನು ಪೂಜಿಸಿ, ಪ್ರಾರ್ಥಿಸೋಣ.





# ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

## "ನೀನೆ ಗತಿಯೆಂದು ನಂಬಿದೆ ಕಾಯಯ್ಯ ಶ್ರೀನಿವಾಸ ಎನ್ನ" ಕೀರ್ತನೆಯ ಒಳನೋಟ

– ಡಾ|| ಸುಭಾಸ ಕಾಖಂಡಕಿ
79754 42458

ಇನ್ನು ನುಡಿ ೧ ರಲ್ಲಿ

"ನೀನೆ ಗತಿಯೆಂದು ನಂಬಿದೆ ಕಾಯಯ್ಯ ಶ್ರೀನಿವಾಸ"

ಇದೊಂದು ಆತ್ಮನಿವೇದನೆಯ ಕೀರ್ತನೆ

ನೀನೆಗತಿಯೆಂದು ನಂಬಿದೆನೋ ಶ್ರೀನಿವಾಸ
ಹೀನ ಗುಣಗಳೆಣಿಸಲಿ ಬ್ಯಾಡ ದಯ ಮಾಡೋ
ಶ್ರೀನಿವಾಸ ||೧||

ಇಲ್ಲಿ "ಅನ್ಯಥಾ ಶರಣಂ ನಾಸ್ತಿ" ಎನ್ನುವಂತೆ ಅನುಗಾಲವೂ ಶ್ರೀಹರಿಯನ್ನೆ ನಂಬಿದ ದಾಸರು ಮತ್ತೆ - ಮತ್ತೆ ನೀನೆ ಗತಿ ಎಂದು ಹಂಬಲಿಸಿ ಹೇಳುತ್ತಾರೆ. ನನ್ನ ಹೀನ ಗುಣಗಳನ್ನು ಎಣಿಸದೆ ನನ್ನ ಕೈ ಹಿಡಿದು ನಡೆಸೊ ಎಂದಿದ್ದಾರೆ ದಾಸರು ನುಡಿ - ೧ ರಲ್ಲಿ

ಇನ್ನು ನುಡಿ ೨ ರಲ್ಲಿ

ನಾನು ದುಷ್ಕೃತ ಫಲವ ಉಂಡೆ ಇನ್ನಾರೆ
ಶ್ರೀನಿವಾಸ
ಎಂದು ದುರ್ವಿಷಯಕೆ ಮನ ಎರಗದಂತೆ
ಮಾಡೊ ಶ್ರೀನಿವಾಸ ||೨||

ಹಿಂದೆ ಮಾಡಿದ ಕರ್ಮಗಳ ಫಲ, ನಾನು ಅನುಭವಿಸಿ ಬಿಟ್ಟಿದ್ದೇನೆ.ಮತ್ತೆ ದುರ್ಮಾರ್ಗದ ಹಾದಿ ಹಿಡಿದರೆ, ಮತ್ತೆ ನಾನು ಮಾಡುವ ಕರ್ಮಗಳ ಫಲವನ್ನು ಅನುಭವಿಸಬೇಕಾದೀತು. ಆದ್ದರಿಂದ ಕೆಟ್ಟ ಚಿಂತನೆಗಳತ್ತ ನನ್ನ ಮನಸ್ಸು ಹೋಗದಂತೆ ಮಾಡೋ ಹೇ ! ಶ್ರೀನಿವಾಸಾ! ಎಂದು ಆರ್ತ ಭಾವದಿಂದ ದಾಸರು ಭಗವಂತನನ್ನು ಮೊರೆಯಿಡುತ್ತಿದ್ದಾರೆ.

ಇನ್ನು ನುಡಿ ೩ ರಲ್ಲಿ

ಸತ್ಕಥಾ ಶ್ರವಣ ಭಾಗ್ಯವ ಕೊಡು ಅನುದಿನ ಶ್ರೀನಿವಾಸಾ
ಎನ್ನ
ಹೃತ್ಕಮಲದಿ ವ್ಯಕ್ತನಾಗಯ್ಯ ಶ್ರೀನಿವಾಸಾ ||೩||

ಸತತವಾಗಿ ನಿನ್ನ ಕಥಾ ಶ್ರವಣ ಮಾಡಿ ಅನುದಿನವು ನಿನ್ನ ಧ್ಯಾನವ ಮಾಡಿ, ನಿನ್ನನ್ನೇ ನನ್ನ ಹೃದಯದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವಂಥ ಭಾಗ್ಯ ಕೊಡೋ, ಬಿಂಬ ರೂಪಿಯಾದ ಪರಮಾತ್ಮನ ಬಿಂಬ ದರ್ಶನವನ್ನು ಕೊಡೋ ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ ದಾಸರು.

ಇನ್ನು ನುಡಿ ೪ ರಲ್ಲಿ

ಪುತ್ರ ಕಳತ್ರ ಮಿತ್ರರು ನಿನ್ನ ದಾಸರೋ ಶ್ರೀನಿವಾಸ ತ್ವದ್ಭೃತ್ಯ
ಭೃತ್ಯರ ಪರಿಚಾರಕ ನಾನು ಶ್ರೀನಿವಾಸಾ ||೪||

ನನ್ನ ಬಂಧು ಬಾಂಧವರೆಲ್ಲ ನಿನ್ನ ದಾಸರು ಆ ದಾಸರ ದಾಸ ನಾನು ಶ್ರೀನಿವಾಸಾ. ಹೇ ಶ್ರೀನಿವಾಸ ನಾನು ನಿನ್ನ ದಾಸರ ದಾಸಾನು ದಾಸ ಸ್ವಾಮಿ ದಯತೋರು, ಉದ್ಧಾರಮಾಡು ಎನ್ನ ಎಂದು ಅನನ್ಯವಾಗಿ ಶ್ರೀನಿವಾಸನನ್ನು ಪ್ರಾರ್ಥಿಸುತ್ತಿದ್ದಾರೆ ದಾಸರು.

ಇನ್ನು ೫ ನುಡಿಯಲ್ಲಿ

ಅನಂತ ಜನ್ಮದ ಸತ್ಕರ್ಮ ನಿನಗೇವೆ ಶ್ರೀನಿವಾಸ ನಿತ್ಯ
ದೀನೋದ್ಧಾರ ಪ್ರಸನ್ನ ವೆಂಕಟ ಮುಕುಂದ ಶ್ರೀನಿವಾಸ ||೫||

ಹೇ ! ಶ್ರೀನಿವಾಸ ಅನಂತ ಜನ್ಮದಲ್ಲಿಯೂ ಸತ್ಕರ್ಮಗಳನ್ನೇ ಮಾಡಿಸಿ ದೀನೋದ್ಧಾರಕನಾದ ಪ್ರಸನ್ನವೆಂಕಟಾ, ಹೇ ಮುಕುಂದಾ! ಹೇ ಶ್ರೀನಿವಾಸ, ಎಲ್ಲರನ್ನು ಉದ್ಧಾರಮಾಡು ಎಂದು ದಾಸರು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.



# ನಾರದ ಮಹರ್ಷಿಗಳು - ಭಕ್ತಿ ಮಾರ್ಗದ ಆದ್ಯ ಪ್ರವರ್ತಕರು

- ಪ್ರಣವ




ಭಾರತದ ಇತಿಹಾಸದಲ್ಲಿ ಒಂದು ಸಾವಿರ ವರ್ಷದ ಹಿಂದೆ ಇಲ್ಲಿನ ಧರ್ಮ, ಸಂಸ್ಕೃತಿ, ಪರಂಪರೆಗಳಿಗೆ ಭಾರಿ ಅಘಾತ ಉಂಟಾಗಿತ್ತು. ಆಗ ಅದನ್ನು ಉಳಿಸಿದ್ದೇ ಭಕ್ತಿ ಮಾರ್ಗ. ಭಕ್ತಿ ಪಂಥವೆಂದು ಕರೆಯಲ್ಪಡುವ ಈ ಮಾರ್ಗದಿಂದ ಹಿಂದೂ ಧರ್ಮಕ್ಕೆ ರಕ್ಷಣೆ ದೊರೆಯಿತು. ಎಲ್ಲ ಜಾತಿ ವರ್ಗಗಳಿಗೆ ಸೇರಿದ ಲಕ್ಷಾಂತರ ದೊಡ್ಡ ಚಿಕ್ಕ ಸಾಧು ಸಂತರು ಆವಿರ್ಭವಿಸಿ ಜನರಲ್ಲಿ ಭಕ್ತಿಯ ಮೂಲಕ ಭಗವಂತನನ್ನು ಸೇವಿಸಿ ಮೋಕ್ಷವನ್ನು ಪಡೆಯಬಹುದೆಂದು ಬಹು ಪರಿಣಾಮಕಾರಿಯಾಗಿ ಉಪದೇಶಿಸಿದರು.

ಅದರಿಂದ ಇಡೀ ಭಾರತಾದ್ಯಂತ ಭಕ್ತಿಮಾರ್ಗ ಪಸರಿಸಿತು. ವಿಶೇಷವಾಗಿ ಸಮಾಜದ ಶೂದ್ರರು, ದಲಿತರು, ಪಂಚಮರೇ ಮುಂತಾದ ತಥಾಕಥಿಕ ಕೆಳಜಾತಿಗಳಿಂದಲೂ ಶ್ರೇಷ್ಠ ಸಂತರು ಸೃಷ್ಟಿಯಾಯಿತು. ಆ ಭಕ್ತಿ ಮಾರ್ಗದ ಆದ್ಯ ಪ್ರವರ್ತಕರು ನಾರದರು. ಭಕ್ತಿಯನ್ನು ಸಾರುವ ಅವರ 'ನಾರದ ಭಕ್ತಿ ಸೂತ್ರಗಳು' ಇಂದಿಗೂ ಭಕ್ತಿಯ ಮಹಿಮೆಯನ್ನು ಸಾರುತ್ತಿರುವ ಕೃತಿ. ಅವರ 'ನಾರದ ಸ್ಮೃತಿ' ಎಂಬ ಕೃತಿ ನ್ಯಾಯಶಾಸ್ತ್ರಕ್ಕೆ ಅವರು ಬರೆದಿರುವ ಅಮೂಲ್ಯ ವ್ಯಾಖ್ಯಾನ. 'ನಾರದ ಪುರಾಣ' ಅವರ ಬಗ್ಗೆ ಇರುವ ಒಂದು ಪೌರಾಣಿಕ ಗ್ರಂಥ.

'ನಾರದ' ಎಂಬ ಹೆಸರು ಕೇಳಿದ ಕೂಡಲೇ ನಮ್ಮ ಕಣ್ಣಮುಂದೆ ಬರುವುದು ವೀಣೆಯನ್ನು ಹಿಡಿದು, ನಾರಾಯಣ ನಾಮಸ್ಮರಣೆ ಮಾಡುತ್ತ ಮೂರು ಲೋಕಗಳಲ್ಲಿಯೂ ಸಂಚಾರ ಮಾಡುತ್ತಿರುವ ಒಬ್ಬ ಋಷಿಯ ಚಿತ್ರ. ಅನೇಕ ಪೌರಾಣಿಕ ಘಟನೆಗಳಿಗೆ ಕಾರಣ ಕರ್ತರಾದ ಅವರನ್ನು 'ಕಲಹಪ್ರಿಯ'ರೆಂದು ಭಾವಿಸಿರುವವರೇ ಹೆಚ್ಚು ಮಂದಿ. ಆದರೆ ನಾರದರು ದೇವಕಾರ್ಯಗಳಿಗೆ ಸಹಾಯ ಮಾಡುತ್ತ ಜಗತ್ತಿನ ಒಳಿತಿಗಾಗಿ ಶ್ರಮಿಸುತ್ತಿದ್ದ ಓರ್ವ ದೇವರ್ಷಿಗಳು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ತನ್ನ ವಿಭೂತಿಗಳನ್ನು ವಿಸ್ತರಿಸುತ್ತ 'ದೇವರ್ಷೀಣಾಂ ಚ ನಾರದಃ' ಎಂದು ನಾರದರನ್ನು ತನ್ನ ಅಂಶವೆಂದೇ ಸಾರಿದ್ದಾನೆ. ಅವರು ತಪಸ್ಸಿನಿಂದ ಸಕಲ ಪಾಪಗಳನ್ನು ಕಳೆದುಕೊಂಡು ಸತ್ಯಸಂಧರಾಗಿ ವೇದ ವೇದಾಂಗಗಳ ಮರ್ಮವನ್ನು ಅರ್ಥಮಾಡಿಕೊಂಡು, ಅದನ್ನು ಎಲ್ಲರಿಗೂ ತಿಳಿಯ ಹೇಳುತ್ತಿದ್ದರು.

## ಬ್ರಹ್ಮ ಮಾನಸಪುತ್ರ

ನಾರದರು ಬ್ರಹ್ಮನ ಹತ್ತು ಮಂದಿ ಮಾನಸಪುತ್ರರಲ್ಲಿ ಒಬ್ಬರು. 'ನಾರಂ' ಎಂದರೆ ನರರಿಗೆ ಸಂಬಂಧಿಸಿದ ಧರ್ಮ. ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಸಾಮಾನ್ಯ ಜನರಿಗೂ ತಿಳಿಯುವಂತೆ ಹೇಳುತ್ತಿದ್ದವರು ನಾರದರು. ಅಂದು ದೇವತೆಗಳು ಮತ್ತು ರಾಕ್ಷಸರು-ಇಬ್ಬರಲ್ಲಿಯೂ ಧೈರ್ಯವಾಗಿ ಮಾತನಾಡುತ್ತಿದ್ದವರು ನಾರದರೊಬ್ಬರೇ. ಸಕಾಲದಲ್ಲಿ ಅವರು ಎಲ್ಲರನ್ನೂ ಎಚ್ಚರಿಸುತ್ತಿದ್ದರು. ಭಾಗವತ ಮಹಾಪುರಾಣದಲ್ಲಿ ನಾರದರ ಪೂರ್ವ ಜನ್ಮವೃತ್ತಾಂತ ಬರುತ್ತದೆ. ತಮ್ಮ ಪೂರ್ವಜನ್ಮವನ್ನು ಕುರಿತು ಸ್ವತಃ ನಾರದರು ಹೇಳಿದ್ದನ್ನು ವ್ಯಾಸರು ಅಲ್ಲಿ ಬರೆದಿದ್ದಾರೆ.

ನಾರದರು ಹಿಂದಿನ ಜನ್ಮದಲ್ಲಿ ವೇದಾಧ್ಯಯನಶೀಲರಾದ ಬ್ರಾಹ್ಮಣರೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ದಾಸಿಯೊಬ್ಬಳ ಪುತ್ರರಾಗಿದ್ದರು. ಒಮ್ಮೆ ಮಳೆಗಾಲದಲ್ಲಿ ಕೆಲವು ಸನ್ಯಾಸಿಗಳು ಚಾತುರ್ಮಾಸ ವ್ರತಕ್ಕಾಗಿ ಆ ಬ್ರಾಹ್ಮಣರ ಮನೆಯಲ್ಲಿ ತಂಗಿದ್ದರು. ಈ ದಾಸಿಪುತ್ರ ಆ ಸಂನ್ಯಾಸಿಗಳ ಸೇವೆಗೆ ನಿಯಮಿಸಲ್ಪಟ್ಟನು. ಈ ಬಾಲಕನ ನಿಷ್ಠಾಪೂರ್ವಕ ಸೇವೆಯಿಂದ ಕೇಳುತ್ತಿದ್ದನು. ಆ ಸನ್ಯಾಸಿಗಳೂ ಬಾಲಕನಲ್ಲಿ ಕರುಣೆ ತೋರಿ, ಕೆಲವು ಮಂತ್ರೋಪದೇಶಗಳನ್ನು ಮಾಡಿದರು. ಅದಾಗಿ ಕೆಲವೇ ದಿನಗಳಲ್ಲಿ ಬಾಲಕನ ತಾಯಿಯು ಹಾವು ಕಡಿದು ಸತ್ತು ಹೋದಳು. ಏಕಾಂಗಿಯಾದ ಬಾಲಕ, ಆ ಮನೆಯನ್ನು ತೊರೆದು ಕಾಡನ್ನು ಸೇರಿ, ಧ್ಯಾನಯೋಗದಿಂದ ಪರಮಾತ್ಮನ ಸಾಕ್ಷಾತ್ಕಾರ ಪಡೆದನು. ಅನಂತರ ದೇಹಾ

ವಸಾನದವರೆಗೂ ಭೂಮಿಯಲ್ಲೇ ಸಂಚರಿಸುತ್ತ, ಭಗವಂತನ ನಾಮ ಸಂಕೀರ್ತನೆಯಲ್ಲಿ ಕಾಲ ಕಳೆಯುತ್ತಿದ್ದನು. ಈ ಭಕ್ತಿಯ ಪ್ರಭಾವದಿಂದಲೇ ಮರುಜನ್ಮದಲ್ಲಿ ದೇವರ್ಷಿಯ ಪದವನ್ನು ಪಡೆದು ನಾರದರಾಗಿ ಲೋಕ ವಿಖ್ಯಾತಿಯನ್ನು ಪಡೆದರು.

ನಾರದರು ತ್ರಿಲೋಕ ಸಂಚಾರಿಗಳಾದ್ದು ಹೇಗೆ?

ನಾರದರು ತ್ರಿಲೋಕ ಸಂಚಾರಿಗಳು. ಅವರು ಹಾಗೆ ನಿತ್ಯ ನಿರಂತರ ಸಂಚಾರಿಗಳಾಗುವುದಕ್ಕೆ ದಕ್ಷನು ಕೊಟ್ಟ ಶಾಪ ಮೂಲ ಕಾರಣ. ಅದು ನಡೆದಿದ್ದು ಹೇಗೆ.

ಪ್ರಾಚೇತಸನು ಭಗವಂತನ ಸಂಕಲ್ಪದಂತೆ ಪುರಂಜನ ಪುತ್ರಿಯನ್ನು ವಿವಾಹವಾಗಿ ಅವಳಲ್ಲಿ ಹರ್ಯಶ್ವರೆಂದು ಕರೆಯಲ್ಪಡುವ ಹತ್ತು ಸಾವಿರ ಮಂದಿ ಮಕ್ಕಳನ್ನು ಪಡೆದನು. ಇವರೆಲ್ಲರೂ ಒಟ್ಟಾಗಿ ಒಂದೇ ಧರ್ಮವನ್ನು ಅನುಸರಿಸುವವರಾಗಿದ್ದರು. ಅವರೆಲ್ಲರೂ ತಂದೆಯಿಂದ ಪ್ರಜಾಭಿವೃದ್ಧಿಗಾಗಿ ನಿಯಮಿಸಲ್ಪಟ್ಟವರಾಗಿ ಸಿಂಧೂನದಿಯು ಸಮುದ್ರದೊಡನೆ ಸೇರುವ 'ನಾರಾಯಣ ಸರಸ್ಸು' ಎಂಬ ಪುಣ್ಯತೀರ್ಥದಲ್ಲಿ ತಪಸ್ಸನ್ನು ಆರಂಭಿಸಿದರು. ಅಲ್ಲಿಗೆ ಬಂದ ನಾರದರು ಹರ್ಯಶ್ವರನ್ನು ಕುರಿತು, "ಕರ್ಮಮಾರ್ಗದಲ್ಲಿ ಹೋಗುವ ಜೀವನು, ಗುಹೆಯಲ್ಲಿ ಪ್ರವೇಶಿಸಿದವನು ಅಲ್ಲಿಯೇ ಸಿಕ್ಕಿ ನರಳುವಂತೆ ತೋಳಲುವನು" ಎಂದು ಉಪದೇಶ ಮಾಡಿದರು. ಅಂತೆಯೇ ಹರ್ಯಶ್ವರು ಈ ಉಪದೇಶವನ್ನು ಅರ್ಥಮಾಡಿಕೊಂಡು ಮುಕ್ತಿಮಾರ್ಗವನ್ನು ಅನುಸರಿಸಿದರು. ಈ ವಿಷಯವನ್ನು ತಿಳಿದ ದಕ್ಷನು ತನ್ನ ಪತ್ನಿಯಾದ ಪಾಂಚಜನ್ಯನಲ್ಲಿ ಶಬಲಾಶ್ವರೆಂಬ ಒಂದು ಸಾವಿರ ಮಕ್ಕಳನ್ನು ಪಡೆದನು. ಅವರು ಎಲ್ಲರೂ ನಾರದರಿಂದ ಉಪದೇಶ ಹೊಂದಿ ಸಹೋದರರ ಮಾರ್ಗವನ್ನೇ ಅನುಸರಿಸಿದರು. ಇದರಿಂದ ಕುಪಿತನಾದ ದಕ್ಷನು ನಾರದರಿಗೆ, "ನಿನಗೆ ನಿಲ್ಲಲು ನೆಲೆಯಿಲ್ಲದಿರಲಿ" ಎಂದು ಶಾಪ ಕೊಟ್ಟನು. ಅದನ್ನು ಪ್ರೀತಿಯಿಂದಲೇ ಸ್ವೀಕರಿಸಿದ ನಾರದರು ನಿತ್ಯ ನಿರಂತರ ಸಂಚಾರಿಗಳಾದರು.

ಆದಿಕವಿ ವಾಲ್ಮೀಕಿಗಳಿಗೆ ರಾಮಾಯಣದ ಕಥೆಯನ್ನು ಬೋಧಿಸಿ, ಆದಿಕಾವ್ಯದ ರಚನೆಗೆ ಕಾರಣರಾದವರೂ ನಾರದರೇ. ಮಹಾಭಾರತದಲ್ಲಿಯೂ ಅನೇಕ ಕಡೆಗಳಲ್ಲಿ ನಾರದರ ಉಲ್ಲೇಖ ಬರುತ್ತದೆ.

ದ್ರೌಪದಿ ಸ್ವಯಂವರದಲ್ಲಿ ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸಿ, ಕುಂತಿಯ ಅಪೇಕ್ಷೆಯಂತೆ ಪಾಂಡವರೈವರನ್ನೂ ದ್ರೌಪದಿ ಮದುವೆಯಾಗಿ, ಎಲ್ಲರೂ ಹಸ್ತಿನಾಪುರಕ್ಕೆ ಬಂದರು. ಭೀಷ್ಮ-ಧೃತರಾಷ್ಟ್ರ ನಿರ್ಣಯದಂತೆ ಪಾಂಡವರಿಗೆ ಅರ್ಧರಾಜ್ಯ ದೊರೆಯಿತು. ಅವರು ಇಂದ್ರಪ್ರಸ್ಥವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ರಾಜ್ಯಭಾರ ಪ್ರಾರಂಭಿಸಿದ್ದರು. ಈ ಸಮಯದಲ್ಲಿ ನಾರದರು ಅಲ್ಲಿಗೆ ಆಗಮಿಸಿದರು. ಪಾಂಡವರು ನಾರದರನ್ನು ಸತ್ಕರಿಸಿ, ಆಶೀರ್ವಾದ ಕೋರಿದರು. ಆಗ ನಾರದರು "ಸುಂದೋಪಸುಂದರೆಂಬ ಸೋದರರು, ರಾಕ್ಷಸರು. ಅವರು ತಪಸ್ಸು ಮಾಡಿ, ವರ ಪಡೆದು ಬಲಶಾಲಿಗಳಾಗಿ ಮೆರೆಯುತ್ತಿದ್ದರು. ದೇವತೆಗಳಿಗೂ ಬ್ರಾಹ್ಮಣರಿಗೂ ಋಷಿಮುನಿಗಳಿಗೂ ಅವರ ಉಪಟಳ ತಾಳಲಾರದಾಯಿತು. ಅವರೆಲ್ಲರೂ ಬ್ರಹ್ಮನಲ್ಲಿ ಮೊರೆಯಿಟ್ಟರು. ಆಗ ಬ್ರಹ್ಮನು 'ತಿಲೋತ್ತಮ' ಎಂಬ ಅಪ್ಸರೆಯನ್ನು ಸೃಷ್ಟಿಸಿ, ಅವರ ಬಳಿಗೆ ಕಳಿಸಿದನು. ಸುಂದೋಪಸುಂದರು ಅವಳ ರೂಪಾತಿಶಯಕ್ಕೆ ಮನಸೋತು, ಅವಳನ್ನು ಪಡೆಯಲು ಪೈಪೋಟಿಗಿಳಿದರು. ಆಗ ತಿಲೋತ್ತಮೆಯು ಉಪಾಯವಾಗಿ, ಅವರಿಬ್ಬರನ್ನೂ ಪರಸ್ಪರ ಕಾದಾಟಕ್ಕೆ ಪ್ರೇರೇಪಿಸಿ, ಗೆದ್ದವರಿಗೆ ತಾನು ದೊರೆಯುವುದಾಗಿ ಹೇಳಿದಳು. ಅವಳ ಮಾತಿನಂತೆ ಇಬ್ಬರೂ ಪರಸ್ಪರ ಕದಾಡಿ ಪ್ರಾಣಬಿಟ್ಟರು.

" ಈ ಕಥೆಯನ್ನು ಏಕೆ ಹೇಳುತ್ತಿದ್ದೇನೆಂದರೆ, ಪಾಂಚಾಲ ರಾಜಪುತ್ರಿಯನ್ನು ನೀವು ಐವರೂವರಿಸಿರುವಿರಿ ನಿಮ್ಮ ಐವರಿಗೂ ಆಕೆ ಧರ್ಮಪತ್ನಿಯಾಗಿರುವಳು. ಆದುದರಿಂದ ನೀವೆಲ್ಲರೂ ಅವಳೊಡನೆ ವ್ಯವಹರಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ನಿಮ್ಮಲ್ಲಿ ಸುಂದೋಪಸುಂದರಲ್ಲಾದಂತೆ-ವೈಮನಸ್ಯ ಉಂಟಾಗಬಾರದು. ಅದಕ್ಕಾಗಿ ನೀವೊಂದು ಸ್ಪಷ್ಟ ನಿಯಮವನ್ನು ರೂಪಿಸಿಕೊಳ್ಳುವುದು ಒಳ್ಳೆಯದು" ಎಂದು ಹೇಳಿದರು. ನಾರದರ ಸಲಹೆಯಂತೆಯೇ ಪಾಂಡವರು ವರ್ಷಕ್ಕೊಬ್ಬರು ಸರತಿಯಂತೆ ದ್ರೌಪದಿಯ ಜೊತೆಗಿರುವುದೆಂದೂ ಆ ಸಮಯದಲ್ಲಿ ಅವರನ್ನು ಉಳಿದವರಲ್ಲಿ ಯಾರಾದರೂ ನೋಡಿದರೆ ಅವರು ತೀರ್ಥಯಾತ್ರೆ ಮಾಡಬೇಕೆಂದು ನಿಯಮ ಮಾಡಿಕೊಂಡರು.

ಇನ್ನೊಮ್ಮೆ ಮಯನಿರ್ಮಿತ ಸಭಾಭವನದಲ್ಲಿ ನಾರದರು ಯುಧಿಷ್ಠಿರನಿಗೆ ರಾಜನೀತಿಯನ್ನು ಉಪದೇಶಿಸಿದ್ದುದರ ಉಲ್ಲೇಖ ಸಭಾಪರ್ವದಲ್ಲಿ ಬರುತ್ತದೆ. ನಾರದರು ಯುಧಿಷ್ಠಿರನ ಬಳಿ ಅವನ ಆಡಳಿತಕ್ಕೆ ಸಂಬಂಧಿಸಿದಂತೆ ಸುಮಾರು ನೂರಿಪ್ಪತ್ತೈದು ಪ್ರಶ್ನೆಗಳನ್ನು ಕೇಳುತ್ತಾರೆ. ಅವರಿಬ್ಬರ ನಡುವಿನ ಪ್ರಶ್ನೋತ್ತರ ರೂಪದ ಸಂವಾದದ ಈ ಭಾಗವನ್ನು 'ಕಚ್ಚಿತ್‌ಸರ್ಗ' ಎಂದೇ ಕರೆಯಲಾಗಿದೆ. ನಾರದರ ರಾಜನೀತಿ ನಿಪುಣತೆ ಇಲ್ಲಿ ಸೊಗಸಾಗಿ ವ್ಯಕ್ತವಾಗಿದೆ.

ಈ ಮಾತುಕತೆಯ ಅನಂತರ ಯುಧಿಷ್ಠಿರನು 'ಮೂಲೋಕಗಳಲ್ಲಿರುವ ಶ್ರೇಷ್ಠ ಸಭಾ ಭವನ'ಗಳನ್ನು ಕುರಿತು ತಿಳಿಯಲು ಬಯಸುತ್ತಾನೆ. ಆಗ ನಾರದರು, ಇಂದ್ರ, ಯಮ, ವರುಣ, ಬ್ರಹ್ಮ-ಮೊದಲಾದವರ ಸಭೆಗಳನ್ನು ವರ್ಣಿಸುತ್ತ ಪಾಂಡುರಾಜನು ಯಮ ಸಭೆಯಲ್ಲಿ ಇದ್ದಾನೆಂದು ತಿಳಿಸು



ತ್ತಾನೆ. ಇದನ್ನು ಕೇಳಿ ಕಳವಳಗೊಂಡ ಯುಧಿಷ್ಠಿರನನ್ನು ಕುರಿತು, "ನಿನ್ನ ತಂದೆಗೆ ಸದ್ಗತಿ ದೊರೆಯಬೇಕಾ ದರೆ ನೀನು ರಾಜಸೂಯಯಾಗವನ್ನು ಮಾಡಬೇಕು" ಎನ್ನುತ್ತಾರೆ. ಹೀಗೆ ನಾರದರಿಂದ ದೊರೆತ ಸಲಹೆಯಂತೆ ಯುಧಿಷ್ಠಿರನು ನಡೆಸಿದ ರಾಜಸೂ ಯಾಗವೇ ಮುಂದಿನ ದ್ಯೂತ-ಅನು ದ್ಯೂತ-ವನ ವಾಸ-ಕುರುಕ್ಷೇತ್ರ ಯುದ್ಧಗಳಿಗೂ ಕಾರಣವಾಗುತ್ತದೆ.

ಸತ್ಯವಾನ-ಸಾವಿತ್ರಿಯ ಕಥೆ ಯಲ್ಲಿಯೂ ನಾರದರ ಪ್ರಸ್ತಾವ ಇರು ವುದನ್ನು ನಾವು ಕಾಣುತ್ತೇವೆ. ಸಾವಿ ತ್ರಿಯು ತಾನೇ ವರಶೋಧ ನಡೆಸಿ, ಸತ್ಯವಾನನನ್ನು ಮೆಚ್ಚಿ ಹಿಂದಿರುಗಿ ದಾಗ, ನಾರದರು ಆಗಮಿಸಿ, ಸತ್ಯ ವಾದ ಅಲ್ಪಾಯುಷಿಯೆಂಬುದನ್ನು ತಿಳಿಸುತ್ತಾರೆ. ಆದರೂ ಧೃತಿಗೆಡದ ಸಾವಿತ್ರಿಯ ಧೈರ್ಯವನ್ನು ಮೆಚ್ಚಿ, ಸತ್ಯವಾನನ ವಯಸ್ಸಿನ ಹೆಚ್ಚಳಕ್ಕಾಗಿ ವ್ರತಾಚರಣೆಗಳನ್ನು ಹೇಳಿಕೊಟ್ಟು, ಆ ಮೂಲಕ ಸಾವಿತ್ರಿ ಯಮನನ್ನೇ ಜಯಿಸು. ಶಕ್ತಿಯನ್ನು ಪಡೆಯಲು ನಾರದರು ಕಾರಣರಾಗಿದ್ದಾರೆ. ಈ ಕಥೆಯೂ ಮಹಾಭಾರತದ ಸಭಾ ಪರ್ವದಲ್ಲಿಯೇ ನಿರೂಪಿತವಾಗಿದೆ.

ಕುರುಕ್ಷೇತ್ರ ಯುದ್ಧ ಮುಗಿದ ಮೇಲೆ, ಧರ್ಮರಾಜನು, 'ಅಪಾರ ಪ್ರಮಾಣದ ಬಂಧು ಗಳ ನಾಶಕ್ಕೆ ಕಾರಣವಾದ ಈ ಯುದ್ಧದ ಮೂಲಕ ದೊರೆತ ರಾಜ್ಯ ತನಗೆ ಬೇಡ' ಎಂಬ ನಿಲುವು ತಳೆದಿದ್ದನು. ಯುಧಿಷ್ಠಿರನನ್ನು ಸಮಾಧಾನ ಪಡಿಸಲು ಎಲ್ಲರೂ ಪ್ರಯತ್ನಿ ಸುತ್ತಿದ್ದರು. ಆಗ ನಾರದರೂ ಕೂಡ ಯುಧಿಷ್ಠಿರನನ್ನು ಕಂಡು, ಸೃಂಜಯನೆಂಬ ರಾಜನಿಗೆ ಆತ ಪುತ್ರಶೋಕದಲ್ಲಿದ್ದಾಗ ತಾವು ಹೇಳಿದ್ದ ಹದಿನಾರು ರಾಜರುಗಳ ವೃತ್ತಾಂತಗಳನ್ನೂ ತಿಳಿಸಿ ಯುಧಿಷ್ಠರನನ್ನು ಸಮಾಧಾನಪಡಿಸಿದರು.

ನರಕಾಸುರನನ್ನು ಸಂಹರಿಸಿ ಶ್ರೀಕೃಷ್ಣನು, ಆತನ ಸೆರೆಯಲ್ಲಿದ್ದ ರಾಜಪುತ್ರಿ ಯರನ್ನೆಲ್ಲ ತಾನೇ ಮದುವೆಯಾದ ವಿಷಯ ನಾರದರಿಗೆ ತಿಳಿಯಿತು. ಅಷ್ಟು ಜನ ಪತ್ನಿ ಯನ್ನು ಶ್ರೀಕೃಷ್ಣನನ್ನು ಹೇಗೆ ಸಂಭಾಳಿಸುವನೆಂದು ಅವರಿಗೆ ಆಶ್ಚರ್ಯವಾಯಿತು. ಕುತೂಹಲ ತಡೆಯಲಾರದೆ ಅವರು ನೇರವಾಗಿ ದ್ವಾರಕೆಗೆ ಹೋದರು. ಅಲ್ಲಿ ಕೃಷ್ಣನ ಒಬ್ಬ ಪತ್ನಿಯ ಮನೆಗೆ ಹೋದಾಗ, ಕೃಷ್ಣನು ಪರ್ಯಂಕದ ಮೇಲೆ ಕುಳಿತಿದ್ದನು. ಪತ್ನಿಯು ಆತನಿಗೆ ಚಾಮರ ಬೀಸುತ್ತಿದ್ದಳು ನಾರದರು ಅಲ್ಲಿ ಕೃಷ್ಣನ ಅತಿಥ್ಯ ಸ್ವೀಕರಿಸಿ, ಕೃಷ್ಣನ ಇನ್ನೋರ್ವ ಪತ್ನಿಯ ಮನೆಗೆ ಹೋದರು. ಅಲ್ಲಿ ಕೃಷ್ಣನು ತನ್ನ ಪತ್ನಿಯೊಡನೆ ಪಗಡೆ ಯಾಡುತ್ತಿದ್ದನು. ಮೂರನೆಯ ಮನೆಗೆ ಹೋದಾಗ ಅಲ್ಲಿ ಗೋವಿಂದನು ಮಗುವನ್ನು ಆಡಿಸುತ್ತಿದ್ದನು. ಇನ್ನೊಂದು ಮನೆಯಲ್ಲಿ ಕೃಷ್ಣನು ದ್ವಿಜರಿಗೆ ಊಟ ಬಡಿಸುತ್ತಿದ್ದನು. ಮತ್ತೊಂದು ಮನೆಯಲ್ಲಿ ಯಾಗ ಮಾಡುತ್ತಿದ್ದನು ಹೀಗೆ ನಾರದರು ಅನೇಕ ಮನೆಗಳಿಗೆ ಹೋಗಿ, ಎಲ್ಲೆಡೆಯೂ ಕೃಷ್ಣನೇ ಇರುವುದನ್ನು ಖಾತ್ರಿಪಡಿಸಿಕೊಂಡು ಏಕಕಾಲದಲ್ಲಿ ಎಲ್ಲೆ ಡೆಯೂ ಇರಬಲ್ಲ ಕೃಷ್ಣನ ಲೀಲೆಯನ್ನು ಕಣ್ಣು ತುಂಬಿಕೊಂಡು ಧನ್ಯರಾದರಲ್ಲದೆ ಆ ಮಹಿಮಾನ್ವಿತ ಕಥೆಯನ್ನು ಲೋಕಕ್ಕೆಲ್ಲ ಸಾರಿದರು.

ಲೋಕಹಿತ ಸಾಧನೆಗೆ ಹೊರಟ ನಾರದರು, ತಾವೇ ಸಂಕಟಗಳಲ್ಲಿ ಸಿಲುಕಿ ಕೊಂಡ ಸಂದರ್ಭಗಳೂ ಅನೇಕ, ಅಂತಹದೊಂದು ಸಂದರ್ಭ ಹೀಗಿದೆ:

ಮಾಯೆಯ ಸ್ವರೂಪವನ್ನು ಅರಿಯುವ ಉದ್ದೇಶದಿಂದ ನಾರದರು ಒಮ್ಮೆ ವಿಷ್ಣುವಿನ ಬಳಿಯೇ ಪ್ರಶ್ನಿಸಿದರು. ವಿಷ್ಣುವು ಏನೆಂದೂ ಉತ್ತರ ಕೊಡದೆ, ನಾರದರನ್ನೂ ಗರುಡನ ಮೇಲೆ ಕುಳ್ಳಿರಿಸಿಕೊಂಡು, ಕನ್ಯಾಕುಬ್ಜದ ಸರೋವರವೊಂದರ ಬಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಸ್ನಾನ ಮಾಡಲು ಹೇಳಿದನು. ವಿಷ್ಣುವಿನ ಸೂಚನೆಯಂತೆ ಆ ಸರೋವರ ದಲ್ಲಿ ಸ್ನಾನ ಮಾಡಿದ ನಾರದರು ಸ್ತ್ರೀಯಾಗಿ ಪರಿವರ್ತನೆಗೊಂಡು ಬಿಟ್ಟರು ಅನಂತರ ಕಾಲಧ್ವಜನೆಂಬ ರಾಜನನ್ನು ವಿವಾಹವಾಗಿ ಸಂತಾನವನ್ನೂ ಪಡೆದರು. ಕೆಲವು ವರ್ಷಗಳೇ ಯುದ್ಧವೊಂದರಲ್ಲಿ ಶತ್ರುಗಳಿಂದ ಪತಿಪುತ್ರರೆಲ್ಲ ಸಂಹಾರಗೊಂಡುದನ್ನು ಕಂಡು ದುಃಖಿತರಾಗಿ, ಮತ್ತೆ ವಿಷ್ಣುವನ್ನೇ ಮೊರೆಹೊಕ್ಕರು. ಆತನ ಸಲಹೆಯಂತೆ ಅದೇ ಪುಣ್ಯತೀರ್ಥದಲ್ಲಿ ಮಿಂದು, ಮತ್ತೆ ಮೊದಲಿನಂತೆ ನಾರದರಾದರು ! ಹೀಗೆ ತಮ್ಮನ್ನೇ ಕಷ್ಟಕ್ಕೆ ಒಡ್ಡಿಕೊಂಡು, ಜಗತ್ತಿಗೆ ನೀತಿಯನ್ನು ಬೋಧಿಸಿದ ಮಹಾಮಹಿಮರು ಅವರು.

ನಾರದರು ಮಂತ್ರದ್ರಷ್ಟಾರರೂ ಹೌದು. ಋಗ್ವೇದದಲ್ಲಿರುವ ಮತ್ತು ಅಥರ್ವ ವೇದದಲ್ಲಿರುವ ಕೆಲವು ಮಂತ್ರಗಳು ಅವರ ಹೆಸರಿನಲ್ಲಿವೆ, ಛಾಂದೋಗ್ಯೋಪನಿಷತ್ತಿನ

ವಿದ್ಯೆಯಲ್ಲಿ ನಾರದರು ಸನತ್ಕುಮಾರರ ಶಿಷ್ಯರಾಗಿ, ಈ ವಿದ್ಯೆಯನ್ನು ಲೋಕ ವಿಶ್ರುತಗೊಳಿ ಸಿರುತ್ತಾರೆ. ಸಂಗೀತಪ್ರಧಾನವಾದ ಸಾಮ ವೇದವಂತೂ ಅವರಿಗೆ ಬಹಳ ಪ್ರಿಯವಾದುದಾಗಿತ್ತು. ಅವರ ವೀಣೆಯ ಹೆಸರು 'ಮಹತಿ', 'ಸಂಗೀತ ಮಕರಂದ ಎಂಬ ಕೃತಿಯೂ ನಾರದರ ಹೆಸರಿನಲ್ಲಿದೆ.

ಭಕ್ತಿ ಸಾಮ್ರಾಜ್ಯದಲ್ಲಂತೂ ನಾರದರದು ಮರೆಯಲಾಗದ ಸ್ಥಾನ. ಇವರು ಬರೆದಿರುವ 'ನಾರದ ಭಕ್ತಿಸೂತ್ರ' ಅಮೋಘ ಕೃತಿ. ಇದರಲ್ಲಿ ಎಂಬತ್ನಾಲ್ಕು ಸೂತ್ರಗಳಿವೆ. ಸರಳವಾದ, ನೆನಪಿಡಲು ಮತ್ತು ಆಚರಣೆಯಲ್ಲಿ ತರಲು ಯೋಗ್ಯವಾದ ಆಣಿಮುತ್ತುಗಳು ಇವು ಭಕ್ತಿಯ ಲಕ್ಷ್ಯ , ಸಾಧನೆ, ಮಹತ್ತ್ವ, ಈ ದಾರಿಯಲ್ಲಿರುವ ತೊಡಕುಗಳು, ಅವುಗಳ ನಿವಾರಣೆಗೆ ಉಪಾಯಗಳು - ಹೀಗೆ ಎಲ್ಲವನ್ನೂ ವಿವರಿಸಿರುವುದು ಇದರ ವಿಶೇಷ.

'ನಾರದಪರಿವ್ರಾಜಕೋಪನಿಷತ್ತ' ಅಥರ್ವವೇದಕ್ಕೆ ಸೇರಿದ ಉಪನಿಷತ್ತಾಗಿದೆ. ಸನ್ಯಾಸವನ್ನು ವಿವರಿಸುವ ಈ ಕೃತಿ ಒಂಬತ್ತು ಅಧ್ಯಾಯಗಳಿಂದ ಕೂಡಿದ್ದ ಸಾಕಷ್ಟು ವಿಸ್ತಾರವಾಗಿದೆ. ಶೌನಕಾದಿಗಳು ನಾರದರನ್ನು ಮುಕ್ತಿಯವಿಷಯವಾಗಿ ಪ್ರಶ್ನಿಸು ವುದರ ಮೂಲಕ ಉಪನಿಷತ್ತು ಆರಂಭವಾಗುತ್ತದೆ.

ಶೌನಕರ ಪ್ರಶ್ನೆಗೆ ಉತ್ತರವಾಗಿ ನಾರದರು ಪರಮ ಹಂಸ ರಾಗಲು ಬೇಕಾದ ಸಾಧನೆಗಳನ್ನು ವಿಸ್ತಾರವಾಗಿ ತಿಳಿಸುತ್ತಾರೆ. ಎರಡನೆಯ ಅಧ್ಯಯದಲ್ಲಿ ನಾರದರು ಋಷಿಗಳನ್ನೆಲ್ಲ ಬ್ರಹ್ಮನ ಬಳಿಗೆ ಕರೆದೊಯ್ದು, ಚತುರಾಶ್ರಮಗಳ ಕರ್ತವ್ಯವನ್ನು ಉಪದೇಶಿ ಸುವಂತೆ ಮಾಡುತ್ತಾರೆ. ಅಲ್ಲಿ ತಾವೇ ಅನೇಕ ಪ್ರಶ್ನೆ ಗಳನ್ನು ಕೇಳಿ ಬ್ರಹ್ಮನಿಂದ ಉತ್ತರವನ್ನು ಹೇಳಿಸಿರುತ್ತಾರೆ. ಹೀಗೆ ಎಲ್ಲ ಆಶ್ರಮದ ವರಿಗೂ ಈ ಗ್ರಂಥವು ಒಂದು ಕೈಪಿಡಿಯಾಗಿದೆ.

'ನಾರದ ಸ್ಮೃತಿ'ಯು ನಾರದರ ಹೆಸರಿನಲ್ಲಿರುವ ಇನ್ನೊಂದು ಗ್ರಂಥ. ಅತಿ ಪ್ರಾಚೀನವಾದ ಈ ಕೃತಿಯು ಒಂದು ಸಾವಿರಕ್ಕಿಂತ ಹೆಚ್ಚು ಶ್ಲೋಕಗಳನ್ನು ಒಳಗೊಂಡಿದೆ. ಸಾಲವನ್ನು ಪಡೆಯುವುದು, ಅದನ್ನು ತೀರಿಸುವುದು, ಆಸ್ತಿಯ ಮಾರಾಟ, ವಿವಾಹ, ಅಪರಾಧ ಮತ್ತು ಶಿಕ್ಷೆ - ಮುಂತಾದ ಎಲ್ಲ ವ್ಯಾವಹಾರಿಕ ವಿಷಯಗಳನ್ನು ವಿವರಿಸುವ ಈ ಕೃತಿ ನಾರದರ ಬಹುಮುಖ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. 'ನಾರದ ಪುರಾಣ'ವು ಒಂದು ಮಹಾಪುರಾಣವಾಗಿದ್ದು, 'ಬೃಹನ್ನಾರದ' ವೆಂದೂ ಖ್ಯಾತವಾಗಿದೆ. ಇದರಲ್ಲಿ ಉಳಿದ ಎಲ್ಲ ಪುರಾಣಗಳ ಪರಿವಿಡಿಯು ಇರುವುದು ಒಂದು ವಿಶೇಷ. ವರ್ಷವಿಡೀ ಮಾಡಬಹುದಾದಷ್ಟು ವ್ರತಗಳು, ವಿಷ್ಣುಭಕ್ತಿ, ತೀರ್ಥ ಕ್ಷೇತ್ರಗಳ ವಿವರಗಳೂ ಮನೋಹರವಾಗಿವೆ.

'ನಾರದ ಪಂಚರಾತ್ರ' ವೆಂಬುದು ಈ ಮಹರ್ಷಿಗಳ ಕೃತಿ ಯೆಂದು ಹೇಳುತ್ತಾರೆ. ಇದರಲ್ಲಿ ಅಭಿಗಮನ (ದೇವಾಲಯಗಳ ಶುಚಿ ಮತ್ತು ಅಲಂಕಾರ), ಉಪಾದಾನ ಸ್ತೋತ್ರ, ನಾಮ ಸಂಕೀ ರ್ತನೆ, ಶಾಸ್ತ್ರಾವಲೋಕನ ಮತ್ತು ಯೋಗ ಎಂಬ ಐದು ಪರಾ ಭಕ್ತಿಯ ಮಾರ್ಗಗಳು ಹೇಳಲ್ಪಟ್ಟಿವೆ. 'ನಾರದ ಶಿಕ್ಷಾ' ಎಂಬುದು ವರ್ಣಗಳ ಉಚ್ಚಾರಣೆಯೇ ಮೊದಲಾದ ವ್ಯಾಕರಣ ವಿಷಯಗಳ ಗ್ರಂಥವಾಗಿದೆ. ಈ ಎಲ್ಲ ಕೃತಿಗಳೂ ನಾರದರಿಂದಲೇ ರಚಿತ ವಾದವೆಂದು ನಿರ್ಧಾರವಾಗಿ ಹೇಳಲಾಗದಿದ್ದರೂ ನಾರದರ ರೆಂಬ ಒಬ್ಬ ಮಹರ್ಷಿಗಳು ಇದ್ದರೆಂದೂ ಅವರು ತಮ್ಮ ಭಕ್ತಿ ಮತ್ತು ಸಾಧನೆಗಳಿಂದ ಲೋಕವಂದ್ಯರು.

**ಪುರಾಣ ಕಾಲದ ಮೊದಲ ಪತ್ರಕರ್ತ**

ದೇವರ್ಷಿ ನಾರದರೆಂದರೆ ಸಾಮಾನ್ಯ ಜನರಲ್ಲಿ ಜಗಳ ಗಳನ್ನು ತಂದಿಡುವ ತಂಟೆಕೋರ ಎಂಬ ಮೌಢ್ಯವಿದೆ. ತ್ರಿಲೋಕ ಸಂಚಾರಿಯಾದ ನಾರದ ಮುನಿಗಳು ದೇವಾದಿ ದೇವತೆಗಳನ್ನು ರಾಕ್ಷಸರನ್ನು ಸುಲಭವಾಗಿ ತಲುಪುತ್ತಿದ್ದರು. ವಾಚಾಳಿಯೂ ಹಾಸ್ಯ ಪ್ರವೃತ್ತಿಯವರೂ ಆದ ನಾರದರು ಎಲ್ಲರ ಬಳಿಯೂ ಸುಲಭವಾಗಿ ಸಂವಹಿಸುತ್ತಿದ್ದರು. ಮುಕ್ತವಾಗಿ ಮಾತನಾಡು ತ್ತಿದ್ದರು. ಒಂದೊಂದು ಲೋಕದಿಂದಲೂ ಸುದ್ದಿಗಳನ್ನು ಸಂಗ್ರ ಹಿಸಿ ಇನ್ನೊಂದು ಲೋಕದವರಿಗೆ ತಿಳಿಸುತ್ತಿದ್ದುದರಿಂದ ಅವ ರಿಗೆ ಪುರಾಣ ಕಾಲದ ಮೊದಲ ಪತ್ರಕರ್ತ ಎಂದು ಆಧುನಿಕರು ಅರ್ಥೈಸುವುದುಂಟು.

ಆದರೆ ಮಹರ್ಷಿ ನಾರದರು ಬಹು ದೊಡ್ಡತತ್ತ್ವವೇತ್ತರು. ಅವರು ದಾಸಿಪುತ್ರರಾಗಿ ಜನಿಸಿದ್ದರೂ. ಬಹೂ ಶ್ರೇಷ್ಠ ಭಕ್ತ ಶಿರೋ ಮಣಿಯಾಗಿ ಜಗತ್ತಿಗೆ ಭಕ್ತಿರಸಾಮೃತಧಾರೆ ಎರೆದ ಮಹಾನ್ ಜ್ಞಾನಿಗಳೆನ್ನಿಸಿಕೊಂಡರು. ವಿಷ್ಣು ಭಕ್ತರೂ ಋಷಿಗಳೂ ಆಗಿದ್ದ ತಪಸ್ವಿಗಳ ಮನೆಯಲ್ಲಿ ದಾಸಿಯಾಗಿದ್ದಳಂತೆ ನಾರದರ ತಾಯಿ. ಆ ತಾಪಸಿಗಳು ಸದಾ ಭಾಗವತ ಪಾರಾಯಣ ನಿರತರಾಗಿದ್ದರು. ಎಲ್ಲ ಕಾಲ 'ನಾರಾಯಣ ಶ್ರೀಹರಿ' ಎಂದು ವಿಷ್ಣುನಾಮ ಸಂಕೀ ರ್ತನೆಯಲ್ಲಿ ತೊಡಗಿರುತ್ತಿದ್ದರು. ಇಂಥ ಪವಿತ್ರ ವಾತಾವರಣದಲ್ಲಿ ಬೆಳೆದ ನಾರದರು ಯಾವಾಗಲೂ ಹರಿಸ್ಮರಣೆ ಮಾಡುತ್ತಾ ಹರಿ ಕಥೆ ಕೇಳುತ್ತಾ ಬೆಳೆದರು. ದಾಸಿಪುತ್ರ ತ್ರಿಲೋಕ ಸಂಚಾರಿ ಹರಿಭಕ್ತವರೇಣ್ಯರಾಗಿ ಬೆಳೆದು ನಿಲ್ಲಲು ಅವರು ಬೆಳೆದು ಬಂದ ವಾತಾವರಣವೇ ಕಾರಣ ಎಂಬುದು ಸ್ವಯಂವೇದ್ಯ.



**(ವಿವಿಧ ಮೂಲಗಳಿಂದ)**



## ವಿಶಾಖಪಟ್ಟಣ ಸಾಗರ ತೀರದಲ್ಲಿ ಶ್ರೀಮಹಾಲಕ್ಷ್ಮೀ ಗೋದಾದೇವಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯ

ತಿರುಮಲೆಯಲ್ಲಿರುವ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯದಂತೆ ವಿಶಾಖಪಟ್ಟಣದ ಋಷಿಕೊಂಡದಲ್ಲಿ ಪ್ರಕೃತಿಯ ಸೊಬಗಿನ ಮಧ್ಯದಲ್ಲಿ ಈ ಆಲಯ ನಿರ್ಮಾಣ ವನ್ನು ತಿ.ತಿ.ದೇವಸ್ಥಾನವು 2019 ರಲ್ಲಿ ಕೈಗೊಂಡಿತು. ಸಮುದ್ರ ಮಟ್ಟಕ್ಕೆ 60 ಮೀಟರ್ ಎತ್ತರದಲ್ಲಿ ಸುಮಾರು 10 ಎಕರೆ ವಿಸ್ತೀರ್ಣದಲ್ಲಿ ರೂ. 28 ಕೋಟಿ ರೂ.ಗಳಿಂದ ತಿ.ತಿ.ದೇ. ಈ ಆಲಯವನ್ನು ಶೋಭಾಯಮಾನವಾಗಿ ನಿರ್ಮಿಸಿದೆ. ಚಿಕ್ಕ ತಿರುಮಲೆಯಂತೆ ಇಲ್ಲಿಯೂ ಎಲ್ಲಾ ಸೌಕರ್ಯಗಳಿವೆ. ಈ ಆಲಯದ ಎದುರುಗಡೆ ಶ್ರೀ ಬೇಡಿ ಆಂಜನೇಯ ಸ್ವಾಮಿ ಆಲಯವನ್ನು ಏರ್ಪಡಿಸಲಾಗಿದೆ. ಮೂಲವಿರಾಟ್ ಒಂದು ಕಡೆ ಶ್ರೀಪದ್ಮಾವತಿ ಅಮ್ಮನವರ ಆಲಯ, ಮತ್ತೊಂದು ಕಡೆ ಆಂಡಾಳ್ ಅಮ್ಮನವರ ಆಲಯವನ್ನು ನಿರ್ಮಿಸಲಾಗಿದೆ. ಈ ಆಲಯ ಮಹಾಸಂಪ್ರೋಕ್ಷಣೆ ಕಾರ್ಯಕ್ರಮ 2022, ಮಾರ್ಚ್ 18 ರಿಂದ 23 ರ ವರಗೆ ನಡೆಯಿತು.

ಈ ಆಲಯ ಮಹಾಸಂಪ್ರೋಕ್ಷಣೆ ದೃಶ್ಯಗಳನ್ನು ಮುಂದಿನ ಪುಟದಲ್ಲಿ ನೋಡಿರಿ....






















ಶ್ರೀ ಮಹಾಲಕ್ಷ್ಮೀ ಗೋದಾದೇವಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿಯವರ












ಆಲಯ (ವಿಶಾಖಪಟ್ಟಣ) ಮಹಾಸಂಪ್ರೋಕ್ಷಣ ದೃಶ್ಯಗಳು



30-3-2022 ರಂದು ತಿರುಪತಿ ಶ್ವೇತ ಭವನದಲ್ಲಿ ನಡೆದ "ಗೋಶಾಲ ನಿರ್ವಾಹಕರು ಮತ್ತು ಗೋ ಆಧಾರಿತ ಪ್ರಕೃತಿ ವ್ಯವಸಾಯದಾರರ ಶಿಕ್ಷಣ" ವರ್ಚ್ಯುವಲ್ ವಿಧಾನದ ಮುಖಾಂತರ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್. ಜವಹರ್ ರೆಡ್ಡಿ , ಐ.ಎ.ಎಸ್.. ರವರು ಪ್ರಾರಂಭಿಸುತ್ತಿರುವ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್.. ರವರು ಮತ್ತು ಇತರ ತಿ.ತಿ.ದೇ., ಉನ್ನತಾಧಿಕಾರಿಗಳು ಪಾಲ್ಗೊಂಡರು.



25-03-2022 ರಂದು ತಿ.ತಿ.ದೇ., ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ತಿರುಮಲೆಯಲ್ಲಿ ಪಿ.ಎ.ಸಿ.-I ರಲ್ಲಿ ಆಕಸ್ಮಿಕ ತನಿಖೆಯನ್ನು ನಿರ್ವಹಿಸುತ್ತಾ ಭಕ್ತರ ಅಭಿಪ್ರಾಯಗಳನ್ನು ತಿಳಿದುಕೊಳ್ಳುತ್ತಿರುವ ದೃಶ್ಯ.



26-03-2022 ರಂದು ಸ್ವಾಮಿಯವರ ದರ್ಶನಕ್ಕೆ ಆಗಮಿಸಿದ ಶ್ರೀ ಅಹೋಬಿಲಂ ಮಠದ 46 ನೇ ಜೀಯರ್ ಶ್ರೀ ಶ್ರೀ ಶ್ರೀ ರಂಗನಾಥ ಯತೀಂದ್ರ ಮಹಾದೇಶಿಕನ್ ರವರಿಗೆ ಆಲಯ ಮರ್ಯಾದೆಯಿಂದ ಸ್ವಾಗತಿಸುತ್ತಿರುವ ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್.ರವರು ಮತ್ತು ಇತರ ಉನ್ನತಾಧಿಕಾರಿಗಳು



28-03-2022 ರಂದು ಶ್ರೀಮಾನ್ ತಾಳ್ಲಪಾಕ ಅನ್ನಮಾಚಾರ್ಯರ 519 ನೇ ವರ್ಧಂತಿ ಸಂದರ್ಭವಾಗಿ ತಿರುಪತಿ ಅಲಿಪಿರಿಯಲ್ಲಿ "ಮೆಟ್ಲೋತ್ಸವ" ದಲ್ಲಿ ನಡೆದ ಸಂಕೀರ್ತನಾಗೋಷ್ಠೀ ಗಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ.ವೀರಬ್ರಹ್ಮ ಐ.ಎ.ಎಸ್., ರವರು ಮತ್ತು ಇತರ ಅಧಿಕಾರಿಗಳು ಮತ್ತು ಕಳಾಕಾರರು ಪಾಲ್ಗೊಂಡರು.



06-04-2022 ರಂದು ಪದೋನ್ನತಿಯಿಂದ ಬದಲಾಗಿ ಹೋಗುತ್ತಿರುವ ತಿ.ತಿ.ದೇ., ಸಿ.ವಿ.ಎಸ್.ಓ. ಶ್ರೀ ಗೋಪಿನಾಥ್ ಜೆಟ್ಟಿ, ಐ.ಪಿ.ಎಸ್.. ರವರಿಗೆ ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ರವರು



06-04-2022 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನೂತನ ಸಿ.ವಿ.ಎಸ್.ಓ ಪದವಿಯನ್ನು ಸ್ವೀಕರಿಸುತ್ತಿರುವ ಶ್ರೀ.ಡಿ.ನರಸಿಂಹ ಕಿಶೋರ್, ಐ.ಪಿ.ಎಸ್.. ರವರು

# ಜೀವದಾತೆ ಗಂಗಾಮಾತೆ

- ದೀಪಶ್ರೀ ಎಸ್ ಕೂಡ್ಲಿಗಿ



ಪೂಜ್ಯರೊಬ್ಬರು ಹೇಳುತ್ತಾರೆ ದೇವರು ನಿವಾವಕರನೆಂದು. ದೇವರಿಗೆ ನಿಖರ ಆಕಾರವಿಲ್ಲವೆಂಬುದು ಈ ಮಾತಿನ ತಾತ್ವರ್ಯ. ಮನುಷ್ಯ ಸೇರಿದಂತೆ ಈ ಮಣ್ಣಿನ ಪ್ರತಿ ಜೀವ ತಾನು ಕಾಣುವಂತೆ, ತನ್ನೆದರು ಮತ್ತು ತನ್ನೊಳಗೆ ತಾನು ರೂಪಿಸಿಕೊಂಡಂತೆ ದೇವರು ಇರಬಲ್ಲ, ಆಗಬಲ್ಲ. ಜೀವಕ್ಕೆ ನೆಲೆಯಾದ ಈ ಪ್ರಕೃತಿ ನಿಜ ಅರ್ಥದಲ್ಲಿ ದೇವರು.

ಗಾಳಿ, ನೀರು, ಬೆಳಕು ಬೆಟ್ಟ, ಗುಡ್ಡ, ಕಾಡು ಮೇಡುಗಳೆಲ್ಲ ದೇವರೇ. ನಾವು ಪ್ರಾರ್ಥಿಸದೇ ಜೀವನದುದ್ದಕ್ಕೂ ತೃಪ್ತಿಯಿಂದ ಬದುಕಲು ಬೇಕಾದ ಎಲ್ಲ ಅಗತ್ಯಗಳನ್ನು ಈ ಪ್ರಕೃತಿ ನಮಗೆ ಕರುಣಿಸಿದ.

ಇವುಗಳಲ್ಲಿ ಒಂದಾದ ಗಂಗಾನದಿ ಈ ನೆಲದ ಜೀವದಾತೆ, ಕೋಟ್ಯಾಂತರ ಜೀವರಾಶಿಗಳಿಗೆಲ್ಲ ಉಸಿರಾಗಿರುವ ಗಂಗಾನದಿ ನಮ್ಮ ಹೆಮ್ಮೆ. ನಮ್ಮ ದೇವರು.

ಗಂಗಾನದಿಯು ಧಾರ್ಮಿಕ ಪರಂಪರೆ ಹಾಗೂ ಧಾರ್ಮಿಕ ಮಹತ್ವತೆಯನ್ನು ಹೊದ್ದುಕೊಂಡಿರುವ ಭಾರತದ ಅತಿ ಬೃಹತ್ ನದಿಯಾಗಿದೆ. ಈ ನದಿಗೆ ಜಾಹ್ನವಿ, ಗಂಗೆ, ಶುಭ್ರ, ಸಪ್ತೇಶ್ವರಿ, ನಿಕಿತಾ, ಭಾಗೀರಥಿ, ಅಲಕನಂದಾ ಹಾಗೂ ವಿಷ್ಣುಪದಿ ಒಳಗೊಂಡಂತೆ ಹತ್ತು ಹಲವು ನಾಮಾಧಿಗಳಿಂದ ಸಂಬೋಧಿಸಲಾಗುತ್ತದೆ. ಪವಿತ್ರ ಹಾಗೂ ಪುಣ್ಯ ಗಂಗಾ ನದಿಯ ಸ್ಥಿರವಾದ ದೈವತ್ವಕ್ಕೆ ಯಾವ ನದಿಯು ಸರಿಸಾಟಿಯಾಗುವುದಿಲ್ಲ. ಪುಣ್ಯ ನದಿ ಸರ್ವದಃ ದೃಷ್ಟಿಯಿಂದಲೂ ಈ ಭೂಮಿಗೆ ಪವಿತ್ರವಾದ ಜಲ.

## ಗಂಗಾ ನದಿಯ ಪೌರಾಣಿಕ ಕಥೆ

ಭಗೀರಥ ಎಂಬುವವನು ಅರಸು ವಂಶಕ್ಕೆ ಸೇರಿದ ಪೌರಾಣಿಕ ದೊರೆಯಾಗಿದ್ದನು. ಋಷಿ ಕಪಿಲನಿಂದ ಶಾಪಗ್ರಸ್ತನಾದ ಭಗೀರಥನ ಪೂರ್ವಜರಿಗೆ ಗಂಗ ಮಾತೆ ಮಾತ್ರ ಶಾಪ ಮುಕ್ತಿಯ ಪಥ ತೋರಿಸಬಲ್ಲಳು ಎಂಬ ನಿರ್ದಿಷ್ಟ ಕಾರಣಕ್ಕಾಗಿ ಭಗೀರಥ ತನ್ನ ತಪಸ್ಸಿನ ಪ್ರಯತ್ನದಿಂದ ಗಂಗಾನದಿಯನ್ನು ಸ್ವರ್ಗದಿಂದ ಧರೆಗೆ ತಂದನು. ಹಲವು ವರ್ಷಗಳ ಮಹಾತಪಸ್ಸಿನ ಧನಾತ್ಮಕ ಪರಿಣಾಮವಾಗಿ, ಗಂಗಾದೇವಿಯು ಧರೆಯ ಮೇಲೆ ಹರಿಯಿತು, ಹಾಗೂ ರುದ್ರನು ಅವಳ ಹರಿವನ್ನು ಹರಿಸಲು ಸಮ್ಮತಿ ಸೂಚಿಸಿದನು. ಆದ ಕಾರಣ, ಗಂಗಾ ನದಿಯು ರುದ್ರನ ಜಟೆಯಿಂದ ಹರಿಯಿತು. ಪವಿತ್ರ ನದಿಯು ಉಗಮವಾದ ಇಂಥಹ ಪುಣ್ಯ ಪ್ರದೇಶವನ್ನು ಪ್ರಸ್ತುತ ದಿನಮಾನಗಳಲ್ಲಿ ಗಂಗೋತ್ರಿ ಎಂದು ಕರೆಯಲಾಗುತ್ತಿದೆ ಹಾಗೂ ನದಿಯು ಪರಮಾತ್ಮ ರುದ್ರನ ಜಟಾದಿಂದ ಉಗಮವಾದ ಕಾರಣ ಈ ನದಿಯನ್ನು ಜಟಾಶಂಕರಿ ಎಂದೂ ಕರೆಯಲಾಗುತ್ತದೆ.

ಗಂಗೆಯು ಕೋಪಗೊಂಡಳು ಹಾಗೂ ಅವಳ ಹರಿವನ್ನು ಶರವೇಗವಾಗಿ ಹರಿಸುವ ಮೂಲಕ, ಜಹ್ನ ಋಷಿಯ ಆಶ್ರಮವನ್ನು ಕೆಡವಿದಳು, ಭಗೀರಥನ ಮನವಿಯ ಮೇರೆಗೆ ಜಹ್ನ ಋಷಿಯು ಅವಳನ್ನು ಮುಕ್ತಗೊಳಿಸಿದನು. ಆದ ಕಾರಣ ಗಂಗೆಯನ್ನು ಜಾಹ್ನವಿ ಎಂದೂ ಸಹ ಕರೆಯುವುದುಂಟು. ತರುವಾಯ ಗಂಗೆಯು ಋಷಿ ಕಪಿಲನ ಆಶ್ರಮವನ್ನು ತಲುಪಿಸಿದಳು, ಅಲ್ಲಿ ಭಗೀರಥನ ಪೂರ್ವಜನರನ್ನು ಬೂದಿ ಮಾಡಿ ಸುಟ್ಟು ಶಾಂತಿಯಿಂದ ವಿಶ್ರಮಿಸಲಾಯಿತು ಮತ್ತೊಂದು ಪುರಾಣದ, ಪುರಾತನ ಹಿಂದೂ ಗ್ರಂಥವಾದ ವಿಷ್ಣುಪುರಾಣದ ಪ್ರಕಾರ, ಭಗವಾನ್ ವಿಷ್ಣುವು ತನ್ನ ಬೆರಳಿನಿಂದ ಬ್ರಹ್ಮಾಂಡದ ರಂಧ್ರವನ್ನು ಚುಚ್ಚಿದನು, ಗಂಗಾದೇವಿಯು ವಿಷ್ಣುವಿನ ಪಾದಗಳ ಮೇಲೆ ಸ್ವರ್ಗಕ್ಕೆ ಹಾಗೂ ಭೂಮಿಗೆ ಹರಿಯುವಂತೆ ಮಾಡಿದನು ಎಂದು ವಿವರಿಸುತ್ತದೆ. ಅವಳು ವಿಷ್ಣುವಿನ ಪಾದಗಳ ಸಂಪರ್ಕಕ್ಕೆ ಬಂದ

ಕಾರಣ ಗಂಗೆಯನ್ನು ವಿಷ್ಣುಪಾದಿ ಎಂದು ಕರೆಯುತ್ತಾರೆ. ಅಂದರೆ ವಿಷ್ಣುವಿನ ಪಾದದ ಕಮಲದಿಂದ ಬಂದವಳು ಎನ್ನಲಾಗಿದೆ.

### "ತ್ರಿಪಥ"ಗಳಾದ ಗಂಗೆ:

ಸ್ವರ್ಗ, ಪೃಥ್ವಿ ಹಾಗೂ ಪಾತಾಳ ಎಂಬ ತ್ರೈಲೋಕಗಳಿಂದ ಹರಿಯುವ ಏಕೈಕ ನದಿ ಎಂದರೆ ಅದು ಗಂಗಾ. ಮೂರು ಲೋಕ ಗಳಿಗೂ ಸಂಚರಿಸಿದ ವ್ಯಕ್ತಿಯನ್ನು ಸಂಸ್ಕೃತ ಭಾಷೆಯಲ್ಲಿ ತ್ರಿಪಥಗ ಎಂದು ಸಂಬೋಧಿಸಲಾಗುತ್ತದೆ. ಹಿಂಧೂ ಧರ್ಮದಲ್ಲಿ ಪವಿತ್ರವಾದ ಗಂಗಾ ನದಿಯನ್ನು ಗಂಗಾದೇವಿಯೆಂದು ನಿರೂಪಿ ಸಲಾಗಿದೆ ಹಾಗೂ ವೈಯಕ್ತೀಕರಿಸಲಾಗಿದೆ. ಹಿಂದೂ ಧರ್ಮದ ಅನುಯಾಯಿಗಳು ಪವಿತ್ರ ಗಂಗಾ ಸ್ನಾನವು ಎಲ್ಲಾ ಪಾಪಗಳನ್ನು ನಾಶ ಮಾಡಲು ಸಹಕಾರಿಯಾಗಿದೆ ಎಂದು ನಂಬುತ್ತಾರೆ. ನದಿಯ ಸಣ್ಣ ಸ್ಪರ್ಶವು ಮೋಕ್ಷವನ್ನು ಪಡೆಯಲು ಸಹಾಯ ಮಾಡುತ್ತದೆ ಹಾಗೂ ಸತ್ತವರ ಚಿತಾಭಸ್ಮವನ್ನು ಪವಿತ್ರ ನದಿಯಲ್ಲಿ ಮುಳುಗಿಸಲಾಗುತ್ತದೆ ಎಂದು ಜನರು ನಂಬುತ್ತಾರೆ.

### ಭಾರತದ ಜೀವನಾಡಿ :

ಗಂಗೆಯು ಭಾರತದ ಜನಸಂಖ್ಯೆಗೆ 40% ನೀರನ್ನು ಒದಗಿಸುವ ಕಾರಣ, ಗಂಗೆಯನ್ನು ಭಾರತದ ಜೀವನಾಡಿ, ಭಾರತದ ಪವಿತ್ರ ಜಲ ಎಂದು ಪರಿಗಣಿಸಲಾಗಿದೆ. ಹೆಚ್ಚುವರಿ ಯಾಗಿ, ಇದು ಹಲವಾರು ಬೆಳೆಗಳಿಗೆ ನೀರಾವರಿ ಮೂಲವಾಗಿದೆ. ಗಂಗಾ ಜಲಾನಯನ ಪ್ರದೇಶವು ಫಲವತ್ತಾದ ಮಣ್ಣನ್ನು ಹೊಂದಿದ್ದು, ಭಾರತ ಹಾಗೂ ಅದರ ನೆರೆಯ ದೇಶವಾದ ಬಾಂಗ್ಲಾದೇಶದ ಕೃಷಿ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತದೆ. ಗಂಗಾ ನದಿಯು ಮೀನುಗಾರಿಕೆ ಉದ್ಯಮಗಳನ್ನು ಪ್ರೋತ್ಸಾಹಿ ಸುತ್ತದೆ.

ಇದು ಭಾರತೀಯರ ಜೀವನೋಪಾಯಕ್ಕೆ ಕೃಷಿ ಹಾಗೂ ವೃತ್ತಿಪರ ಅತ್ಯಗತ್ಯವಾಗಿದೆ. ಉತ್ತರ ಭಾರತದ ಹಿಮಾಲಯದ ಎತ್ತರದಲ್ಲಿರುವ ಗಂಗೋತ್ರಿ ಗ್ಲೇಸಿಯರ್‌ನಿಂದ ಹುಟ್ಟಿಕೊಂಡ ಈ ನದಿಯು ಭಾರತದ ಮೂಲಕ ಆಗ್ನೇಯಕ್ಕೆ ಹರಿಯುತ್ತದೆ. ಬಾಂಗ್ಲಾದೇಶಕ್ಕೆ ಬಂಗಾಳಕೊಲ್ಲಿಗೆ ಚೆಲ್ಲುತ್ತದೆ. ಇದು 400 ಮಿಲಿ ಯನ್‌ಗಿಂತಲೂ ಹೆಚ್ಚು ಜನರಿಗೆ ಕುಡಿಯುವ, ಸ್ನಾನ ಮತ್ತು ಬೆಳೆಗಳಿಗೆ ನೀರಾವರಿಗಾಗಿ ಬಳಸಲಾಗುವ ನೀರಿನ ಪ್ರಾಥಮಿಕ ಮೂಲವಾಗಿದೆ.

### ಗಂಗಾರತಿ:

ಪ್ರಸಿದ್ಧ ಗಂಗಾರತಿಯು ಪ್ರತಿನಿತ್ಯ ಸಾಯಂ ಕಾಲದ ಸಮಯದಲ್ಲಿ ನಡೆಯುತ್ತದೆ ಹಾಗೂ ಇದು ಕಣ್ಮನ ಸೆಳೆಯುವ ಕಾರ್ಯವಾಗಿದೆ. ಎಲ್ಲಾ ಘಾಟ್‌ಗಳು ಹೂವುಗಳ ಪರಿಮಳ ಗಳಿಂದ ಹಾಗೂ ಅಗರಬತ್ತಿಗಳ ಸುಗಂಧದಿಂದ, ಸುವಾಸನೆ ಯಿಂದ ಕಂಗೊಳಿಸುತ್ತದೆ. ಹಲವಾರು ಜನ ಪುರೋಹಿತರು ದೀಪಗಳನ್ನು ಹೊತ್ತೊಯ್ಯುವ ಮೂಲಕ ಹಾಗೂ ಭಜನೆಗಳ ಲಯಬದ್ಧ ರಾಗದಲ್ಲಿ ಮೇಲಕ್ಕೆ ಹಾಗೂ ಕೆಳಕ್ಕೆ ದೀಪ ಬೆಳಗುವ ಮುಖಾಂತರ ಗಂಗಾರತಿಯ ಪದ್ಧತಿಯನ್ನು ನೆರವೇರಿಸುತ್ತಾರೆ.

### ಗಂಗಾಘಟ್ಟಗಳು:

ಗಂಗೆಯ ಸ್ನಾನ ಘಟ್ಟಗಳು ಸುಪ್ರಸಿದ್ಧ ಪ್ರವಾಸಿ ಆಕರ್ಷಣೆಯಾಗಿದೆ. ಘಾಟ್ ಎಂಬುದು ನದಿಗೆ ಹೋಗುವ ಮೆಟ್ಟಿಲುಗಳ ಸರಣಿಯಾಗಿದೆ ಹಾಗೂ ಗಂಗಾಸ್ನಾನವು ನಿಜಕ್ಕೂ ಮಂಗಳಕರವಾಗಿದೆ ಹಾಗೂ ಎಲ್ಲಾ ಪಾಪಗಳನ್ನು ತೊಳೆ ಯುತ್ತದೆ ಎಂದು ನಂಬಲಾಗಿದೆ.

### ಗಂಗೆಯ ಉದ್ದಕ್ಕೂ ಹಬ್ಬಗಳು :


ಗಂಗಾ ನದಿಯ ದಡವು ಪ್ರತಿ ವರ್ಷ ನೂರಾರು ಹಬ್ಬ ಗಳು ಹಾಗೂ ಆಚರಣೆಗಳನ್ನು ಸಮೀಪಿಸುತ್ತದೆ. ಜ್ಯೇಷ್ಠಮಾಸದ 10 ರಂದು (ಗ್ರೆಗೋರಿಯನ್ ಕ್ಯಾಲೆಂಡರ್‌ನಲ್ಲಿ ಮೇ ಅಂತ್ಯ ಹಾಗೂ ಜೂನ್ ಆರಂಭದ ಮಧ್ಯೆ ಬೀಳುತ್ತದೆ), ಗಂಗಾ, ದಸರವು ಪವಿತ್ರ ನದಿ ಸ್ವರ್ಗದಿಂದ ಇಳೆಗೆ ಇಳಿಯುವುದನ್ನು ತಿಳಿಸುತ್ತದೆ. ಈ ದಿನ ದೇವಿಯನ್ನು ಆವಾಹನೆ ಮಾಡುವಾಗ ಪವಿತ್ರ ನದಿಯಲ್ಲಿ ಸ್ನಾನ ಮಾಡುವುದರಿಂದ ಪಾಪಗಳನ್ನು ಶುದ್ಧೀ ಕರಿಸುತ್ತದೆ ಹಾಗೂ ದೈಹಿಕ ಕಾಯಿಲೆಗಳನ್ನು ತೊಡೆದು ಹಾಕು ತ್ತದೆ ಎಂದು ನಂಬ ಲಾಗಿದೆ.

### ಪವಿತ್ರ ಕುಂಭಮೇಳ :

ಮತ್ತೊಂದು ಪವಿತ್ರ ಆಚರಣೆಯಾದ ಕುಂಭಮೇಳವು ಹಿಂದೂ ಹಬ್ಬವಾಗಿದ್ದು, ಈ ಸಂದರ್ಭದಲ್ಲಿ ಗಂಗಾನದಿಯ ಯಾತ್ರಿಕರು ಪವಿತ್ರ ನೀರಿನಲ್ಲಿ ಸ್ನಾನ ಮಾಡುತ್ತಾರೆ. ಈ ಹಬ್ಬವು ಪ್ರತಿ 12 ವರ್ಷಗಳಿಗೊಮ್ಮೆ ಒಂದೇ ಸ್ಥಳದಲ್ಲಿ ನಡೆ ಯುತ್ತದೆ ಆದರೂ ಈ ಕುಂಭಮೇಳವನ್ನು ಜಗತ್ತಿನ ಅತಿದೊಡ್ಡ ಶಾಂತಿ ಯುತ ಸಭೆ ಎಂದು ಪರಿಗಣಿಸಲಾಗಿದೆ.

ಏಷ್ಯಾದ ಕೆಲವು ಜನನಿಬಿಡ ಪ್ರದೇಶಗಳಲ್ಲಿ 1500 ಮೈಲುಗಳಿಗಿಂತಲೂ ಹೆಚ್ಚು ಹರಿಯುವ ಗಂಗಾ ನದಿಯು ಬಹುಶಃ ವಿಶ್ವದ ಅತ್ಯಂತ ಧಾರ್ಮಿಕವಾದ ಮಹತ್ವದ ಜಲರಾಶಿ ಯಾಗಿದೆ. ನದಿಯನ್ನು ಪವಿತ್ರ ಹಾಗೂ ಆಧ್ಯಾತ್ಮಿಕವಾಗಿ ಶುದ್ಧವೆಂದು ಪರಿಗಣಿಸಲಾಗಿದೆ.

# ತಿರುಮಲೆಯಲ್ಲಿ ರಾಮಾನುಜರು



**ರಾಮಾನುಜರ ಗುಡಿ :**

ತಿರುಮಲೆಯಲ್ಲಿ ರಾಮಾನುಜರ ಗುಡಿಯ ನಿರ್ಮಾಣದ ಬಗೆಗಿನ ಯಾವುದೇ ನಿಖರವಾದ ಕಾಲ ಸೂಚನೆಯೂ ದೊರೆತಿಲ್ಲ. ಸಾಳುವ ನರಸಿಂಹನ ಆಡಳಿತದ ಕಾಲಕ್ಕೆ ಭಗವದ್ರಾಮಾನುಜರ ಒಂದು ಗುಡಿ ಇದ್ದಿತೆಂದು ಮಾತ್ರ ತಿಳಿದು ಬರುತ್ತದೆ. ಶಕವರ್ಷ 1398 ರಲ್ಲಿ ಶಠಗೋಪ ದಾಸರ್ ನರಸಿಂಹರಾಯ ಮೊದಲಿಯಾರನು ರಾಮಾನುಜರಿಗಾಗಿ ಪ್ರತಿದಿನವೂ ತಿರುಮಲೆಯ ರಘುನಾಥರಿಗೆ ಮೊದಲು ನಿವೇದಿಸಲು ಹಾಗೂ ಹನ್ನೆರಡು ಮಂದಿ ಆಳ್ವಾರರುಗಳ ವರ್ಷ ತಿರುನಕ್ಷತ್ರದ ದಿನಗಳಂದು ನಿವೇದಿಸಲು 5200 ಪಣಗಳನ್ನು ನೀಡಿ ಅವುಗಳನ್ನು ತಿರುವಿಡೆಯಾಟ್ಟದ ಗ್ರಾಮಗಳ ನೀರಾವರಿಯನ್ನು ಹೆಚ್ಚಿಸಲು ಬಳಸಿ ಬರುವ ಹೆಚ್ಚಿನ ಆದಾಯವನ್ನು ಮೇಲ್ಕಾಣಿಸಿದ ನಿವೇದನೆಗಳಿಗೆ ಬಳಸಬೇಕೆಂದೂ ಕಟ್ಟಳೆ ಮಾಡಿದ.(ತಿ.ತಿ.200)ಹನ್ನೆರಡು ಮಂದಿ ಆಳ್ವಾರರಲ್ಲಿ ಯಾರೊಬ್ಬರ ವಿಗ್ರಹವೂ ತಿರುಮಲೆಯಲ್ಲಿಲ್ಲದ ಕಾರಣದಿಂದಾಗಿ ಅವರುಗಳ ವರ್ಷ ತಿರುನಕ್ಷತ್ರದ ದಿನದಂದು ಮೊದಲು ಶ್ರೀವೆಂಕಟೇಶ್ವರ ಸ್ವಾಮಿಗೆ ನಿವೇದಿಸಿದ ಬಳಿಕ ಅದನ್ನು ರಾಮಾನುಜರಿಗೆ ಅವರ ಗುಡಿಯಲ್ಲಿ ಒಪ್ಪಿಸಬೇಕೆಂಬ ಪದ್ಧತಿಯಾಯಿತು. ರಾಮಾನುಜರ ಜನ್ಮ ನಕ್ಷತ್ರ ವಾದ ಆರ್ದ್ರಾ ನಕ್ಷತ್ರದ ದಿನದಂದು ವರ್ಷದ ಹನ್ನೊಂದು ತಿಂಗಳುಗಳಲ್ಲಿ ಉತ್ಸವ ನಡೆಸಿ ಚಿತ್ರಾ ಮಾಸದಲ್ಲಿ (ಚೈತ್ರ ಮಾಸ) ಹನ್ನೆರಡು ದಿನಗಳ ಅಧ್ಯಯನೋತ್ಸವವನ್ನು ನಡೆಸುವಂತೆಯೂ ಈ ಮೊತ್ತದ 23 ದಿನಗಳಂದು ಒಂದೊಂದು ತಿರುವೋಲಗ ಸಮರ್ಪಣೆಯಾಗುವಂತಾಯಿತು. ಎಂದರೆ ಆಯಾ ದಿನಗಳಂದು ರಾಮಾನುಜರ ಗುಡಿಯ ಹೊರ ಅಂಗಳದಲ್ಲಿ ಅವರ ಉತ್ಸವ ಮೂರ್ತಿಯನ್ನು ಓಲಗ ಪೀಠದಲ್ಲಿ ಆಸೀನಗೊಳಿಸಿ ಅವರ ಮುಂದೆ ಸಂಬಂಧ ಪಟ್ಟ ಪ್ರಬಂಧಗಳನ್ನು ಪಠಿಸಿ, ನಂತರ ವಿವಿಧ ರೀತಿಯ ಪಕ್ವಾನ್ನ, ಕರಿದ ತಿನಿಸುಗಳನ್ನು ನಿವೇದಿಸಿ, ನಂತರ ಅದನ್ನು ಪ್ರಸಾದವೆಂದು ಅಲ್ಲಿ ನೆರೆದ ಭಕ್ತರಲ್ಲಿಯೂ ಆಲಯ ಸೇವಾದಾರರಲ್ಲಿಯೂ ಹಂಚಲಾಗುತ್ತಿದ್ದಿತು.

ಇಲ್ಲಿ ಕಂಡು ಬರುವ ಒಂದು ವೈಶಿಷ್ಟ್ಯವೆಂದರೆ ಶಾತ್ತಿನ ಹಾಗೂ ಶಾತ್ತಾದ ಶ್ರೀವೈಷ್ಣವರಿಬ್ಬರೂ ಪ್ರಬಂಧಗಳನ್ನು ಪಠಿಸಿ, ಎರಡು ಪ್ರಸಾದ, ಆರು ಅಪ್ಪಗ ಳನ್ನು ಪಡೆಯುತ್ತಿದ್ದರು. ವಿಜಯನಗರದರಸರ ಕಾಲದಲ್ಲಿ ವೈಷ್ಣವತೆಯು ವ್ಯಾಪಕವಾಗಿದ್ದಿತೆಂಬುದನ್ನೂ, ಪ್ರತ್ಯೇಕವಾಗಿ ಸಾಳುವ ನರಸಿಂಹನ ಕಾಲದಲ್ಲಿ ಹೆಚ್ಚು ಪ್ರಬಲವಾಗಿ, ಶ್ರೀವೈಷ್ಣವ ಆಚಾರ್ಯರು ಈ ತತ್ವ ಪ್ರಚಾರದಲ್ಲಿ ತಮ್ಮೆಲ್ಲ ಆಸಕ್ತಿಗಳನ್ನು ಬಳಸಿದರು ಎಂಬುದನ್ನು ಗಮನಿಸಬೇಕು. ತಿರುಪತಿಯ ಮಟ್ಟಿಗೆ ಹೇಳುವುದಾದರೆ ಆಡಳಿತ ರಂಗದಲ್ಲಿಯೂ ಸಾಮಾಜಿಕ ರಂಗದಲ್ಲಿಯೂ ಅತ್ಯಂತ ಪ್ರಭಾವ ಶಾಲಿಯಾಗಿ ಬೆಳೆದಿದ್ದ ಕಂದಾಡೈ ರಾಮಾನುಜಯ್ಯಂಗಾರ್ಯನ ಪ್ರಭಾವವಲಯದಲ್ಲಿ ಶ್ರೀವೈಷ್ಣವರು ಪ್ರಾಧಾನ್ಯ ಪಡೆದರು.

ಇವರು ಆಲಯದಲ್ಲಿ ವಿವಿಧ ರೀತಿಯ ಸೇವೆ ಸಲ್ಲಿಸುತ್ತಿದ್ದರು. ಮುಖ್ಯವಾಗಿ ನಂದನ ವನಗಳನ್ನು ಬೆಳೆಸಿ, ಸ್ವಾಮಿಯ ಪೂಜೆಗೆ ತಕ್ಕ ಹೂವುಗಳನ್ನು ನೀಡುವುದು ಉದ್ಯೋಗವಾಯಿತು. ತಮ್ಮ ಗುರುಕಂದಾಡೈ ರಾಮಾನುಜಯ್ಯಂಗಾರ್ಯನ ಪರವಾಗಿ ಆಲಯದಲ್ಲಿ ಪೂಜೆಗೆ ಅಗತ್ಯವಾದ ಸುಗಂಧ ದ್ರವ್ಯಗಳು, ತುಪ್ಪ, ಬೇಳೆ-ಮೊದಲಾದವನ್ನು ಒದಗಿಸುವ ಕಾಯಕದಲ್ಲಿಯೂ ತೊಡಗಿದ ಇವರಿಗೆ ಪ್ರತಿ ಫಲವಾಗಿ ಪ್ರಸಾದದ ಒಂದು ಭಾಗವೂ, ನಿಯಮಿತವಾದ ಸಂಬಳವೂ ದೊರೆಯುತ್ತಿದ್ದಿತೆಂದೂ ತೋರುವುದು.(ತಿ.ತಿ.197 ಹಾಗೂ 200)ಇವರು ಹದಿನಾರು ಮನೆಗಳ ಬಡಾವಣೆಯ ಬೀದಿಯಾಗಿ ತಿರುಮಲೆಯಲ್ಲಿ ನೆಲೆಸಿದ್ದಂತೆ ತೋರುತ್ತದೆ. ಈ ಬೀದಿಗೆ ಕಂದಾಡೈ ರಾಮಾನುಜಯ್ಯಂಗಾರ ತಿರುವೀಧಿ ಎಂದೇ ಹೆಸರಿದ್ದಿತು. ಕಂದಾಡೈ ರಾಮಾನುಜ ಅಯ್ಯಂಗಾರ್ಯನ ಕಾಲದಲ್ಲಿ ಇವರು ಪಡೆದಿದ್ದ ಎತ್ತರದ ಸ್ಥಾನಮಾನಗಳನ್ನು ಇವರ ಮನೆಗಳನ್ನು 'ತಿರುಮಾಳಿಗೈ' ಎಂದೂ 'ಶಾತ್ತಾದ ಶ್ರೀ ವೈಷ್ಣವರ್



ತಿರುಮಾಳಿಗೈಗಳ್' ಎಂದೂ ಗುರುತಿಸಿರುವ ವಿಧಾನದಿಂದ ತಿಳಿಯಬಹುದಾಗಿದೆ. ಆದರೆ ನಂತರದ ಕಾಲದಲ್ಲಿ ಇವರೆಲ್ಲ ತಮ್ಮ ಪ್ರಾಧಾನ್ಯವನ್ನು ಕಳೆದುಕೊಂಡು, ಆಲಯದ ಸೇವೆಯನ್ನು ಪರಿತ್ಯಜಿಸಿದರೆಂದು ಹೇಳಬೇಕು. ಕಾರಣ 1920 ಹೊತ್ತಿಗೆ ಅಂತಹವರಲ್ಲಿ ಒಬ್ಬರೂ ಆಲಯದ ಸೇವೆಯಲ್ಲಿಲ್ಲದಿರುವುದು.

**ರಾಮಾನುಜರ ಪ್ರಭಾವ :-**

ವೈಷ್ಣವ ಪಂಥವನ್ನು ಸ್ಥಾಪಿಸಿ ವಿಶಿಷ್ಟಾದ್ವೈತ ತತ್ವವನ್ನು ಪ್ರಸಾರ ಮಾಡಿದ ಭಗವದ್ರಾಮಾನುಜರು ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧ ಹಾಗೂ ಹನ್ನೆರಡನೆಯ ಶತಮಾನದ ಮೊದಲ ಹಾಗದಲ್ಲಿ ಧರ್ಮ ಪ್ರಸಾರದಲ್ಲಿ ತೊಡಗಿಸಿಕೊಂಡಿದ್ದವರು. ದೇವರ ಬಗ್ಗೆ ಭಕ್ತಿ ಹಾಗೂ ಸಹಜೀವಿಗಳ ಬಗ್ಗೆ ಪ್ರೀತಿ ಅವರ ಧರ್ಮದ ಮೂಲಸೆಲೆಯಾಗಿದ್ದು, ಹೈಂದವ ತ್ರಿಮೂರ್ತಿಗಳಲ್ಲಿ ವಿಷ್ಣುವಿನ ಏಕಮೇವಾ ದ್ವಿತೀಯ ಪಾರಮ್ಯ ಹಾಗೂ ಪುರುಷೋತ್ತಮತ್ವಕ್ಕೆ ಮತ ಹಾಗೂ ಸಿದ್ಧಾಂತದ ಮುಖ್ಯ ನೆಲೆಯಾಯಿತು. ಮುಕ್ತಿಯನ್ನು ದೊರಕಿಸಿಕೊಳ್ಳಲು ಜೀವನ ಪರ್ಯಂತ ಕೈಂಕರ್ಯ ಹಾಗೂ ವೈಷ್ಣವ ಭಕ್ತಿಯಿರಬೇಕು ಎಂದು ಆತ ಆಚರಿಸಿ ಪ್ರಚಾರ ಮಾಡಿದರು-ಬೋಧಿಸಿದರು.ಅವರ ಬೋಧನೆಯಿಂದಾಗಿ ಬಹುಮಂದಿ ವೈಷ್ಣವ ಮತವನ್ನು ಅವಲಂಬಿಸುವಂತಾಯಿತು."ಈ ಹೊಸ ಶ್ರೀವೈಷ್ಣವ ಪಂಥವು ಬ್ರಾಹ್ಮಣ ಜಾತಿಯವರಿಗೆ ಮಾತ್ರವೇ ಸೀಮಿತವಾಗಲಿಲ್ಲ. ಇದು ವಿಶಾಲ ದೃಕ್ಪಥವನ್ನು ಹೊಂದಿದ್ದು ಜಾತಿ ವರ್ಣಗಳ ಭೇದವಿಲ್ಲದೆ ಸ್ತ್ರೀ ಪುರುಷರನ್ನು ತನ್ನ ಪರಿಧಿಯಲ್ಲಿ ಸೇರಿಸಿಕೊಂಡಿತು.''

ಇದೇ ರೀತಿಯ ಅಚಂಚಲವಾದ ಗಾಢವಾದ ನಂಬಿಕೆಯನ್ನು ಅವರ ಅತಿವಿಶ್ವಾಸದ ಅನುಯಾಯಿಗಳೂ, ಅತಿನಿಕಟ ಶಿಷ್ಯರೂ ಹೊಂದಿದ್ದವರಾಗಿದ್ದರು. ಗುರುಗಳ ಆಜ್ಞೆಯ ಮೇರೆಗೆ ತಿರುಮಲೆಯಲ್ಲಿಯೇ ನೆಲೆಸಿ, ಶ್ರೀವೆಂಕಟೇಶ್ವರ ಸ್ವಾಮಿಯ ಕೈಂಕರ್ಯದಲ್ಲಿ ಪುಷ್ಪವನವನ್ನು ಬೆಳೆಸಿ ಅದಕ್ಕೆ ರಾಮಾನುಜಂ ಎಂದೇ ಹೆಸರಿಟ್ಟು ಸ್ವಾಮಿಯ ಸೇವೆಗೆ ಹೂವುಗಳನ್ನು ಒದಗಿಸುತ್ತಿದ್ದ ಅನಂತಸೂರಿ ಅಂತಹವರಲ್ಲಿ ಒಬ್ಬರಾಗಿದ್ದರು. ನಂತರದಲ್ಲಿ ಅನೇಕ ಏಕಾಂಗಿಗಳೂ,ಜೀಯರುಗಳೂ ಅನಂತಸೂರಿಗಳ ಆದರ್ಶವನ್ನೇ ಅನುಸರಿಸಿ ತಮ್ಮ ಜೀವ ಮಾನವನ್ನೆಲ್ಲ ದೇವರ ಸೇವೆಯಲ್ಲಿ ಹೂವಿನ ಸರಬರಾಜು ಮಾಡುವ ಕೈಂಕರ್ಯಕ್ಕೇ ಮೀಸಲಾಗಿಟ್ಟು ನಡೆದುಕೊಂಡರು. ಉಡೆಯವರ್ ಕೋಯಿಲ್ ಅಣ್ಣನ್ ಎಂದು ಹೆಸರಾದ ಅನು ಸಂಧಾನಂ ತಿರುವೆಂಕಟದಾಸರು (ತಿ.ತಿ. 274) ಹಸ್ತಿಗಿರಿದಾಸರು (ತಿ.ತಿ. 341) ಮೊದಲಾದ ಶ್ರೀವೈಷ್ಣವ ಪ್ರಮುಖರೂ ತಮ್ಮ ಗುರುವಿನ ಅನುಸರಣೆಯಲ್ಲಿ ಇಂತಹದೇ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಡೆದರು. ಈ ದಿಸೆಯಲ್ಲಿ ಮಲ್ಯೈಕುನಿಯ ನಿನ್ರಾನ್ ನಂದನವನವನ್ನು ನೋಡಿಕೊಳ್ಳುತ್ತಿದ್ದ ಏಕಾಂಗಿ ಗೋಪಯ್ಯನು ಏಕಾಂಗಿಗಳಲ್ಲಿ ಪ್ರಮುಖನಾದವನು. (ತಿ.ತಿ.63) ಪಿನ್‌ಸೆನ್ರವಿಲ್ಲಿ ನಂದನವನ್ನು ನೋಡಿಕೊಳ್ಳುತ್ತಿದ್ದ ಏಕಾಂಗಿ ಪೆರಿಯ ಪೆರುಮಾಳ್‌ದಾಸರು (ತಿ.ತಿ.50) ತಿರುವಾಲಿಪರಪ್ಪಿನಾನ್ ತಿರುನಂದನವನ್ನು ನೋಡಿಕೊಳ್ಳುತ್ತಿದ್ದ ಏಕಾಂಗಿ ತಿರುವೆಂಕಟಯ್ಯನೂ (ತಿ.ತಿ.-32) ತಿರುಮಲೆಯಲ್ಲಿಯೇ ವಾಸ ಮಾಡುವವರಾಗಿದ್ದರು.ತಿರುವೆಂಕಟಯ್ಯನು ವೇದಾಂತಾ ಚಾರ್ಯ ಪ್ರತಿವಾದಿ ಭಯಂಕರಅಣ್ಣಾ ಅವರ ಮಗ ಅಪ್ಪಾವೈಯಂಗಾರ್‌ರ ಶಿಷ್ಯನಾಗಿದ್ದರೆ, ಪೆರಿಯ ಪೆರುಮಾಳದಾಸರು ಪೆರಿಯ ಪೆರುಮಾಳ್ ಜೀಯರ ಶಿಷ್ಯ ಆಗಿದ್ದು ನಂತರ ಜೀಯರ್ ಸ್ಥಾನಕ್ಕೇರಿದವರು.

ಶಕ 1309 ರಿಂದ (ತಿ.ತಿ.103,43, 57) ಎಂದರೆ ಅರಿಸಾನಾಲಯವನ ನಂದನವನದ ಉಸ್ತುವಾರಿ ನೋಡುತ್ತಿದ್ದ ಮುಲ್ಲೈ ತಿರುವೆಂಕಟಜೀಯರಿಂದ ಆರಂಭಿಸಿ ಶಕ 1458 ರಲ್ಲಿ (ತಿ.ತಿ.21) ಅಚ್ಯುತರಾಯನ ನಂದನವನವನ್ನು ನೋಡಿಕೊಳ್ಳುತ್ತಿದ್ದ ವಡತಿರುವೆಂಕಟಜೀಯರವರೆಗೆ ಪಂಕಯಚೆಲ್ಲಿ ನಂದನವನವನ್ನು ಕೋಯಿಲ್ ಕೇಳ್ವಿ ಎಂಬೆರುಮಾನಾರ್ ಜೀಯರು, (ತಿ.ತಿ. 48) ಅವರ ನಂತರ ರಾಮಾನುಜಜೀಯರು ಮೊದಲಾದ ಹಲವು ಜೀಯರುಗಳ ನೋಡಿಕೊಳ್ಳುತ್ತಿದ್ದರು. (ತಿ.ತಿ.48,333) ಪೆರಿಯ ಪೆರುಮಾಳ ಜೀಯರು ತಿರುವೆಂಕಟನಾಥನ್ ಹೂದೋಟವನ್ನು (ತಿ.ತಿ. 47) ನೋಡಿಕೊಳ್ಳುತ್ತಿದ್ದರು. ಯತಿರಾಜ ಜೀಯರು ಮಲ್ಯೆ ಕುನಿಯ ನಿನ್ರಾನ್ ಪುಷ್ಪವನವನ್ನು (ತಿ.ತಿ. 337 ) ನೋಡುತ್ತಿದ್ದರು. ಅನುಸಂಧಾನಂ ತಿರುವೆಂಕಟಜೀಯರು ತಿರುವೆಂಕಟ ನಂದನವನವನ್ನು ನೋಡುತ್ತಿದ್ದರು (ಜಿ.ಟಿ. 155)

ರಾಮಾನುಜರ ಪ್ರಭಾವಗಳಲ್ಲಿ ಗುರುತಿಸಬಹುದಾದ ಒಂದು ಅಂಶವೆಂದರೆ ಆಳ್ವಾರರುಗಳ ವಿಗ್ರಹ ಪ್ರತಿಷ್ಠೆ. ಕೆಲ ಕಾಲದ ನಂತರ ಅವರದೇ ವಿಗ್ರಹ ಪ್ರತಿಷ್ಠೆ ಆಗಿ ಎಲ್ಲರಿಗೂ ದೈನಿಕ ಪೂಜೆ ಉತ್ಸವಗಳಿಗಾಗಿ ತಕ್ಕ ಏರ್ಪಾಡುಗಳು ನಡೆದು, ಹಲವು ಜೀಯರುಗಳು ಈ ನಿತ್ಯಪೂಜೆಯ ಉಸ್ತುವಾರಿಯನ್ನು ನೋಡುವಂತೆ ಆದದ್ದು. ದೃಷ್ಟಾಂತವೆಂದರೆ ಕ್ರಿ.ಶ. 1475 ರಲ್ಲಿ- ಶಕ 1397 ರಲ್ಲಿ (ಜಿ.ಟಿ 145 ) ತಿರುಪತಿಯ ರಾಮಾನುಜರ ಗುಡಿಯನ್ನು ಯತಿರಾಜ ಜೀಯರು (ಜಿ.ಟಿ. 2013 ) ನೋಡಿ ಕೊಳ್ಳುತ್ತಿದ್ದರು. ಹಾಗೆಯೇ ತಿರುಮಂಗೈ ಆಳ್ವಾರರ ಆಲಯವು ಕೆಲವು ಏಕಾಂಗಿ ಶ್ರೀವೈಷ್ಣವರ ಆಡಳಿತದಲ್ಲಿದ್ದಿತು. (ಜಿ.ಟಿ.333) ಜೊತೆಗೇ - ಶ್ರೀವೆಂಕಟೇಶ್ವರಸ್ವಾಮಿಯ ಆಲಯದಲ್ಲಿಯೂ, ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿಯೂ ಕೋದಂಡರಾಮರ ಆಲಯದಲ್ಲಿಯೂ ಇಂದಿಗೂ ಇರುವ ರಾಮಾನುಜರ ಗುಡಿಗಳು ಅಲಿಪಿರಿಯಲ್ಲಿದ್ದ ಪೆರಿಯಾಳ್ವಾರರ ಗುಡಿಯೂ, ಕಪಿಲತೀರ್ಥ ದಲ್ಲಿನ ನಮ್ಮಾಳ್ವಾರ್ ಗುಡಿಯೂ,ಗೋವಿಂದರಾಜಸ್ವಾಮಿ ಆಲಯ ದಲ್ಲಿನ ಆಳ್ವಾರರುಗಳ ಗುಡಿಗಳೂ ರಾಮಾನುಜರ ಗುಣಾತ್ಮಕ ಪ್ರಭಾವದ ಸ್ಪಷ್ಟಸಾಕ್ಷಿಗಳಾಗಿವೆ.

ಮೂರನೆಯದಾಗಿ ಇಲ್ಲಿ ರಾಮಾನುಜ ಪಂಥದ ಪ್ರತಿ ಷ್ಠಾಪನೆಯಿಂದಾಗಿ ಹಲವಾರು ಶ್ರೀವೈಷ್ಣವ ಮಠಗಳುಂಟಾಗು ವಂತೆ ಆಯಿತು. ತಿರುಮಲೆಯ ತಿರುಮಳಿಶೈಪ್ಪಿರಾನ್ ಮಠಂ (ತಿ.ತಿ.333) ವಣ್‌ಶಠಗೋಪ ಮಠಂ (ತಿ.ತಿ. 276) ಪೇರರು ಳಾಳನ್ ಮಠಂ, ತಿರುವೆಂಕಟನಾಥನ್ ಮಠಂ ಹಾಗೂ ತಿರು ವಾಳಿಪರಪ್ಪಿನಾನ್ ಮಠಂ (ಜಿ.ಟಿ 155 ಹಾಗೂ 156) ಇವು ಗಳಲ್ಲಿ ಮೊದಲಿನ ಎರಡು ಏಕಾಕಿ ಶ್ರೀವೈಷ್ಣವರಿಂದ ಆಳ್ವಿಕೆ ಹೊಂದಿದ್ದು. ಪ್ರಾಯಶಃ ಈ ಮಠಗಳೆಲ್ಲವೂ ಶ್ರೀವೈಷ್ಣವ ತತ್ತ್ವ ವಿಚಾರಗಳ ಶಿಕ್ಷಣ ಕೇಂದ್ರಗಳಂತೆ ಕೆಲಸ ಮಾಡುತ್ತಿದ್ದಿರಬೇಕು. ಸಮಯಾನುಕೂಲವಾಗಿ ತತ್ವಪ್ರಸಾರ ಕೇಂದ್ರಗಳೂ ಆಗುತ್ತಿದ್ದಿರ ಬೇಕು.

ನಾಲ್ಕನೆಯದಾಗಿ ರಾಮಾನುಜರ ಹಿರಿಮೆಯಿಂದಾಗಿ, ಅವರ ವಿಗ್ರಹದಿಂದಾಗಿ, ಅವರ ಶಿಷ್ಯ ಪ್ರಶಿಷ್ಯರಲ್ಲಿನ ಧಾರ್ಮಿಕ ಆಸಕ್ತಿಯನ್ನು ಹೆಚ್ಚುಗೊಳಿಸುವಂತಾಗಿ, ತಮ್ಮ ಗುರುವಿನ ಹೆಸರಿ ನಲ್ಲಿ ನೆನಪಿನಲ್ಲಿ ತಮ್ಮ ದಾನ ಧರ್ಮಗಳನ್ನು ಗುರುತಿಸಲು ಆಸಕ್ತಿವಹಿಸುವಂತಾಯಿತು. ರಾಮಾನುಜ ಕೂಟವೆಂಬ ಹೆಸರಿ ನಲ್ಲಿ ಯಾತ್ರಿಕರ ಉಚಿತ ಭೋಜನ ಸೌಲಭ್ಯದ ಸತ್ರಗಳನ್ನು ಮೊದಲಿಗೆ ಸಾಳುವ ನರಸಿಂಹ (ಜಿ.ಟಿ.-8) ರಾಮನಾಯಕ (ತಿ.ತಿ.306) ರುಗಳಿಂದ ಆರಂಭಿಸಲ್ಪಟ್ಟವು. ನಂದನವನಗ ಳುಂಟಾದವು.ಅನಂತಸೂರಿ ಏರ್ಪಡಿಸಿದ ಮೊದಲ ಹೂದೋ ಟದ ಹೆಸರೇ ರಾಮಾನುಜಂ ಎಂಬುದಾಗಿದ್ದಿತು. ಭಕ್ತರು ಕಟ್ಟಿಸಿದ ಕೆರೆಗಳಿಗೆ ರಾಮಾನುಜನ್ ಏರಿ ಅಥವಾ ರಾಮಾನುಜನ್ ಪುಟ್ಟೇರಿ (ತಿ.ತಿ.311, 340)ಎಂದು ಹೆಸರಾದರೆ ಬೀದಿಯ ಹೆಸರು ರಾಮಾನುಜನ್ ತಿರುವೀಧಿ ಎಂದಾಯಿತು. (ತಿ.ತಿ. 314) ರಾಮಾನುಜರ ಅನುಯಾಯಿಗಳಲ್ಲಿ ಆತ ಬೀರಿದ ಆಳವಾದ ಧಾರ್ಮಿಕ ಪ್ರಭಾವದ ಎದ್ದು ಕಾಣುವ ಗುರುತುಗಳಾಗಿ ತಲೆಮಾರಿ ನಿಂದ ತಲೆಮಾರಿಗೆ ಇವು ವರ್ಗಾವಣೆಯಾಗುತ್ತ ಬಂದಿವೆ.

ಐದನೆಯದಾಗಿ ರಾಮಾನುಜರಿಗೆ ದಿವ್ಯ ಪ್ರಬಂಧಗಳನ್ನು ರಚಿಸಿದ ಆಳ್ವಾರರ ಬಗ್ಗೆ ಅತ್ಯಂತ ಹೆಚ್ಚಿನ ಗೌರವ ಭಕ್ತಿಗಳಿದ್ದದ್ದ ರಿಂದಾಗಿಯೂ, ಶ್ರೀವೈಷ್ಣವ ಪಂಥದಲ್ಲಿ ರಾಮಾನುಜ ಪೂರ್ವ ದಿಂದಲೂ ಅತ್ಯಂತ ಪ್ರಭಾವೀ ಬುನಾದಿಯಾಗಿದ್ದ ಪ್ರಬಂಧಗಳನ್ನು ಸ್ವತಃ ಅವರೇ ಹಾಡುತ್ತ ಪಾರಾಯಣ ಮಾಡಿಸುತ್ತ ಇದದ್ದ ರಿಂದಾಗಿ,ಅವರ ಶಿಷ್ಯ ಪ್ರಶಿಷ್ಯರೂ, ಶಾತ್ತಿನವರೂ, ಶಾತ್ತಾದ ವರೂ ತಿರುವಾಯ್ಮೊಳಿ (ತಿ.ತಿ.333) ಇಯಲ್ಪಾ (ತಿ.ತಿ.211) ಅವರದೇ ಸ್ತುತಿಯಾದ ನೂಟ್ರಂದಾದಿ (ಜಿ.ಟಿ. 58) ಯನ್ನೂ ಆಳ್ವಾರರ ಮುಂದೆಯೂ ದೇವರ ಮುಂದೆಯೂ ಹಾಡುವ ಪದ್ಧತಿ ಯುಂಟಾಯಿತು.

ಆರನೆಯದಾಗಿ ಆಲಯದಲ್ಲಿ ನಡೆಯುತ್ತ ಬಂದಿರುವ ಅಧ್ಯಯನೋತ್ಸವ. ದ್ರಾವಿಡ ವೇದವೆಂದು ಪರಿಗಣಿತವಾಗಿರುವ ನಾಲಾಯಿರ ದಿವ್ಯಪ್ರಬಂಧಗಳನ್ನು ಹಾಡುವುದರಿಂದ ಆಳ್ವಾರರ ನೆನಪನ್ನು ನಿತ್ಯನೂತನವಾಗಿಸುವ ಈ ಪದ್ಧತಿಯನ್ನು ರಾಮಾ ನುಜರು ಮೊತ್ತಮೊದಲ ಬಾರಿಗೆ ಆರಂಭಿಸಿದವರಲ್ಲ ಎಂದಾ ದಲ್ಲಿಯೂ ಈ ಪರಂಪರೆಗೆ ಅತ್ಯಂತ ತೀವ್ರವಾದ ಅವಧಾರಣೆ ಅವರಿಂದ ಉಂಟಾಗಿದ್ದಿರಬೇಕು ಎಂಬುದು ಸತ್ಯ.

ತಮ್ಮ ದಿವ್ಯಪ್ರಬಂಧಗಳಲ್ಲಿ ಆಳ್ವಾರರು ತಮಗುಂಟಾದ ದಿವ್ಯಾನುಭವಗಳ ಕುರಿತು, ಭಗವಂತನ ಅರಿವನ್ನು ಕುರಿತು, ಮುಮುಕ್ಷುಗಳ ಮನದ ಭಾವವನ್ನು ಕುರಿತು ತುಂಬು ಹೃದಯ ದಿಂದ ಆರ್ದ್ರವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಇಂದಿನ ದಿನಗಳಲ್ಲಿ ವೈಷ್ಣವ ಆಲಯಗಳಲ್ಲಿ ಪ್ರತಿದಿನವೂ ಹಾಗೂ ಅಧ್ಯಯನೋತ್ಸವ ಗಳಲ್ಲಿಯೂ ಅನುಸಂಧಾನವಾಗುವ ಈ ದಿವ್ಯಾನುಭವದ ಪಾಶುರಗಳು ಆಳ್ವಾರರ ನೆನಪನ್ನೂ ಹಿರಿಮೆಯನ್ನೂ ಎತ್ತಿ ಹಿಡಿ ಯುವುದೇ ಅಲ್ಲದೇ ಪ್ರಬಂಧ ಪಾರಾಯಣ ಮಾಡುವ ಭಕ್ತರನ್ನು ಉದ್ಧರಿಸುತ್ತವೆ. ಮೂಲದಲ್ಲಿ ಸಂಸ್ಕೃತದಲ್ಲಿದ್ದ ವೇದಗಳು ಸಾಮಾನ್ಯ ಜನರಿಗೆ ಎಟುಕದಷ್ಟು ಎತ್ತರದಲ್ಲಿದ್ದರಿಂದ ಶ್ರೀ ಸಾಮಾ ನ್ಯನ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿಯನ್ನು ಹೊಂದಿದ್ದ ಆಚಾರ್ಯರಾಮಾನುಜರು ಆಲಯಗಳಲ್ಲಿ ಸಾಧಾರಣರಿಗೂ

ಅರ್ಥವಾಗುವಂತಹ ತಮಿಳಿನ ಪಾಶುರಗಳ ಪಾರಾಯಣಕ್ಕೆ ಅವಕಾಶ ಮಾಡಿಕೊಟ್ಟು ಅತ್ಯಂತ ಹೆಚ್ಚಿನ ಸ್ತರದ ಜ್ಞಾನವು ಜಾತಿ, ಪಂಥ, ವರ್ಣ, ಲಿಂಗಭೇದಗಳು ಇಲ್ಲದಂತೆ ಎಲ್ಲರಿಗೂ ದೊರೆಯುವಂತಾಗಿಸುವುದರಲ್ಲಿ ಸಫಲರಾದರು.

ಸಂಕ್ಷಿಪ್ತವಾಗಿ ಹೇಳುವು ದಾದರೆ ರಾಮಾನುಜರ ಪ್ರಭಾವದಿಂದಾಗಿ ನಂತರದ ಕಾಲದಲ್ಲಿ ಆಲಯದ ಪದ್ಧತಿಯು ಕ್ರಮಬದ್ಧವಾಗಿ ವ್ಯವಸ್ಥೆ ಹೊಂದಿತು.

ಆಲಯಗಳಲ್ಲಿನ ದೇವರುಗಳ ಪೂಜೆಗೆ ಹೆಚ್ಚಿನ ಖಚಿತ ಪ್ರಾವಧಾನವಾಯಿತು. ಆಲಯಗಳಿಗೆ ಹೆಚ್ಚಿನ ದಾನಗಳನ್ನು ಸ್ವೀಕರಿಸುವ ಪದ್ಧತಿ ನೆಲೆಗೊಂಡಿತು.ರಾಮಾನುಜರ ಶಿಷ್ಯ ಪ್ರಶಿಷ್ಯರು ಅವರ ತತ್ತ್ವವನ್ನು ಪ್ರಸರಿಸುವ ವೈಷ್ಣವ ಕೇಂದ್ರಗಳಲ್ಲಿ ಆಚಾರ್ಯ ಪುರುಷರಾಗಿನಿಂತರು. ಇಂತಹವರಲ್ಲಿ ಆನಂದಾಂಪಿಳ್ಳೈ (ತಿ.ತಿ.224, 233) ಕಂದಾಡೈ (ತಿ.ತಿ. 3,ಡಿ.ಟಿ. 61) ತೋಳಪ್ಪರ್, ಪ್ರತಿವಾದಿ ಭಯಂಕರಂ (ಜಿ.ಟಿ.63) (ಜಿ.ಟಿ. 98) ಪರವಸ್ತು (ಜಿ.ಟಿ. 203)-ಮೊದಲಾದವರು ಮುಖ್ಯರು. ಕಡೆಯದಾಗಿ ಪ್ರತಿ ವೈಷ್ಣವ ದೇವಾಲಯದಲ್ಲಿಯೂ ಸೇವೆ ಮಾಡುವ ಏಕಾಂಗಿಗಳ ಪಡೆಯೇ ನಿರ್ಮಾಣವಾಯಿತು.

ಯಾಮುನಾಚಾರ್ಯರು ತಮ್ಮ 'ಆಗಮ ಪ್ರಾಮಾಣ್ಯ' ದಲ್ಲಿ ಪಾಂಚರಾತ್ರ ಆಗಮ ಪೂಜಾ ಪದ್ಧತಿಯನ್ನು ವೈಖಾನಸ ಆಗಮಕ್ಕಿಂತ ಶ್ರೇಷ್ಠತರವೆಂದು ಪ್ರತಿಪಾದಿಸಿದ್ದಂತೆಯೇ, ರಾಮಾನುಜಾಚಾರ್ಯರೂ ಪೂಜಾ ಪದ್ಧತಿಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ತ್ರಿವೇಂಡ್ರಂ ಹಾಗೂ ಜಗನ್ನಾಥಂಗಳಲ್ಲಿ ತೀವ್ರ ಪ್ರತಿರೋಧವನ್ನೆದುರಿಸಿದ್ದಿರಬೇಕು. ತಿರುಮಲೆಯಲ್ಲಿ ನಾವಿಂದು ನೋಡುವ ಪದ್ಧತಿ ವೈಖಾನಸ ಆಗಮ ಪದ್ಧತಿಯೆಂಬುದರಿಂದಾಗಿ ಮೇಲಿನೆರಡು ಸ್ಥಳಗಳಲ್ಲಿನ ಪರಿಸ್ಥಿತಿಯೇ ತಿರುಮಲೆಯಲ್ಲಿಯೂ ಎದುರಾಗಿರಬೇಕು.ತಿರುಪತಿಯಲ್ಲಿ ಭಗವದ್ರಾಮಾನುಜರೇ ಪ್ರತಿಷ್ಠಾಪನೆ ಮಾಡಿದ್ದೆಂದು ಹೇಳಲಾಗಿರುವ ಗೋವಿಂದರಾಜಸ್ವಾಮಿ ಆಲಯದಲ್ಲಿಯೂ ವೈಖಾನಸಆಗಮ ಪದ್ಧತಿಯೇ ನಡೆದಿದೆಯೆಂಬುದು ಅಚ್ಚರಿಯನ್ನುಂಟು ಮಾಡುತ್ತದೆ.

'ದಿ ಸೆಕೆಂಡ್ ವಿಜಯನಗರ ಡೈನಾಸ್ಟಿ' ಎಂಬ ತಮ್ಮ ಒಂದು ಲೇಖನದಲ್ಲಿ (ಆರ್ಕಿಯಾಲಾಜಿಕಲ್ ಸರ್ವೇಆಫ್ಇಂಡಿಯಾದ 1908-09 ರ ವರದಿ ) ದಿವಂಗತ ರಾವ್‌ಬಹ ದ್ದೂರ್ ಎಚ್.ಕೃಷ್ಣಶಾಸ್ತ್ರಿ ವಿಜಯನಗರದರಸುಗಳ ಹಾಗೂ ಅಧಿಕಾರಿಗಳ ಆಡಳಿತದ ಸುವರ್ಣಯುಗದ ಈ ಕಾಲದಲ್ಲಿ ಪ್ರಖ್ಯಾತರಾಗಿದ್ದ ಶ್ರೀವೈಷ್ಣವರ ಒಂದು ವಿಸ್ತೃತವಾದ ಪಟ್ಟಿಯನ್ನು ಮಾಡಿದ್ದು, ಅವರುಗಳ ಪ್ರಯತ್ನದಿಂದಾಗಿ ಹೇಗೆ ಶ್ರೀವೈಷ್ಣವ ಪಂಥ ವಿಸ್ತಾರವಾಗಿ ಹರಡಿದ್ದಿತು ಎಂಬುದನ್ನು ವಿವರಿಸಿದ್ದಾರೆ. ಅಂತಹವರಲ್ಲಿ ಈ ಆಲಯದ ಶಾಸನಗಳಲ್ಲಿ ಉಲ್ಲೇಖ ಹೊಂದಿರುವರ ಬಗ್ಗೆ ಇಲ್ಲಿ ಹೇಳಬಹುದಾಗಿದೆ. ಅಳಗಿಯ ಮಣವಾಳಜೀಯರ ಶಿಷ್ಯರಾದ ಕಂದಾಡೈ ರಾಮಾನುಜ ಅಯ್ಯಂಗಾರ್ (ತಿ.ತಿ.3 ) ಮುದಲಿಯಾರ್ ಅಳಗಪ್ಪಿರನಾರ್ - ತಿರುಕ್ಕಲಿ ಕನ್ರಿದಾಸರ್ (ತಿ.ತಿ.61, 89, 187) ಕೊಲ್ಲಿ ಕಾವಲಿದಾಸರ್ (ಜಿ.ಟಿ.53) ಮಾಡಭೂಷಿ ಅಯ್ಯಾಪಿಳ್ಳೈ ಎಂದು ಹೆಸರಾದ ಅನಂತಯ್ಯ, (ಜಿ.ಟಿ.56) ಪ್ರತಿವಾದಿ ಭಯಂಕರಮ್ ಅಳಗರಯ್ಯಂಗಾರ್ ಅಣ್ಣಂಗರಾಚಾರಿಯರ್ (ಜಿ.ಟಿ.146) ಕಂದಾಡೈ ಅಪ್ಪಚ್ಚಿಯಾರ್ ಅಣ್ಣ (ತಿ.ತಿ.336) ಅರಿಯರಾಯ ಮುದಲಿಯಾರ ರೂಢನಾಮದ ಪೆರಿಯ ಪೆರುಮಾಳ್‌ದಾಸರ್ (ಜಿ.ಟಿ. 136) ತಾಳ್ಳಪಾಕ ಅನ್ನಮಯ್ಯಂಗಾರ್ಯರ ಮಗ ತಾಳ್ಳಪಾಕ ತಿರುಮಲಯ್ಯಂಗಾರ್ (ತಿ.ತಿ.76) ತಿರುವೆಂಕಟ ಚಕ್ರವರ್ತಿ ಅಯ್ಯಂಗಾರ್ ಮಗಳ ಮೂಲಕ ಮೊಮ್ಮಗ ಶಿಟ್ರಯ್ಯಾಂಗಾರ್, (ತಿ.ತಿ. 183, ಜಿ.ಟಿ.65) ಶಠಗೋಪದಾಸರ್ ನರಸಿಂಹರಾಯ ಮೊದಲಿಯಾರ್ (ತಿ.ತಿ.200, ಡಿ.ಟಿ. 55, 144, 189) ಶೊಟ್ಟೈ ತಿರುಮಲನಂಬಿ ತಿರುವೆಂಕಟಯ್ಯಂಗಾರ್ಯರ ಮಕ್ಕಳು ಕುಮಾರ ತಾತಯ್ಯಂಗಾರ್ ಹಾಗೂ ತೋಳಪ್ಪಯ್ಯಂಗಾರ್ ಶಿಷ್ಯರು ಕುಮಾರ ಕುಲಶೇಖರ ಮೇದಿನಿರಾವ್ ಹಾಗೂ ತಿಮ್ಮ ನಾಯಕರು, (ತಿ.ತಿ. 307) ಕಾಕತೀಯ ಸಾಮ್ರಾಜ್ಯ ಸ್ಥಾಪಕ, ಪಾಂಡ್ಯರಾಜ ಶಿಕ್ಷಕ ಎಂದು ಬಿರುದುಗಳನ್ನು ಪಡೆದ ಗಾಯಿಗೋಪಾಲ ರೂಢನಾಮದ ರಾಜ ಸಾಮಂತಸಿಂಹ ನರಸಿಂಹ (ತಿ.ತಿ.347).

ತಿರುಚಾನೂರಿನ ಸಭೆಯ ಸದಸ್ಸರಾಗಿದ್ದ ಇತರ ಶ್ರೀವೈಷ್ಣವ ಪ್ರಮುಖರೆಂದರೆ ರಾಮಾನುಜದಾಸರ ಮಗ ಅನಂತಶಯ ನಾರ್, (ತಿ.ತಿ.45) 14 ನೇ ಶತಮಾನದಲ್ಲಿ ತಿರುವನಂತಾಳ್ವಾರ್, ಪೆರಿಯಪೆರುಮಾಳ್ ಎಂದು ಹೆಸರಾದ ವಡಮಾಮಲೈ ಆಳಗರಪ್ಪಿಳ್ಳೈ (ಜಿ.ಟಿ. 17) 15ನೇ ಶತಮಾನದ ಮೊದಲ ಹಾಗದಲ್ಲಿ ಅರವಣೈ ಪೆರುಮಾಳದಾಸರ್ ಎಂದು ಹೆಸರಾದ ವೆನ್ರಿ ಅನಂತಪ್ಪಯ್ಯಂಗಾರ್ (ತಿ.ತಿ. 282) ವರದರಾಜರ್ ಎಂದು ಹೆಸರಾದ ತೊಪ್ಪಿಲ್ ವೆನ್ರಿ ಅಣ್ಣನ್ (ಈತ ಸಭಾನಾಯಕನಾಗಿದ್ದ) (ತಿ.ತಿ.282) ಆಂಡ ಪ್ಪೆರುಮಾಳ ಚೊಕ್ಕಣ್ಣನ್ ಎಂದು ಹೆಸರಾದ ಅಣಿಯರಂಗದಾಸರ್, (ಜಿ.ಟಿ. 27) ರಾಮಾನುಜ ದಾಸರ್ ಸೇನೈ ಮೊದಲಿಯಾರ್,ಮಲೈನಿನ್ರಪೆರುಮಾಳ್, ಗೋವಿಂದರುಗಳು. (ಜಿ.ಟಿ. 196) ರಾಮಾನುಜರ ಹೃದಯಕ್ಕೆ ಹತ್ತಿರವಾದ ಶ್ರೀವೈಷ್ಣವತೆಯ ಅಭಿವೃದ್ಧಿಗೆ ಈ ಮಂದಿ ಸಭಾ ಸದಸ್ಯರಾಗಿದ್ದದ್ದು ಹೆಚ್ಚು ನೆರವಾಗಿದ್ದಿರಬೇಕು.



# 108 ವೈಷ್ಣವ ದಿವ್ಯ ಕ್ಷೇತ್ರಗಳು

# ನಿಚುಳಾಪುರಿ

– ತೆಲುಗು ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್

ಅನುವಾದ : ಸೂರ್ಯವಂಶಿ

ಶ್ರೀಯಃಪತಿಯಾದ ಶ್ರೀಮನ್ನಾರಾಯಣನು ಅರ್ಚಾ ಮೂರ್ತಿಯಾಗಿ ಈ ಭೂಲೋಕದಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಅದರಲ್ಲೂ ವಿಶೇಷವಾಗಿ ಪನ್ನಿದ್ದರುಆಳ್ವಾರರಿಂದ ಕೀರ್ತಿಸಲ್ಪಡುತ್ತಿರುವ ದಿವ್ಯದೇಶಗಳು ಅಗ್ರಸ್ಥಾನವನ್ನು ಅಲಂಕರಿಸುತ್ತಿವೆ. ಆ ದಿವ್ಯದೇಶಗಳ ವೈಭವದ ಬಗೆಗೆ ಪ್ರತಿ ತಿಂಗಳು ತಿಳಿದುಕೊಳ್ಳುತ್ತಿದ್ದೇವೆ. 40 ಚೋಳದೇಶದಲ್ಲಿನ ದಿವ್ಯದೇಶಗಳಲ್ಲಿ ಎರಡನೆಯ ದಿವ್ಯದೇಶ 'ನಿಚುಳಾಪುರಿ' ಎಂಬ ಊರು.

ಈ ದಿವ್ಯದೇಶಕ್ಕೆ ಅತ್ಯದ್ಭುತವಾದ ಚರಿತ್ರೆ ಇದೆ. ಚೋಳ ರಾಜರು ಉರೈಯೂರ್ ಅನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು. ಚೋಳರಾಜರಲ್ಲಿ ನಂದ ಚೋಳನೆಂಬ ರಾಜನು ಪ್ರತೀದಿನ ತನ್ನ ಧರ್ಮಪತ್ನಿಯೊಂದಿಗೆ ಶ್ರೀರಂಗಕ್ಷೇತ್ರಾಧಿಪತಿಯಾದ ಶ್ರೀರಂಗನಾಥನನ್ನು ಸೇವಿಸಿದ ನಂತರವೇ ತನ್ನ ರಾಜ್ಯದ ಕಾರ್ಯಾಚರಣೆಯನ್ನು ಆರಂಭಿಸುತ್ತಿದ್ದ ಎಷ್ಟು ಸಂಪನ್ನನಾದರೂ, ಎಷ್ಟು ದಿನಗಳು ಕಳೆದರೂ ಎಷ್ಟು ವೈಭವವಿದ್ದರೂ ಆತನಿಗೆ ಸಂತಾನವಿಲ್ಲದ ಕಾರಣ ಆ ಕೊರತೆ ರಾಜದಂಪತಿಗಳನ್ನು ಬಹಳ ನೋವಿಗೀಡು ಮಾಡಿತ್ತು.

ಒಂದು ದಿನ ರಾಣಿಯು, ರಾಜನನ್ನು ಕುರಿತು ಓ ಸ್ವಾಮಿ! ನಾವು ಶ್ರೀರಂಗನಾಥನನ್ನು ಪ್ರತೀದಿನವೂ ಆರಾಧಿಸುತ್ತಿದ್ದೇವೆ. ಆ ಸ್ವಾಮಿಗೆ ನಮ್ಮ ನೋವು ತಿಳಿಯದೆ! ನೀವು ಭಗವಂತನಲ್ಲಿ ಪ್ರಾರ್ಥಿಸಬಹುದಲ್ಲವೇ! ಈ ನೋವನ್ನು ನಾನು ಸಹಿಸಲಾರದಾಗಿದ್ದೇನೆ. ಆದ್ದರಿಂದ ನೀವು ನಿಮ್ಮ ಇಷ್ಟದೈವವಾದ ಶ್ರೀರಂಗನಾಥನ ಸನ್ನಿಧಿಯಲ್ಲಿ ಆ ದೇವದೇವನಲ್ಲಿ ನಮ್ಮ ನೋವನ್ನು ಅರುಹಿ, ಈ ಲೋಪವನ್ನು ಸರಿ ಮಾಡಬೇಕೆಂದು ಕೇಳಿಕೊಳ್ಳಿ ಎಂದು ಕೋರಿದಳು. ಆದರೆ ನಂದಚೋಳನು.ರಾಣೀ ಇವೆಲ್ಲವೂ ಭಗವಂತನ ಇಚ್ಛೆ! ದೇವದೇವನನ್ನು ಸೇವಿಸುವುದೇ ನಮ್ಮ ಕರ್ತವ್ಯ! ಭಗವಂತನ ಅನುಗ್ರಹದಿಂದ ನಮಗೆ ಉಂಟಾಗಿರುವ ಈ ದುಃಖವು ತೊಲಗಿಹೋಗಬಹುದು. ಆದ್ದರಿಂದ ಕೆಲವು ದಿನಗಳ ಕಾಲ ನಿರೀಕ್ಷೆ ಮಾಡೋಣ ಎಂದು ರಾಣಿಯನ್ನು ಸಮಾಧಾನ ಪಡಿಸಿದ.

ಇವರ ದುಃಖವನ್ನು ಗಮನಿಸಿದ ಶ್ರೀರಂಗನಾಥನು ಈ ರಾಜ ದಂಪತಿಗಳನ್ನು ಅನುಗ್ರಹಿಸಬೇಕೆಂದು ಸಂಕಲ್ಪಿಸಿದ. ತನ್ನ ಪಟ್ಟಮಹಿಷಿಯಾದ ಮಹಾಲಕ್ಷ್ಮೀದೇವಿಯನ್ನು ನಂದ ಚೋಳನ ಪುತ್ರಿಯಾಗಿ ಭೂಲೋಕದಲ್ಲಿ ಅವತರಿಸಿ ಅವನ ಸಂತಾನ ಕೋರಿಕೆಯನ್ನು ತೀರಿಸಿ ಅವರನ್ನು ಅನುಗ್ರಹಿಸು ಎಂದು ಹೇಳಿದ.

ಶ್ರೀರಂಗನಾಥನ ಆದೇಶವನ್ನು ಶಿರಸಾವಹಿಸಿದ ಆ ಜಗನ್ಮಾತೆಯು, ಲೀಲಾಮಾನುಷವಿಗ್ರಹನಾದ ಸ್ವಾಮಿ, ಒಂದು ದಿನ ಚೋಳರಾಜನನ್ನು ಭೇಟಿಯಾಡುವುದಕ್ಕೆ ಅರಣ್ಯಕ್ಕೆ ಬರುವಂತೆ ಮಾಡಿದ. ಎಷ್ಟು ಹೊತ್ತು ನೋಡಿದರೂ ಒಂದು ಪ್ರಾಣಿಯೂ ಕಾಣದಿದ್ದರಿಂದ, ತನ್ನ ಬಿಲ್ಲುಬಾಣಗಳಿಗೆ ಕೆಲಸವಿಲ್ಲದಂತಾಯಿತು ಎಂದೂ ಈ ಸಮಯವನ್ನು ವ್ಯರ್ಥ ಮಾಡಿದೆನಲ್ಲಾ ಎಂದು



ಕೊಂಡು, ಅದೇ ಶ್ರೀರಂಗನಾಥನ ಸನ್ನಿಧಿಯಲ್ಲಿದ್ದರೆ ನನ್ನ ಜನ್ಮ ಸಾರ್ಥಕವಾಗುತ್ತಿತ್ತು ಎಂದು ನೊಂದುಕೊಳ್ಳುತ್ತಿರುವ ಸಮಯದಲ್ಲಿ ಅವನಿಗೆ ಒಂದು ಪುಟ್ಟ ಮಗುವಿನ ಅಳುವಿನ ಶಬ್ದ ಕೇಳಿಸಿತು. ಅವನು ಆ ಆಳುವಿನ ಶಬ್ದ ಕೇಳುತ್ತಿರುವ ದಿಕ್ಕಿಗೆ ಹೋದ ಅಲ್ಲಿ ಒಂದು ಸುಂದರವಾದ ಕೊಳದಲ್ಲಿ ಒಂದು ತಾವರೆಯ ಹೂವಿನ ಮಧ್ಯದಲ್ಲಿ ಒಂದು ಮಗುವು ತನ್ನ ಪುಟ್ಟ ಪುಟ್ಟ ಕೈಕಾಲುಗಳನ್ನು ಆಡಿಸುತ್ತಾ ಮಲಗಿತ್ತು, ಕೂಡಲೇ ನಂದಚೋಳನು ಆ ತಾವರೆಯ ಕೊಳದಲ್ಲಿ ಇಳಿದು, ಆ ಮಗುವನ್ನು ಎತ್ತಿಕೊಂಡು ಬಂದ. ಆ ಪುಟ್ಟ ಮುದ್ದಾದ ಮಗುವಿನ ಸ್ಪರ್ಶದಿಂದ ಪುಳಕಿತನಾದ ರಾಜನು ಆನಂದದಿಂದ ಆ ಮಗುವನ್ನು ಎತ್ತಿಕೊಂಡು ಆನಂದಿಸುತ್ತಾ, ಆಹಾ! ಆ ಭಗವಂತನ ಅನುಗ್ರಹವೆಂದರೆ ಇದೇ ತಾನೇ! ಎಂದುಕೊಂಡು ಆ ಮಗುವನ್ನು ತನ್ನ ರಾಜ್ಯಕ್ಕೆ ಎತ್ತಿಕೊಂಡು ಬಂದು.

ಮಹಾರಾಣಿಗೆ ತೋರಿಸಿದಾಗ ಆಕೆ ಸಂತೋಷದ ಕಡಲಿನಲ್ಲಿ ತೇಲಾಡಿದಳು. ತಾಯಿಯ ಮಮತೆಯಿಂದ ಆ ಮಗುವನ್ನು ಆ ಲಿಂಗನ ಮಾಡಿಕೊಂಡಳು. ಆನಂದದಿಂದ ಕುಣಿದಾಡಿದಳು. ತನ್ನ ಕೊರತೆಯನ್ನು ಆ ದೇವದೇವನೆ ತೀರಿಸಿದನೆಂದು ಸಂತೋಷಿಸಿದಳು. ಈ ರಾಜದಂಪತಿಗಳು ತಮ್ಮ ನೋವನ್ನು ಮರೆತುಹೋದರು. ರಾಜ ತನ್ನ ರಾಜ್ಯಭಾರದ ಕೆಲಸಗಳಲ್ಲಿ ಮಗ್ನನಾದ. ಕಮಲದ ಕೊಳದಲ್ಲಿ ದೊರೆತ ಕಾರಣ ಆ ಮಗುವಿಗೆ 'ಕಮಲವಲ್ಲಿ' ಎಂದು ನಾಮಕರಣ ಮಾಡಿದರು.

ಹುಣ್ಣಿಮೆಯ ಚಂದ್ರನಂತೆ ದಿನೇ ದಿನೇ ಬೆಳೆಯುತ್ತಿದ್ದ ಕಮಲವಲ್ಲಿ ಯುಕ್ತವಯಸ್ಸಿಗೆ ಬಂದಳು. ತನ್ನ ಅವತಾರದ ಉದ್ದೇಶವನ್ನು ಎಲ್ಲರಿಗೂ ತಿಳಿಯಪಡಿಸಬೇಕೆಂದು ಯೋಚಿ ಸಿದ ಮಹಾಲಕ್ಷ್ಮೀದೇವಿ ತನ್ನಲ್ಲಿನ ಭಾವನೆಯನ್ನು ತಂದೆ ತಾಯಿಯ ಬಳಿ ತಿಳಿಸುತ್ತಾ,

ನಾನು ಶ್ರೀರಂಗನಾಥನನ್ನೇ ಮದುವೆಯಾಗುತ್ತೇನೆ. ಮಾನವ ಮಾತ್ರರನ್ನು ವಿವಾಹ ಮಾಡಿಕೊಳ್ಳಲಾರೆ ಎಂದು ಹೇಳಿದಳು. ಆಕೆಯ ಮಾತನ್ನು ಕೇಳಿದ ರಾಜದಂಪತಿಗಳು ಆಶ್ಚರ್ಯವನ್ನು ಹೊಂದಿದರು.

ಇದೇನು ವಿಚಿತ್ರ? ದೇವದೇವನಾದ ಶ್ರೀರಂಗನಾಥನನ್ನು ವಿವಾಹವಾಗುವುದೇ? ಇದು ಹೇಗೆ ಸಾಧ್ಯ? ಇದು ಸಂಭವವೇ? ಎಂದು ಯೋಚಿಸತೊಡಗಿದರು. ತಮ್ಮ ಮಗಳಿಗೆ ಇಂತಹಾ ಭಾವನೆ ಬಂದಿದ್ದಕ್ಕೆ ಬಹಳ ನೊಂದುಕೊಂಡರು. ಒಮ್ಮೆ ಕಮಲವಲ್ಲಿಯು, ಕಮಲವನದಲ್ಲಿ ತನ್ನ ಸಖಿಯರೊಂದಿಗೆ ವಿಹರಿಸುತ್ತಿರುವಾಗ ಶ್ರೀರಂಗನಾಥನು ಆಶ್ವಾರೂಢನಾಗಿ ಆ ಕಮಲವಲ್ಲಿಯ ಕಣ್ಣಿಗೆ ಕಾಣಿಸಿ ಆಕೆಯನ್ನು ಆಕರ್ಷಿಸಿದ ವಿಷಯವನ್ನು ನಾವು ಇಲ್ಲಿ ಸ್ಮರಿಸಬೇಕು.

ರಾಜದಂಪತಿಗಳು ಈ ರೀತಿ ಯೋಚನೆಗೆ ಒಳಗಾದಾಗ, ಆ ದಿನ ರಾತ್ರಿ ನಂದಚೋಳನ ಕನಸಿನಲ್ಲಿ ಶ್ರೀರಂಗನಾಥನು ಕಾಣಿಸಿಕೊಂಡು, ನಿಮ್ಮ ದಂಪತಿಗಳ ಸಂತೋಷಕ್ಕಾಗಿ ಮಹಾಲಕ್ಷ್ಮಿಯನ್ನು ನಿಮ್ಮ ಪುತ್ರಿಯಾಗಿ ಅವತರಿಸಬೇಕೆಂದು ಹೇಳಲಾಗಿತ್ತು. ಆದ್ದರಿಂದ ಇವೆಲ್ಲವೂ ನನ್ನ ಸಂಕಲ್ಪವೇ ಆದ್ದರಿಂದ ನೀವು ನಿರ್ಭಯವಾಗಿ, ಯಾವುದೇ ಅನುಮಾನವಿಲ್ಲದೇ ಸಂತೋಷವಾಗಿ ಕಮಲವಲ್ಲಿಯನ್ನು ನನಗೆ ಕೊಟ್ಟು ವಿವಾಹ ಮಾಡಬೇಕೆಂದು ಆದೇಷಿಸಿದ. ನಂದಚೋಳನು ಸ್ವಾಮಿಯ ಆಜ್ಞೆಯಂತೆ ಕಮಲವಲ್ಲಿಯನ್ನು ಕನ್ಯಾದಾನ ಮಾಡುವುದಕ್ಕೆ ನಿರ್ಧರಿಸಿದ. ಕಮಲವಲ್ಲಿಯನ್ನು ಸರ್ವಾಲಂಕಾರಭೂಷಿತಳಾಗಿ ಉರೈಯೂರ್ ಗ್ರಾಮದ ಪ್ರಜೆಗಳೊಂದಿಗೆ ತನ್ನ ಸಮಸ್ತ ಪರಿವಾರಗಳೊಂದಿಗೆ ಶ್ರೀರಂಗಕ್ಕೆ ಹೊರಟ. ಶ್ರೀರಂಗನಾಥನ ಸನ್ನಿಧಿಯಲ್ಲಿ ಕಮಲವಲ್ಲಿ ಕಮಲಹಸ್ತಭೂಷಿತಳಾಗಿ ಗರ್ಭಗುಡಿಗೆ

ಹೋಗಿ, ಒಂದು ದೀಪವಾಗಿ ಶ್ರೀರಂಗನಾಥನ ಹೃದಯದಲ್ಲಿ ಐಕ್ಯವಾದಳು.

ಇನ್ನು ಕಮಲವಲ್ಲಿ ಶ್ರೀರಂಗನಾಥನ ವಿವಾಹ ಅತ್ಯಂತ ವೈಭವದಿಂದ ನಡೆಯಿತು.ನಂತರ ನಂದಚೋಳನು ತನ್ನ ರಾಜಧಾನಿಯಾದ ಉರೈಯೂರಿಗೆ ಬಂದು ತನ್ನ ಪತ್ನಿಯಾದ ಕಮಲವಲ್ಲಿಯನ್ನು ತನ್ನ ಅಳಿಯನಾದ ಶ್ರೀರಂಗನಾಥನಿಗೆ ಅಳಗಿಯ ಮಣವಾಳನ್' ಎಂಬ ಹೆಸರಿನೊಂದಿಗೆ ಪ್ರತ್ಯೇಕವಾದ ಆಲಯವನ್ನು ಕಟ್ಟಿಸಿ ಪ್ರತಿ ನಿತ್ಯವೂ ಆರಾಧನೆ ನಡೆಯುವಂತೆ ನಿಯಮವನ್ನು ಮಾಡಿದ.ಸಂತತಿ ಇಲ್ಲದ ತನ್ನ ಸರ್ವಸ್ವವನ್ನು ಶ್ರೀರಂಗನಾಥನಿಗೆ ಸಮರ್ಪಿಸಿದ.

## ಮತ್ತೆ ಕೆಲವು ವಿಶೇಷತೆಗಳು

೧. ಶ್ರೀರಂಗನಾಥನ ಪಾದಪದ್ಮಗಳಲ್ಲಿ ತನ್ನ ಸರ್ವಸ್ವವನ್ನು ಸಮರ್ಪಿಸಿದ ಪನ್ನಿದ್ದರು ಆಳ್ವಾರರಲ್ಲಿ ಒಬ್ಬರಾದ ತಿರುಪ್ಪಾಣಾಳ್ವಾರರ ಅವತಾರದ ಸ್ಥಳ ಈ ಉರೈಯೂರು.

೨. ನಂದಚೋಳಪುತ್ರಿಯಾಗಿ ಲಕ್ಷ್ಮೀದೇವಿ ಅವತರಿಸಿ, ವಾಸಲಕ್ಷ್ಮೀ ಎಂಬ ಹೆಸರಿನಿಂದ ಶ್ರೀರಂಗನಾಥನನ್ನು ವಿವಾಹ ಮಾಡಿಕೊಂಡ ಸಂದರ್ಭದಲ್ಲಿ ಮೀನಮಾಸದಲ್ಲಿ ಶ್ರೀರಂಗನಾಥನಿಗೆ ನಡೆಯುವ ಬ್ರಹ್ಮೋತ್ಸವದಲ್ಲಿ ಮೂರನೆಯ ದಿನ ಶ್ರೀರಂಗನಾಥನು ಉರೈಯೂರಿಗೆ ಬಂದು ಕಮಲವಲ್ಲಿ ನಾಚ್ಚಿಯಾರ್‌ನೊಂದಿಗೆ ಏಕಾಸನಾಸೀನನಾಗಿ ಭಕ್ತಲೋಕವನ್ನು ಅನುಗ್ರಹಿಸುತ್ತಿದ್ದಾನೆ.

೩. ಈ ಕ್ಷೇತ್ರವು ತಿರುಚ್ಚಿಯಿಂದ ಹೆಚ್ಚೂ ಕಡಿಮೆ ಎರಡು ಕಿ.ಮೀ. ದೂರದಲ್ಲಿದೆ.

೪. ತಿರುಮಂಗೈ ಆಳ್ವಾರರು ಮಾತ್ರಾ ಈ ದಿವ್ಯ ದೇಶವನ್ನು ಕೀರ್ತಿಸುತ್ತಿದ್ದರು. ಪೆರಿಯತಿರುಮೊಳಿ ಎಂಬ ಪ್ರಬಂಧದಲ್ಲಿ ೬-೨-೫-ನೆಯ ಪಾಶುರದಲ್ಲಿ"ಕೋಳಿಯಂ ಕೂಡಲುಂ ಕೋಯಿಲ್‌ಕೊಂಡ "ಎಂಬ ಪಾಶುರದಲ್ಲಿ ಈ ಕ್ಷೇತ್ರವನ್ನು 'ಕೋಳಿ" ಎಂದು ಕೀರ್ತಿಸಿದರು. ಇದಕ್ಕೂ ಒಂದು ಇತಿಹಾಸ ವಿದೆ.

## ಮೂಲವಿಗ್ರಹ

ಅಳಗಿಯಮಣವಾಳನ್ ಉತ್ತರಮುಖವಾಗಿದ್ದು ನಿಂತಿರುವ ಭಂಗಿ ಚತುರ್ಭಜಗಳೊಂದಿಗೆ ರಾರಾಜಿಸುತ್ತಿದ್ದಾನೆ - ಸುದರ್ಶನ ಚಕ್ರ ಪ್ರಯೋಗ ಚಕ್ರವಾಗಿ ರಾರಾಜಿಸುತ್ತಿರುವುದು ಬಹಳ ವಿಶೇಷವಾಗಿದೆ. ಉತ್ಸವ ವಿಗ್ರಹ ಇಲ್ಲಿಲ್ಲ. ಆದ್ದರಿಂದ ಸಾಕ್ಷಾತ್ತು ಶ್ರೀರಂಗನಾಥನು ನಂಬೆರುಮಾಳ್ಳೇ ಇಲ್ಲಿನ ಉತ್ಸವ ವಿಗ್ರಹವಾಗಿದೆ.

## ಅಮ್ಮನವರು

ವಾಸಲಕ್ಷ್ಮೀ, ಉರೈಯೂರ್‌ನಲ್ಲಿ ನಾಚ್ಚಿಯಾರ್ ಕಲ್ಯಾಣ ಪುಷ್ಕರಿಣಿ, ಕಲ್ಯಾಣವಿಮಾನ, ಕುಡಮುರುಟ್ಟಿ ನದಿ. ಮೂವತ್ತು ಮೂರು ಕೋಟಿ ದೇವತೆಗಳಿಗೆ ಧರ್ಮವರ್ಶಾ ದರಿಗೆ ಪ್ರತ್ಯಕ್ಷದೈವ ಆಶ್ಲೇಷ ನಕ್ಷತ್ರದಲ್ಲಿ ಜನ್ಮಿಸಿದ ಕನ್ಯೆಯರ ಅಪವಾದಗಳನ್ನು ತೊಲಗಿಸಿ ಅವರಿಗೆ ಕಲ್ಯಾಣವನ್ನು ಮಾಡಿಸು ವುದು ಈ ಗುಡಿಯ ಪ್ರತ್ಯೇಕತೆ. ವಿವಾಹವಾಗದ ಕನ್ಯೆಯರು ಈ ಕ್ಷೇತ್ರಕ್ಕೆ ಬಂದು ಅಮ್ಮನವರಿಗೆ ಹರಕೆ ಹೊತ್ತರೆ ಕೂಡಲೇ ವಿವಾಹವಾಗುವುದೆಂದು ಅನುಭವಿಗಳ ಮಾತು.

## ಪ್ರಯಾಣ ಮಾರ್ಗ

ತಿರುಚ್ಚಿಯಿಂದ ಶ್ರೀರಂಗದಿಂದ-ಎಷ್ಟೋ ಟೌನ್ ಬಸ್ಸುಗಳು, ಷೇರ್ ಆಟೋಗಳು ಇವೆ. ಬೆಳಿಗ್ಗೆ ೬-೩೦ ರಿಂದ ಮಧ್ಯಾಹ್ನ ೧೨.೦೦ ಗಂಟೆಯವರೆಗೂ, ನಂತರ ಸಾಯಂಕಾಲ ೫.೦೦ ರಿಂದ ೮.೦೦ ಗಂಟೆಯವರೆಗೂ ದೇವಾಲಯವು ತೆರೆದೇ ಇರುತ್ತದೆ.

ಮಹಾತ್ಮರು ರಚಿಸಿರುವ ಧ್ಯಾನಶ್ಲೋಕಗಳನ್ನು ನಾವು ಪಠಿಸೋಣ.

ನಿತ್ಯಂ ಶ್ರೀನಿಚುಲಾಪುರೀಶಮನಿಶಂ
ಕಲ್ಯಾಣತೀರ್ಥಾಂತಿಕೇ
ಪ್ರೋದ್ಯತ್ ಸೂರ್ಯವರಪ್ರದಾನ ಸುಮುಖಂ ಕಲ್ಯಾಣ
ವೈಮಾನಿಕಂ ।
ವಂಧೇ ಭಕ್ತಜನೈಕ ರಕ್ಷಣಭರಂ ತಂರಮ್ಯಜಾಮಾತರಂ
ವಂದೇ ವಾಂಛಿತ ದಾನಕಲ್ಪಲತಿಕಾಂ ದೇವೀಂ
ನಿವಾಸಶ್ರೀಯಮ್ ।ಶುಭೇ ಕಲ್ಯಾಣಾಖ್ಯಾಪ್ರಥಿತ ವರ
ತೀರ್ಥೇಷು ನಿಚುಳಾ
ಪುರೇ ಪಾರೇ ರಮ್ಯೇ ಶುಭಕುಡಮುರುಟ್ಟಾಖ್ಯ ಸರಿತಃ
ವಿಮಾನೇ ಕಲ್ಯಾಣೇ ಧನಪತಿ ದಿಶಾವಕ್ತ್ರ ರುಚಿರಃ
ಸ್ಥಿತೋ ಭಾತಿ ಶ್ರೀಮಾನ್ ವರವ ರಸಮಾಖ್ಯೋ
ಮಧುರಿಪುಂ॥
ತ್ರಯಸ್ತ್ರಿಂಶದ್ ಕೋಟಿ ರವಿ ಧರ್ಮಾದಿ ಗೋಚರಃ
ಕಲಿಧ್ವಂಸಿ ಮುನಿಸ್ತುತ್ಯೋ ವಾಸಲಕ್ಷ್ಮೀ ಸಮನ್ವಿತಃ॥



# ಕೂರ್ಮ ಅವತಾರ

ಹಿಂದೂ ಧರ್ಮದ ಚಾಂದ್ರಮಾನ ಪಂಚಾಂಗದ ಎರಡನೇಯ ಮಾಸವೇ ವೈಶಾಖಮಾಸ. ಇದನ್ನು ವೈಶಾಖ ಎಂದೂ ಕರೆಯುತ್ತಾರೆ. ಏಕೆಂದರೆ ಶ್ರೀಹರಿಗೆ ಪ್ರಿಯಮಾಸ ಇದಾಗಿದೆ. ಇದನ್ನು ಮಾಧವಮಾಸವೆಂತಲೂ ಕರೆಯುತ್ತಾರೆ. ಈ ಮಾಸದಲ್ಲಿ ಬೇಸಿಗೆಯ ಬಿಸಿಲು ಅತ್ಯಧಿಕವಾಗಿರುತ್ತದೆ. ಈ ಮಾಸವು ಜಯಂತಿಗಳ ಆಚರಣೆಯ ಮಾಸವೂ ಆಗಿದೆ. ಕೂರ್ಮಜಯಂತಿ ಈ ಮಾಸದಲ್ಲಿ ಆಚರಿಸುವ ರೀತಿಯಲ್ಲಿ ವಿಶಿಷ್ಟಾದ್ವೈತ ಮತ ಸ್ಥಾಪಕರಾದ ರಾಮಾನುಜಾಚಾರ್ಯರ ಜಯಂತಿ, ಅದ್ವೈತ ಮತ ಪ್ರತಿಪಾದಕರಾದ ಶಂಕರಾಚಾರ್ಯರ ಜಯಂತಿ, ಯೋಗತಂತ್ರ ಮಾರ್ಗದಲ್ಲಿ ಭಕ್ತರನ್ನು ಕಾಪಾಡುವ ನರಸಿಂಹ ಜಯಂತಿ, ಈ ಮಾಸದಲ್ಲೇ ಆಚರಿಸಲಾಗುವುದು. ಅದಲ್ಲದೇ ಶುದ್ಧ ಸಪ್ತಮಿ ಗಂಗಾವತಾರದ ದಿನ ಗಂಗಾನದಿಯ ಸ್ನಾನ ವಿಶೇಷ ಫಲ ನೀಡುವುದು. ದಶಮಿಯಂದು ವಾಯುಪುತ್ರನ ಜಯಂತಿ, ಬರುವುದರಿಂದ ವೈಶಾಖ ಮಾಸವನ್ನು ಜಯಂತಿಗಳ ಮಾಸವೆಂದು ಕರೆಯುತ್ತಾರೆ.

ಈ ಮಾಸವು ಪ್ರದಾನವಾಗಿ ಬಿಸಿಲಿನ ತಾಪವನ್ನುಂಟು ಮಾಡುವ ಮಾಸವಾಗಿದೆ. ಪ್ರಾತಃ ಸ್ನಾನ ದೇವರಿಗೆ ಗಂಧಲೇಪನ ಶೀತಲ ಜಲದಾನ ಮಾಡುವುದರಿಂದ ಮಧುಸೂದನ ಪ್ರೀತನಾಗುವನು. ಎಲ್ಲ ಮಾಸಗಳಲ್ಲಿ ಶ್ರೇಷ್ಟ ಮಾಸ ಇದಾಗಿದೆ. ಧರ್ಮಕಾರ್ಯ ಮಾಡಲು, ವಿಷ್ಣುವಿನ ಪ್ರೀತಿ ಸಂಪಾದಿಸಲು ಲೋಕದಲ್ಲಿ ಈ ಮಾಸಕ್ಕೆ ಸದೃಶವಾದ ಬೇರೊಂದು ಮಾಸವಿಲ್ಲ.



ವೈಶಾಖದ ಪುಣ್ಯ ಸ್ನಾನದ ಮಹತ್ವ ಈ ಮಾಸದಲ್ಲಿ ಶ್ರೇಷ್ಟ ನದಿಗಳ ಸ್ನಾನಕ್ಕಿಂತ ಜಲದಾನ, ಜಲಸಂಗ್ರಹಣೆಗೆ ಮಹತ್ವವಿದೆ. ಮನೆಗೆ ಬಂದ ಅತಿಥಿಗಳಿಗೆ ನೀರು, ಪಾನಕ,ಮಜ್ಜಿಗೆ ಅಂತಹ ಪದಾರ್ಥಕೊಟ್ಟು ಉಪಚರಿಸುವುದು ಶ್ರೇಷ್ಟವಾಗಿದೆ.

ಈ ಮಾಸದಲ್ಲಿ ಆಚರಿಸುವ ಕೂರ್ಮಜಯಂತಿ ಜಲಾಚರ ರೂಪವಾದ ಆಮೆ ರೂಪದಲ್ಲಿ ಅವತರಿಸಿದ ಶ್ರೀಹರಿ ಅವತಾರವಾಗಿದ್ದು ಅದಕ್ಕೆ ಪುರಾಣದ ಹಿನ್ನೆಲೆ ಇರುವುದು ತಿಳಿಯುತ್ತದೆ.

**ಪೌರಾಣಿಕ ಹಿನ್ನೆಲೆ:**

ದೇವದಾನವರು ಅಮೃತಕ್ಕಾಗಿ ಸಮುದ್ರಮಂಥನ ಸಂದರ್ಭದಲ್ಲಿ ವಾಸುಕಿಯನ್ನು ಹಗ್ಗಮಾಡಿ ಮಂದರಪರ್ವತ ಕಡಗೋಲಾಗಿಸಿ ದೈತ್ಯ ಚಕ್ರವರ್ತಿ ಬಲಿಯ ನೇತೃತ್ವದಲ್ಲಿ ದಾನವರೂ ಇಂದ್ರನ ನೇತೃತ್ವದಲ್ಲಿ ದೇವತೆಗಳೂ ಸಮುದ್ರ ಕಡೆಯುತ್ತಾರೆ. ಆದರೆ ಮಂದರ ಪರ್ವತವು ಬಹಳ ಭಾರವಿದ್ದುದರಿಂದ ಸಮುದ್ರದಲ್ಲಿ ಕುಸಿಯಲು ಪ್ರಾರಂಭಿಸುತ್ತದೆ. ಆಗ ಶ್ರೀಮಾನ್ ವಿಷ್ಣುವು ಆಮೆಯ ರೂಪದಲ್ಲಿ ಅವತರಿಸಿ ಮಂದಾರ ಪರ್ವತ ತನ್ನ ಬೆನ್ನ ಮೇಲೆ ಇಟ್ಟುಕೊಂಡು ಅದು ಕುಸಿಯದಂತೆ ನೋಡಿಕೊಳ್ಳುತ್ತಾನೆ. ಈ ರೀತಿಯಲ್ಲಿ ಪರಮಾತ್ಮನು ಮೊದಲು ನರಸಿಂಹ ಅವತಾರ ತಾಳಿದಂತೆ, ಕೂರ್ಮಾವತಾರ ತಾಳಿ ದೇವತೆಗಳಿಗೆ ರಾಕ್ಷಸರಿಗೆ ಸಹಾಯ ಮಾಡುತ್ತಾನೆ. ಆ ಕೂರ್ಮಾವತಾರದ ಪ್ರಯುಕ್ತವೇ ಕೂರ್ಮಾವತಾರಿಯಾದ ವಿಷ್ಣುವನ್ನು ಪೂಜಿಸಿ ಧ್ಯಾನಿಸುವುದೇ ಕೂರ್ಮ ಜಯಂತಿಯಾಗಿ ಆಚರಿಸಲ್ಪಡುತ್ತದೆ. ಕೂರ್ಮಾವತಾರ ಆವಿರ್ಭವಿಸಿದ ಮಹಾವಿಷ್ಣು ತನ್ನದೇ ಆದ ಅವತಾರದಲ್ಲಿ ಉದ್ಘೋಷಿಸಿದ ಮಹಾಮಂತ್ರಗಳೇ 'ಕೂರ್ಮಾ ಪುರಾಣ' ಇದನ್ನು ಪ್ರಪ್ರಥಮವಾಗಿ ಕೂರ್ಮಾವತಾರಿ ಮಹಾ ವಿಷ್ಣುವು ನಾರದರಿಗೆ ಬೋಧಿಸಿದನು. ನಂತರ ನಾರದರು ಇದನ್ನು ನೈಮಿಷಾರಣ್ಯ ವಾಸಿಗಳಿಗೆ ಬೋಧಿಸಿದರು. ಇದರಲ್ಲಿ ಮುಖ್ಯವಾಗಿ "ಧರ್ಮೋಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂಬ ಮಹಾವಾಕ್ಯ ಹೇಳಲಾಗಿದೆ.

ಭಗವಂತನ ಕೂರ್ಮಾವತಾರದ ದೇವಾಲಯಗಳು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಕೂರ್ಮಾಯಿ ಮತ್ತು ಕೂರ್ಮಂ ನಲ್ಲಿವೆ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹೊಸ ಕೋಟೆ ತಾಲೂಕಿನ ಗವಿರಂಗಾಪುರದಲ್ಲಿದೆ.



ಶ್ರೀಕೂರ್ಮಂ ದೇವಾಲಯ-ಆಂಧ್ರಪ್ರದೇಶ ರಾಜ್ಯದ ಶ್ರೀಕಾಕುಲಂ ಜಿಲ್ಲೆಯ ಗಾರ ಮಂಡಲದಲ್ಲಿರುವ ಶ್ರೀಕೂರ್ಮಂ ಎಂಬ ಗ್ರಾಮದಲ್ಲಿ ಶ್ರೀವಿಷ್ಣುವಿನ ಕೂರ್ಮಾವತಾರದ ಬಲು ಪ್ರಸಿದ್ಧ ಹಾಗೂ ಸಾಕಷ್ಟು ಪುರಾತನವಾದ ಅದ್ಭುತ ದೇವಾಲಯವಿದೆ. ಇಲ್ಲಿ ದೊರೆತಿರುವ ಶಾಸನಗಳ ಪ್ರಕಾರ ಇದರ ಕಾಲ ೧೨ ನೇಯ ಶತಮಾನ. ಶ್ರೀರಾಮಾನುಜಾಚಾರ್ಯರು ಪೂರಿಯ ಜಗನಾಥದಿಂದ ಪ್ರಭಾವಿತರಾಗಿ ಇಲ್ಲಿ ಕಾರ್ಯಕ್ಷೇತ್ರವನ್ನು ಮತ್ತೆ ಪ್ರವರ್ಧಮಾನಕ್ಕೆ ಕರೆತಂದರು. ನಂತರ ಈ ಕ್ಷೇತ್ರವು ವಿಜಯನಗರ ಅರಸರ ಸುಪರ್ದಿಗೆ ಸೇರಿತು. ಈ ದೇವಾಲಯದಲ್ಲಿ ಕೂರ್ಮನಾಥನನ್ನಾಗಿ ಪೂಜಿಸಲಾಗುತ್ತದೆ.ಈ ಸಾಲಿಗ್ರಾಮ ಮೂಲಸ್ಥಾನವೆಂದು ಪರಿಗಣಿಸಲಾಗಿದೆ. ಕೂರ್ಮದೇವಾಲಯ ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಪಲಮನೇರು ಮಂಡಲದಲ್ಲಿರುವ ಕೂರ್ಮಾಯಿ ಗ್ರಾಮವೂ ಸಹ ಕೂರ್ಮನಾಥನ ದೇವಾಲಯವಿರುವ ಧಾರ್ಮಿಕ ದೇವಸ್ಥಾನವಾಗಿದೆ. ಇಲ್ಲಿರುವ ವಿಷ್ಣುವನ್ನು ಕೂರ್ಮವರದರಾಜ ಸ್ವಾಮಿಯೆಂದು ಪೂಜಿಸಲಾಗುತ್ತದೆ.

ಗವಿರಂಗನಾಥಸ್ವಾಮಿ ದೇವಸ್ಥಾನ ಕರ್ನಾಟಕದ ಚಿತ್ರದುರ್ಗಜಿಲ್ಲೆಯ ಹೊಸದುರ್ಗ ತಾಲೂಕಿನ ಬಳಿ ಇರುವ ಗವಿರಂಗಾಪುರ ಒಂದು ಗ್ರಾಮ. ಗವಿಯಲ್ಲಿ ನೆಲೆಸಿರುವ ರಂಗನಾಥಸ್ವಾಮಿ ಕೂರ್ಮಾವತಾರದಲ್ಲಿರುವುದು ವಿಶೇಷ. ಹಾಗಾಗಿ ಇದೊಂದು ಪ್ರಸಿದ್ಧ ಕೂರ್ಮಾವತಾರಿ ವಿಷ್ಣುವಿನ ದೇವಸ್ಥಾನವಾಗಿದೆ.

ಈ ವರ್ಷ ಮೇ ೧೫ ರಂದು ವೈಶಾಖಮಾಸದ ಚತುರ್ದಶಿಯಂದು ವಿಷ್ಣುವಿನ ಅವತಾರವಾದ ಕೂರ್ಮಜಯಂತಿ ಆಚರಿಸಿ ಭಗವಂತನ ಕೃಪೆಗೆ ಪಾತ್ರರಾಗೋಣ.

– ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ
97393 88300



## ತಿರುಪತಿಯಲ್ಲಿ ದರ್ಶನೀಯ ಆಲಯಗಳು :

### ಶ್ರೀಗೋವಿಂದರಾಜಸ್ವಾಮಿ ಆಲಯ:

ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಠಿಸಿದರೆಂದು ಪ್ರತೀತಿ. ಗೋವಿಂದರಾಜಸ್ವಾಮಿ ಆದಿಶೇಷನಮೇಲೆ ಶಯನ ಭಂಗಿಯಲ್ಲಿ ದರ್ಶನ ಕೊಡುತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾ ಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

### ಶ್ರೀಕೋದಂಡರಾಮಸ್ವಾಮಿ ಆಲಯ:

ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರದಲ್ಲಿರುವ ಈ ಆಲಯದಲ್ಲಿ ಕೋದಂಡರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದ ನೆನಪಿಗಾಗಿ ಈ ಆಲಯ ನಿರ್ಮಿಸಲಾಗಿದೆ.

### ಶ್ರೀಕಪಿಲೇಶ್ವರಸ್ವಾಮಿ ಆಲಯ:

ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧ ಶೈವ ಕ್ಷೇತ್ರವಿದೆ. ಕಪಿಲಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ

### ಅಲಮೇಲುಮಂಗಾಪುರ (ತಿರುಚಾನೂರು):

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲುಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳಪುರಾಣ.

# ಅಕ್ಷಯ ತೃತೀಯ ವಿಶೇಷ ಲೇಖನ



ಯುಗಾದಿ ಬೇವು ಬೆಲ್ಲದ ಸವಿ ಆರುವ ಮುನ್ನ ಭುವಿಯು ಬೆಂದು ಬಾಯ್ದೆರೆದು ಮಳೆಗಾಗಿ ಕಾತರಿಸುವ ಸಮಯ.  ಹಸುರುಡುಗೆಗಾಗಿ ಇಳೆ ಎದುರು ನೋಡುವ ಸಮಯ. ಅದೇ ಸಮಯದಲ್ಲಿ ಮನೆಯಲ್ಲಿ ಅಮ್ಮನ ಗೋಣಗು, ಈ ಸಲದ ತದಿಗೆಗೆ ಒಂದು ಮೂಗು ಬೊಟ್ಟು ಆದರೂ ಕೊಳ್ಳಲಾಗುವುದೋ ಇಲ್ಲವೋ?

ಆಭರಣಗಳ ಭಂಡಾರವೇ  ಮನೆಯಲ್ಲಿದ್ದರೂ ಅಂದುಕೊಳ್ಳುವುದೊಂದು ರೂಢಿ. ಸಾಸಿವೆ ಡಬ್ಬದ ಉಳಿತಾಯದ ಹಣ ಅಪ್ಪನ ಕಣ್ತಪ್ಪಿಸಿ ಎತ್ತಿಟ್ಟ ಕಾಂಚಾಣ. ನಗುನಗುತ್ತಲೇ ಹಳದಿ ಲೋಹಕ್ಕಾಗಿ ಪುಡಿಗಾಸನ್ನು ಬರಿದು  ಮಾಡುವ ದಿನ. ಅದು ಅಕ್ಷಯ ತದಿಗೆ, ಎಂದೂ ಕರಗದ ತನ್ನ ಇಡುಗಂಟನ್ನು ಆಭರಣದಂಗಡಿಗೆ ದಾಂಗುಡಿ ಇಟ್ಟು  ಇಡಿ ಇಡಿಯಾಗಿ ಕರಗಿಸುವ ದಿನ ಸಂಪತ್ತಿನ ಸಂಚಯವೆಂದರೆ ಕೇವಲ ಕೂಡಿಸುವುದಿಲ್ಲ. ಕಾಪಾಡುವುದಲ್ಲ.ಬದುಕಿನ  ಸಂಭ್ರಮವನ್ನು ಅಭಿವ್ಯಕ್ತಗೊಳಿಸಲು,ಮುಂದಿನ ದಿನಗಳಿಗೆ ಒಳ್ಳೆಯ ನೆಲವನ್ನು ಒದಗಿಸಲು ಅಪತ್‌ಕಾಲಕ್ಕೆ ಒದಗಿ ಬರಲು ಸಂಪತ್ತನ್ನು ಕೂಡಿಸುವುದು ಜಾಣತನ. ಅಕ್ಷಯ ತೃತೀಯ-ಅಕ್ಷಯ ಭಾಗ್ಯ. ಅನನ್ಯ ಶುಭ, ಅಗಣಿತ ಪುಣ್ಯ ಆಗಮ್ಯ ಶ್ರೇಯಸ್ಸು ಸಿದ್ದಿಸಲು ವಿಶೇಷ ಸಂದರ್ಭ. ಅಕ್ಷಯ ತೃತೀಯ-ಅಕ್ಷಯ  ಭಾಗ್ಯ ಅನನ್ಯ ಶುಭ, ಅಗಣಿತ ಪುಣ್ಯ. ಆಗಮ್ಯ ಶ್ರೇಯಸ್ಸು ಸಿದ್ಧಿಸಲು ವಿಶೇಷ ಸಂದರ್ಭ. ಅಕ್ಷಯ ತೃತೀಯ ದಂದು ಬಂಗಾರವನ್ನು ಖರೀದಿಸುವುದು ಪ್ರಶಸ್ತ ಎಂದು ನಿರೂಪಿಸುವ ದೃಷ್ಟಾಂತಗಳು ಭಾರತೀಯ  ಪುರಾಣಗಳಲ್ಲಿ ಹೇರಳವಾಗಿದೆ.

- ಶ್ರೀಮತಿ. ಕೆ.ವಿ. ಲತಾ

## ಬಂಗಾರದೊಂದಿಗೆ ಬೆಳೆದ  ಭಾರತೀಯರು

ಭಾರತ ದೇಶ ಸ್ವರ್ಣಭೂಮಿ.ಒಡಲಾಳದಲ್ಲಿ ಇತರ ಅಮೂಲ್ಯ ಲೋಹಗಳಿರುವ ಹಾಗೆಯೇ ಪ್ರಪಂಚದೆಲ್ಲೆಡೆ ಆರ್ಥಿಕ ಮಾನದಂಡವಾಗಿರುವ ಚಿನ್ನವೂ ಇದೆ. ಭಾರತೀಯರ ಬದುಕು ಬಂಗಾರದೊಂದಿಗೇ ಬೆಳೆದಿದೆ ಎಂದರೆ ಅತಿಶಯವಲ್ಲ ಭೂಮಿಯನ್ನು ವಸುಂಧರ ಎಂದೇ ಕರೆದಿದ್ದಾರೆ ಭಾರತೀಯರು. ಭಾರತೀಯರಿಗೆ ಭೂಮಿ ಸ್ತ್ರೀರೂಪಿ, ದೇವಿ-ಸಮಾನ, ದೇವಿಯನ್ನು ನಿರಾಭರಣ ಸುಂದರಿಯಾಗಿ ಕಲ್ಪಿಸಿಕೊಳ್ಳಲಾದೀತೆ? ಕಿವಿಗೆ ಓಲೆ, ಮೂಗಿಗೆ ಮೂಗುತಿ,  ಕೊರಳಿಗೆ ಸರ, ಹಾರ, ತೋಳಿಗೆ ತೋಳ ಬಂದಿ, ಸೊಂಟಕ್ಕೆ ಸೊಂಟಪಟ್ಟಿ ಒಡ್ಡಾಣ... ಕಾಲಿಗೆ ಕಾಲ್ಚೈನು, ವಿವಾಹಿತರಿಗೆ ಕರಿಮಣಿಸರ, ಕಾಲುಂಗುರ,ಹೀಗೆ ಅಡಿಯಿಂದ ಮುಡಿಯವರೆಗೆ ಚಿನ್ನವೇ ಚಿನ್ನ;ಬಂಗಾರದೊಡವೆಗಳದೇ ಸಾಮ್ರಾಜ್ಯ. ಸ್ತ್ರೀಯರ ಸೌಂದರ್ಯ ಇಮ್ಮಡಿಸುವುದೇ  ಚಿನ್ನಾಭರಣಗಳಲ್ಲಿ ಎಂಬುದು ಭಾರತೀಯರ ಮನಸ್ಸು ಹೇಳುವ ವಿಚಾರ.

ಮನೆ ನಿರ್ಮಾಣದ ಪ್ರಾರಂಭದಲ್ಲಿ ಭೂಮಿಯನ್ನು ಪೂಜಿಸಿ, ಭೂಗರ್ಭಕ್ಕೆ ಮನೆಯ  ಪಂಚಾಂಗದಡಿಯಲ್ಲಿ ಚಿನ್ನ ನವರತ್ನಗಳನ್ನು ನಿಕ್ಷೇಪಿಸುತ್ತಾರೆ. ಭಾರತೀಯರು, ಮರಿಮಗನ ಜನನವಾದಾಗ ಬಂಗಾರದ ಹಣತೆ



ಯಲ್ಲಿ ಚಿನ್ನದ ಸರಿಗೆ ಒತ್ತಿ ಇಟ್ಟು ದೀಪ ಬೆಳಗಿಸಿ ಮಗುವಿನ ಮುಖವನ್ನು ನೋಡುವ ಪದ್ಧತಿ ಇದೆ. ಅಜ್ಜ ಅಜ್ಜಿಗೆ ಕನಕಾಭಿಷೇಕ ಮಾಡಿಸುತ್ತಾರೆ. ಅಜ್ಜ ಅಜ್ಜಿಯರು ಮರಣ ಶಯ್ಯೆಯಲ್ಲಿ ಕೊನೆಯುಸಿರು ಎಳೆಯುವ ಮುನ್ನ ಬಾಯಿಗೆ ಹಾಕಲು ಸಾಲಿಗ್ರಾಮದ ನೀರು, ಗಂಗಾಜಲ ಮತ್ತು ಚಿನ್ನವನ್ನು ಸಿದ್ಧ ಮಾಡಿಕೊಳ್ಳುತ್ತಾರೆ. ಹಿಂದಲ್ಲೆ ರಾಜರಿಗೆಲ್ಲ ಸುವರ್ಣ ಜಲದ ಅಭಿಷೇಕ ಮಾಡುವಂತೆ ಇವತ್ತು ಪೀಠಾರೋಹಣ ಗೈಯ್ಯುವ ಮಠಗಳ ಯತಿಗಳಿಗೆ ಸುವರ್ಣ ಅಭಿಷೇಕ ಮಾಡುವ ಪರಂಪರೆ ಮುಂದುವರಿದುಕೊಂಡು ಬಂದಿದೆ. ಹಿಂದೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಉಂಗುರದ ಬೆರಳಿ ನಲ್ಲಿ ದರ್ಭೆಯಿಂದ ಮಾಡಿದ ಪವಿತ್ರವನ್ನು ಧರಿಸುತ್ತಾರೆ. ಈ ಪವಿತ್ರವನ್ನು ದನದ ಬಾಲದ ರೋಮ, ಮಸೆ ಹುಲ್ಲು, ಚಿನ್ನದ ಸರಿಗೆಯಿಂದ ಮಾಡುತ್ತಾರೆ. ಇವುಗಳ ಪೈಕಿ ಚಿನ್ನದ ಸರಿಗೆಯಿಂದ ಮಾಡಿದ ಪವಿತ್ರವೇ ಅತ್ಯಂತ ಶ್ರೇಷ್ಠ "ಸುವರ್ಣಸ್ಯ ಪವಿತ್ರಸ್ಯ ಕಲಾಂನಾರ್ಹಂತಿ ಷೋಡ ಶೀಮ್" ಎಂಬಂತೆ ಚಿನ್ನದ ಸರಿಗೆಯ ಪವಿತ್ರಕ್ಕೆ ಇತರ ಪವಿತ್ರಗಳಿಗಿಂತ ಹದಿನಾರು ಪಾವಿತ್ರ್ಯ ಇದೆ ಎಂದು ಹೇಳುತ್ತಾರೆ. ದರ್ಭೆಯ ಪವಿತ್ರವನ್ನು ಪಾದ ತೊಳೆಯುವಾಗ, ಗಂಧ ನೀಡುವಾಗ, ಭೋಜನ ಮಾಡುವಾಗ,ಹಾಗೆ ಅನೇಕ ಸಂದರ್ಭಗಳಲ್ಲಿ ಬಳಸ ಲಾಗದು. ಆದರೆ ಚಿನ್ನದ ಪವಿತ್ರ ಧಾರಣೆಗೆ ಈ ನಿಷೇಧವಿಲ್ಲ.

ಭಾರತೀಯ ಸನಾತನ ಧರ್ಮ ಪರಂಪರೆಯಲ್ಲಿ ವ್ಯಕ್ತಿಯ ಮೃಣ್ಮಯ ಬದುಕನ್ನು ಚಿನ್ಮಯಗೊಳಿಸುವ ಆಶಯವಿದೆ. ನಿತ್ಯ ನೈಮಿತ್ತಿಕ ಕರ್ಮಗಳೊಂದಿಗೆ ದೋಷಗಳನ್ನು ದೂರ ಮಾಡಿ, ಗುಣಗಳನ್ನು ತುಂಬಲು ಷೋಡಶ ಸಂಸ್ಕಾರಗಳನ್ನು ಈ ಕಾರಣಕ್ಕಾಗಿ ನಡೆಸ ಲಾಗುತ್ತದೆ. ಜನನದಿಂದ ತೊಡಗಿ ಮರಣದ ತನಕ ದೇಹ, ಮನಸ್ಸು, ಬುದ್ದಿ ಚಿತ್ತ, ಅಹಂಕಾರಗಳನ್ನು ಶುದ್ಧಿಗೊಳಿಸಿ ಆತ್ಮನನ್ನು ತಿಳಿದುಕೊಳ್ಳಲು ಈ ಸಂಸ್ಕಾರಗಳು ಅಗತ್ಯ ಎಂದು ಹೇಳಲಾಗಿದೆ. ಈ ಎಲ್ಲ ಸಂಸ್ಕಾರಗಳ ಸಂದರ್ಭದಲ್ಲಿ ಚಿನ್ನವನ್ನು ಒಂದಿಲ್ಲೊಂದು ರೂಪದಲ್ಲಿ ಬಳಕೆ ಮಾಡುತ್ತಾರೆ.

ಮಗು ಜನಿಸಿದ ದಿನ ಅಥವಾ ಹನ್ನೊಂದನೆಯ ದಿನ ಜಾತಕ ಕರ್ಮ ಮಾಡುವ ಕ್ರಮ ಇದೆ. ಗರ್ಭದ ನೀರು ಕುಡಿತ ತಾಪ ನಿವೃತ್ತಿಗೆ,ಭಗವಂತನ ಕೃಪೆಗೆ ಜಾತಕಕರ್ಮ ಮಾಡು ತ್ತಾರೆ. ಜೇನು ಮತ್ತು ತುಪ್ಪ ಇವುಗಳನ್ನು ಸಮವಾಗಿ ಬೆರೆಸಿ ಚಿನ್ನದಿಂದ ತೇದು ಪಥ್ಯಾಯ (ಹಿತಕ್ಕಾಗಿ) ಬಲಾಯ (ಬಲ ಕ್ಕಾಗಿ),ಅಮೃತಾಯ (ಅಮೃತತ್ವಕ್ಕಾಗಿ) ಎಂದು ಮಂತ್ರ ಪೂರ್ವಕವಾಗಿ ಮಗುವಿಗೆ ಮೂರು ಬಾರಿ ನೆಕ್ಕಿಸುತ್ತಾರೆ. ತೇಯಲು ಬಳಸಿದ ಚಿನ್ನವನ್ನು ತೊಳೆದು ಮಗುವಿನ ಬಲಕಿವಿಗೆ ಮುಟ್ಟಿಸುತ್ತಾರೆ. ಈ ಕ್ರಿಯೆಯಿಂದ ಮಗುವಿನ ಆಯುಷ್ಯ, ಮೇಧಾಶಕ್ತಿ ವೃದ್ಧಿಸುವುದೆಂದು ಹೇಳಲಾಗಿದೆ.

ಅನ್ನಪ್ರಾಶನ ಸಂಸ್ಕಾರದಲ್ಲೂ ಚಿನ್ನದ ಬಳಕೆ ಇದೆ. ಚಿನ್ನದ ಪಾತ್ರೆಯಲ್ಲಿ ಅನ್ನವನ್ನು ತೆಗೆದುಕೊಂಡು ಅದಕ್ಕೆ ಮೊಸರು, ಜೇನು,ತುಪ್ಪ, ಹಾಲು ಹಾಕಿ ಕಲಸಿ ಮಗುವಿಗೆ ಉಣ್ಣಿಸುತ್ತಾರೆ. ಇದರಿಂದ ಮಗುವಿನ ದೇಹ ಶುದ್ಧಿಯಾಗಿ ಬ್ರಹ್ಮವರ್ಚಸ್ಸು ಇಂದ್ರೀಯಗಳ ಶಕ್ತಿ, ಆಯುಷ್ಯ ವರ್ಧಿಸು ವುದು, ಕರ್ಣವೇದ (ಕಿವಿ ಚುಚ್ಚುವುದು) ಸಂಸ್ಕಾರದಲ್ಲಿ ಮಕ್ಕಳ ಕಿವಿಗಳನ್ನು ಚುಚ್ಚಿ ಚಿನ್ನದ ಸರಿಗೆ ಅಥವಾ ಆಭರಣ ತೊಡಿಸು ತ್ತಾರೆ. ಈ ಕ್ರಿಯೆಯಿಂದ ಮಗುವಿನ ಮೇಧಾಶಕ್ತಿ ಹೆಚ್ಚುವುದು ಎಂದು ಸಂಶೋಧನೆಗಳಿಂದ ತಿಳಿದು ಬರುತ್ತದೆ. ವಿವಾಹ ಸಂಸ್ಕಾರದಲ್ಲಂತೂ ಚಿನ್ನಕ್ಕೆ ಬಾರೀ ಪ್ರಾಶಸ್ತ್ಯ.ವಿವಾಹ ಸಂಸ್ಕಾರ ಪೂರ್ವದಲ್ಲಿ ಮಾಡುವ ಸಮಾವರ್ತನದಲ್ಲಿ ವರನ ಕಿವಿಗಳಿಗೆ ಚಕ್ರಾಕಾರದ ಆಭರಣ, ಕೊರಳಿಗೆ ಸುವರ್ಣ ಮಣಿಗಳ ಸರ ತೊಡಿಸಿ ಆಯುಷ್ಯ, ವರ್ಚಸ್ಸು ಸಂಪತ್ತಿನ ವೃದ್ಧಿಗಾಗಿ ವೇದೋಕ್ತ ಪ್ರಾರ್ಥನೆ ಸಲ್ಲಿಸಿದ ಬಳಿಕವೇ ಕಾಶೀಯಾತ್ರೆಯ ಪ್ರಕ್ರಿಯೆ ನಡೆಯುವುದು. ಚಿನ್ನದ ಆಭರಣಗಳನ್ನು ತೊಡುವುದರಿಂದ ಮುಪ್ಪು ಹಾಗೂ ಭೂತ ಪ್ರೇತಾದಿಗಳ ಬಾಧೆ ನಿವಾರಣೆ ಆಗು ತ್ತದೆ ಎಂದು ಹೇಳುತ್ತಾರೆ. ಮರಣದಲ್ಲೂ ಅಷ್ಟೇ. ಊರ್ಧ್ವ ದೈಹಿಕ ಸಂಸ್ಕಾರಗಳಲ್ಲಿ 12 ನೇ ದಿನ ಕೊಡುವ ದಶ ದಾನಗಳಲ್ಲಿ ಗೋವು, ಭೂಮಿ, ಎಳ್ಳು ಚಿನ್ನ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ, ಬೆಳ್ಳಿ ಹಾಗೂ ಲವಣಗಳು ಸೇರಿರುತ್ತವೆ.ಇವುಗಳಲ್ಲಿ ಚಿನ್ನವು

ಸರ್ವ ಪಾಪಗಳನ್ನು ಪರಿಹರಿಸಿ ಶುಭ ಫಲವನ್ನು ನೀಡುತ್ತದೆ ಎಂದು ಹೇಳು ತ್ತಾರೆ.

### ಎಲ್ಲೆಲ್ಲೂ ಬಂಗಾರವೇ.. ಎಲ್ಲೆಲ್ಲೂ ಸೌಂದರ್ಯವೇ...!

ಅಕ್ಷಯ ತೃತೀಯಾ ಸಮೀಪಿಸುತ್ತಿದ್ದಂತೆ ಚಿನ್ನಾಭರಣ ಗಳನ್ನು ಮಾಡಿಸಿಟ್ಟು ಆ ದಿನವೇ ಅಧಿಕಾರಗಳನ್ನು ಪಡೆದುಕೊಳ್ಳವವರಿದ್ದಾರೆ. ಚಿನ್ನಕ್ಕೆ ಚಿನ್ನವೇ ಸಾಟಿ. ಚಿನ್ನಾಭರಣಗಳಿಗೆ ಮನಸೋಲದವರು ಯಾರು? ವಜ್ರದ ವೈಭವಕ್ಕೆ ತಲೆದೂಗದವರು ಯಾರು? ಮುತ್ತುರತ್ನಗಳ ಅದ್ಭುತ ವಿನ್ಯಾಸಗಳಿಗೆ ಮಾರು ಹೋಗದವರು ಯಾರು? ಪ್ಲಾಟಿನಂ ಆಭರಣಗಳ ಘನತೆಗೆ ಮನ್ನಣೆ ನೀಡಿದವರು ಯಾರು? ಚಿನ್ನವೆಂಬ ಹಳದಿ ಲೋಹ ಮನುಕುಲಕ್ಕೆ ದೊರೆತ ದಿನದಿಂದಲೇ ಅದು ಮಾನವನ ಅಚ್ಚುಮೆಚ್ಚಿನ ವಸ್ತುವಾಗಿ ಬಿಟ್ಟಿತು. ಅದಕ್ಕೆ ಬಗೆ ಬಗೆಯ ರೂಪ ನೀಡಿ, ಅದು ಆಭರಣವಾಗಿ ಚಿನ್ನ ಮಹಿಳೆಯರ ಉಸಿರು ಎಂಬಷ್ಟೇ ಅನಿವಾರ್ಯವಾಯಿತು. ಅಪ್ಪಟ ಗುಣಗಳುಳ್ಳವರಿಗೆ ಚಿನ್ನದ ಹೋಲಿಕೆಯನ್ನು ನೀಡುವ ಪರಂಪರೆಯೂ ಆರಂಭವಾಯಿತು ಉದಾ: ಚಿನ್ನದಂತಹ ವ್ಯಕ್ತಿತ್ವ, ಚಿನ್ನದಂತಹ ಮನಸ್ಸು ಇತ್ಯಾದಿ. ರಾಜ ಮಹಾರಾಜರುಗಳ ಕಾಲದಲ್ಲಿ ಚಿನ್ನದ ನಾಣ್ಯಗಳೇ ಚಲಾವಣೆಯಲ್ಲಿದ್ದವು. ಈಗ ದೇವಸ್ಥಾನಗಳಿಗೆ ಚಿನ್ನದ ಆಭರಣ, ಕಿರೀಟ ಇತ್ಯಾದಿಗಳ ಜೊತೆಗೆ ಚಿನ್ನದ ರಥವನ್ನು ಕೂಡ ನಿರ್ಮಿಸಲಾಗುತ್ತಿದೆ. ಇದು ನಿಜ ಅರ್ಥದ ಸುವರ್ಣಯುಗ. ಅಕ್ಷಯ ತೃತೀಯ ಬಂತೆಂದರೆ ಸಾಕು ಬಂಗಾರದ ಅಂಗಡಿಗಳಲ್ಲಿ ಗಡಿಬಿಡಿ ಆರಂಭವಾಗುತ್ತದೆ. ತಿಂಗಳಿಗೂ ಮೊದಲೇ ಬುಕಿಂಗ್, ವಿಶೇಷ ರಿಯಾಯಿತಿ ದರದ ಮಾರಾಟ, ತರಾವರಿ ವಿನ್ಯಾಸಗಳ ಪರಿಚಯ, ಒಟ್ಟಿನಲ್ಲಿ ಗ್ರಾಹಕರನ್ನು ಸೆಳೆಯಲು ಇನ್ನಿಲ್ಲದ ಹರಸಾಹಸ, ಚಿನ್ನಕ್ಕೆ ಅಷ್ಟೊಂದು ಮಹತ್ವ.

### ಯಾವುದು ಮರುಳು?

ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ ಅಕ್ಷಯ ತೃತೀಯ ದಂತಹ ಹಬ್ಬಗಳ ಹೆಸರಿನಲ್ಲಿ ಜನರನ್ನು ಮರಳು ಮಾಡಲು ಅಂಗಡಿಯ ಮಾಲೀಕರು ಕಾಯುತ್ತಾರೆ. ಉಚಿತ ಕೊಡುಗೆ, ರಿಯಾಯಿತಿ ಬೆಲೆಯಲ್ಲಿ ಆಭರಣಗಳ ಮಾರಾಟ ಬಲು ಜೋರು. ಸಂಪ್ರದಾಯದ ಹೆಸರಿನಲ್ಲಿ ಹಬ್ಬಗಳು ವಾಣಿಜ್ಯೀಕರಣ ಆಗುತ್ತಿದೆಯೇ ಅಥವಾ ಈ ಒಂದು ಪುಣ್ಯದಿನ ಚಿನ್ನ ಪಡೆದರೆ ಅದು ವೃದ್ಧಿಯಾಗುತ್ತದೇ ಎಂಬುದು ಅವರವರ ತರ್ಕಕ್ಕೆ ಬಿಟ್ಟ ವಿಚಾರ. ಸಾಂಪ್ರದಾಯಿಕ ಹಿಂದೂ ಕ್ಯಾಲೆಂಡರ್‌ನಲ್ಲಿ ಅಮಾವಾಸ್ಯೆ ಕಳೆದು ಬರುವ ವೈಶಾಖ ಮಾಸದ ಮೂರನೇ ದಿನ ಅಕ್ಷಯ ತೃತೀಯ. ಧಾರ್ಮಿಕ ನಂಬಿಕೆಯುಳ್ಳವರಿಗೆ, ಉತ್ತರೋತ್ತರ ಯಶಸ್ಸು ಅಭಿವೃದ್ಧಿಗೆ ನಾಂದಿ ಹಾಡುವ ದಿನ. ಸಾಮಾಜಿಕ ನಿರ್ಬಂಧ, ಧಾರ್ಮಿಕ ಬೇಧವಿಲ್ಲದೇ ಎಲ್ಲ ವರ್ಗದವರೂ ಈ ದಿನಕ್ಕೆ ವಿಶೇಷ ಪ್ರಧಾನ್ಯ ಕೊಡುತ್ತಾರೆ. ಬಂಗಾರವೇ ಬೇಕೆಂದೇನಿಲ್ಲ, ಬೆಳ್ಳಿಯನ್ನು ಪ್ಲಾಟಿನಂ ಹಾಗೂ ಚಿನ್ನಕ್ಕೆ ಪೂರಕವಾಗಿ ಬಳಸಬಹುದು. ಬೆಳ್ಳಿಲೋಹ, ಬಂಗಾರ ಪ್ಲಾಟಿನಂಗಳನ್ನು ಬೆಲೆ ಬಾಳುವಂತದ್ದೂ ಅಲ್ಲ. ಆದರೆ ಬೆಳ್ಳಿ ಕೂಡ ಆಕರ್ಷಕ ಲೋಹ. ಆದರಿಂದ ತಯಾರಿಸಿದ ನಾನಾ ವಿನ್ಯಾಸದ ಒಡವೆಗಳು ನಿಮ್ಮ ವ್ಯಕ್ತಿತ್ವಕ್ಕೆ ಒಂದಿಷ್ಟು ಮೆರುಗು ನೀಡುತ್ತವೆ.

**ಹೃಷೀಕೇಶ್, ನಾರಾಯಣವನಂ ಶ್ರೀಕಲ್ಯಾಣ ವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು**
**2022 ಮೇ 12 ರಿಂದ 21 ರ ವರೆಗೆ**

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 12-05-2022 | ಗುರುವಾರ | - - | ಅಂಕುರಾರ್ಪಣೆ |
| 13-05-2022 | ಶುಕ್ರವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 14-05-2022 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 15-05-2022 | ಭಾನುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 16-05-2022 | ಸೋಮವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 17-05-2022 | ಮಂಗಳವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 18-05-2022 | ಬುಧವಾರ | ಹನುಮದ್ವಾಹನ | ಗಜವಾಹನ |
| 19-05-2022 | ಗುರುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 20-05-2022 | ಶುಕ್ರವಾರ | ರಥೋತ್ಸವ | ಅಶ್ವವಾಹನ |
| 21-05-2022 | ಶನಿವಾರ | ಚಕ್ರಸ್ನಾನ | ಧ್ವಜಾವರೋಹಣ |

# त्रयोदशः पाठः

## ಹದಿನಾಲ್ಕನೆಯ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

शाकम् = ತರಕಾರಿ
प्रथमम्= ಮೊದಲು
अनन्तरम् = ನಂತರ
तटाकः = ಕೊಳ
तटाके = ಕೊಳದಲ್ಲಿ
अनेकधा = ಬಹುವಿಧವಾಗಿ

प्रार्थना:
- करोतु = ಮಾಡು, ಮಾಡಿಸು
- कुरु = ಮಾಡು
- करवाणि = ಮಾಡುವೆನು, ಮಾಡಿಸು.

### ಪ್ರಶ್ನೆ

1. तटाकः अत्रास्ति किम्?
2. तटाके प्रथमं स्नानं कुरु।
3. पाकं अहं करवाणि।
4. अग्रजः शाकानि करोतु!
5. यूयं स्नानं अकुरुत खलु!
6. वयं भोजनमपि अकुर्म।
7. ते इदानीं तटाके स्नानं कुर्वन्ति।
8. बत! ते तटाके न सन्ति।
9. बालकास्तटाके दौष्ट्यं कुर्वन्ति।
10. तथावा, अत्र किञ्चित् एहि।

### ಉತ್ತರ

1. ಇಲ್ಲಿ ಕೊಳ ಇದೆಯಾ?
2. ಕೊಳದಲ್ಲಿ ಮೊದಲು ಸ್ನಾನ ಮಾಡು.
3. ನಾನು ಅಡುಗೆ ಮಾಡುವೆನು.
4. ಅಣ್ಣನು ತರಕಾರಿ ಪಲ್ಯ ಮಾಡಲಿ.
5. ನೀವು ಸ್ನಾನ ಮಾಡಿದ್ದೀರಾ ಅಲ್ವಾ
6. ನಾವು ಊಟ ಕೂಡ ಮಾಡಿದೆವು.
7. ಅವರು ಇವಾಗ ಕೊಳದಲ್ಲಿ ಸ್ನಾನ ಮಾಡುತ್ತಿದ್ದಾರೆ.
8. ಅಹೋ! ಅವರು ಕೊಳದಲ್ಲಿ ಇಲ್ಲ.
9. ಹುಡುಗುರು ಕೊಳದಲ್ಲಿ ಗಲಾಟೆ ಮಾಡುತ್ತಿದ್ದಾರೆ
10. ಹೌದಾ, ಸ್ವಲ್ಪ ಇಲ್ಲಿಗೆ ಬನ್ನಿರಿ.

### ಪ್ರಶ್ನೆ

1. ನೀನು ಗಲಾಟೆ ಮಾಡಬೇಡ
2. ನಾನು ಗಲಾಟೆ ಮಾಡುತ್ತಿದ್ದೀನಾ?
3. ಅಲ್ಲಿ ಹುಡುಗರು ಗಲಾಟೆ ಮಾಡುತ್ತಿದ್ದಾರೆ!
4. ಇವರು ಕೊಳದಲ್ಲಿ ಸ್ನಾನ ಮಾಡುತ್ತಿದ್ದಾರೆ.
5. ಮೊದಲು ನಾನು ಪಲ್ಯ ಮಾಡಿದ್ದೇನೆ.
6. ನಂತರ ಅವರು ಅಡುಗೆ ಮಾಡಿದ್ದಾರೆ?
7. ಪಲ್ಯ ಯಾರು ಮಾಡಿದರು?
8. ಕೆಲವರು ಬ್ರಾಹ್ಮಣರು.
9. ಅವರು ಬಹು ವಿಧವಾಗಿ ಮಾಡಿದರು.
10. ನಾಳೆ ನೀನೂ ಕೂಡಾ ಹಾಗೆ ಮಾಡಬೇಕು.

### ಉತ್ತರ

1. त्वं दौष्ट्यं मा कुरु।
2. किमहं दौष्ट्यं कुर्वन्नस्मि?
3. तत्र बालकाः दौष्ट्यं कुर्वन्ति।
4. एते तटाके स्नानं कुर्वन्ति।
5. प्रथममहं शाकमकरवम्।
6. अनन्तरं ते पाकमकुर्वन्।
7. शाकं कः अकरोत्?(के अकुर्वन्?)
8. केचन ब्राह्मणाः।
9. ते अनेकधा अकुर्वन्।
10. श्वः त्वमपि तथैव कुर्याः।



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

### ಮೇಷ

ಆರ್ಥಿಕ ಲೇವಾದೇವಿಗಳು ನೆಲೆಗೊಳ್ಳುತ್ತವೆ. ಚೋರಭಯ ಹಾಗೂ ದೂರ ಪ್ರಯಾಣ ಒದಗಿಬರುತ್ತದೆ. ಪ್ರಯಾಣದಲ್ಲಿ ಜಾಗ್ರತೆ ಅವಶ್ಯಕ. ಒಳ್ಳೆಯ ಜನರೊಂದಿಗೆ ಒಡನಾಟ, ಆರೋಗ್ಯ , ಮಣಿ-ಅಲಂಕಾರ ವಸ್ತುಗಳ ಪ್ರಾಪ್ತಿ ಅಮೋಘವಾದ ವಾಗ್ಚಾತುರ್ಯ ಪ್ರದರ್ಶಿಸಿ ಕಾರ್ಯದಲ್ಲಿ ಜಯಗಳಿಸುವಿರಿ. ಮಕ್ಕಳ ಓದಿಗಾಗಿ ಸಮಯವನ್ನು ವ್ಯಯಿಸುವಿರಿ. ಫಲಿಂತಾಶಗಳು ಒದಗಿ ಬರುತ್ತವೆ. ಕೈಯಲ್ಲಿ ರುಣ ಬಂದು ನಿಲ್ಲುತ್ತದೆ.

### ವೃಷಭ

ಧನ- ಧಾನ್ಯ ಬಂಧು-ಮಿತ್ರ ಲಾಭ, ವಾಗ್ವಾದಗಳನ್ನು ಕಡಿಮೆಗೊಳಿಸಿ, ಇತರರ ಮಾತಿಗೆ ಬೆಲೆಕೊಟ್ಟು ಸಂಯಮದಿಂದ ಸಮಯಕ್ಕೆ ತಕ್ಕ ಸೂರ್ತಿಯಿಂದ ಕಾರ್ಯಗಳನ್ನು ಪೂರ್ಣಗೊಳಿಸುವಿರಿ.ಗೃಹದಲ್ಲಿ ಶುಭಕಾರ್ಯ ಯೋಗ. ಪ್ರಯಾಣಗಳಿಂದ ಶಾರೀರಿಕ ದಣಿವುಂಟಾಗುವುದು. ಆರ್ಥಿಕ ಬಿಕ್ಕಟ್ಟುಗಳುಂಟಾಗುತ್ತವೆ. ಆದಾಯ ಕೈಗೂಡುತ್ತದೆ. ರಂಗವ್ಯಾಸಾಂಗದಲ್ಲಿ ಚುರುಕುತನದಿಂದ ಪಾಲ್ಗೊಳ್ಳುವಿರಿ. ಶಿಸ್ತಿನಿಂದ ಕೂಡಿದ ಜೀವನ ಅಭ್ಯಾಸವಾಗುತ್ತದೆ.

### ಮಿಥುನ

ನಿಮ್ಮ ಬಂಧು-ಮಿತ್ರರ ಅಸಹಜ ಪ್ರವರ್ತನೆ ನಿಮ್ಮನ್ನು ಕ್ಷೋಭೆಗೊಳ್ಳುವಂತೆ ಮಾಡುತ್ತದೆ. ಸಂಯಮದಿಂದ , ಸಾಹಸದಿಂದ ಎಲ್ಲವನ್ನು ಹತೋಟಿಯಲ್ಲಿರಿಸುವಿರಿ ಆಕಸ್ಮಿಕವಾದ ಧನಲಾಭ ನಿಮ್ಮನ್ನು ಹುಡುಕಿ ಬರುತ್ತದೆ. ಗೌರವ ಮರ್ಯಾದೆಗಳು ಹೆಚ್ಚುತ್ತವೆ. ಸುಖಮಯವಾದ ಜೀವನ ಆಕಸ್ಮಿಕ ಧನ ಲಾಭಕ್ಕೆ ಕಾರಣವಾಗುತ್ತದೆ. ಬಂಧುಗಳ ಮನೆಯ ಶುಭಕಾರ್ಯದಲ್ಲಿ ಪಾಲ್ಗೊಳ್ಳುವಿರಿ. ಧನವ್ಯಯವನ್ನು ಲೆಕ್ಕಿಸದಿರಿ.

### ಕರ್ಕಾಟಕ

ವಿಶ್ರಾಂತಿ ಅಗತ್ಯ, ತಿರುಗಾಟ, ಅಲಂಕಾರಿಕ ವಸ್ತು ಪ್ರಾಪ್ತಿ, ಉದ್ಯೋಗ ಪ್ರಾಪ್ತಿ, ಮೇಲಿನ ಅಧಿಕಾರಿಗಳ ಭೇಟಿ, ಅವರು ಹಿತನುಡಿಗಳನ್ನು ಹೇಳುವಿಕೆ, ಒಳ್ಳೆಯ ಸಂವಾದ, ಧನ ನೆಲೆಗೊಳ್ಳುವುದು, ಮನೆಯಲ್ಲಿನ ಆನಂದವುಂಟಾಗುವ ವಾತಾವರಣ ವೃತ್ತಿ ಸಂಬಂಧಿಸಿದ ಕೆಲಸಗಳಲ್ಲಿ ತಲೀನರಾಗಿರುವಿರಿ. ಮೇಲಧಿಕಾರಿಗಳು ಗುರುತಿಸಿ ಆದರಿಸುತ್ತಾರೆ. ಗೌರವಾನ್ವಿತ ಪರಿಸರದಲ್ಲಿರುವಿರಿ.

### ಸಿಂಹ

ದೇಹಕ್ಕೆ ಸೋಂಕು ತಗಲುವ,ಕಳ್ಳಕಾರರ ಭಯ, ಅಗ್ನಿಯಿಂದ ಭಯ, ವೃತ್ತಿ ವ್ಯಾಪಾರಗಳಲ್ಲಿ ಸಾಧಾರಣ ಲಾಭ,ಅಪೇಕ್ಷಿಸಿದಷ್ಟು ಫಲಗಳು ಬರುವುದಿಲ್ಲ. ಅಷ್ಟಮ ಕುಜ ದೋಷದಿಂದಾಗಿ ಅನಾರೋಗ್ಯವುಂಟಾಗುವುದು,ಅದನ್ನು ಹೋಗಲಾಡಿಸಲು ಸುಬ್ರಮಣ್ಯ ಅಭಿಷೇಕ ಮಾಡಿಸುವುದು ಉತ್ತಮ. ರಾಜಕೀಯ ವ್ಯಕ್ತಿಗಳಿಗೆ ಆಕಸ್ಮಿಕವಾಗಿ ಪದವಿ ಲಭಿಸುವುದು. ಜನಾನುರಾಗ ವೃದ್ಧಿಯಾಗುವುದು.

### ಕನ್ಯ

ವ್ಯವಸಾಯಾದಿ ಕಾರ್ಮಿಕರಿಗೆ ಅಧಿಕ ಶ್ರಮದಿಂದ ಹೇರಳ ಬೆಳೆ ಬಂದೊದಗುವುದು. ವೃತ್ತಿಪರರಾದವರಿಗೆ ಮೇಲ್ವರ್ಗದವರಿಂದ ಅಧಿಕಲಾಭವುಂಟಾಗುವುದು. ವೃತ್ತಿ ವಿಷಯಗಳೆಲ್ಲವೂ ಅನುಕೂಲವಾಗಿರುತ್ತವೆ. ಅಧಿಕಾರಿಗಳು ತಾರಕಕ್ಕೇರುವಿರಿ. ಇತರರಿಗೆ ತಮ್ಮಿಂದಾಗುವಷ್ಟು ಸಹಾಯ ಮಾಡುವರು. ನೀವು ಮಾಡುವ ಎಲ್ಲ ಕಾರ್ಯಗಳಲ್ಲೂ ಗುರು ಬಲ ನಿಮಗಿರುತ್ತದೆ.

### ತುಲಾ

ಅಕಾಲ ಭೋಜನದಿಂದ ದೇಹದಲ್ಲಿ ಅಜೀರ್ಣ, ಉದರ ಸಂಬಂಧಿಸಿದ ಅಲ್ಪ ಅನಾರೋಗ್ಯಗಳು, ವಾರದ ಮೊದಲಲ್ಲಿ ವೃತ್ತಿ ವ್ಯಾಪಾರಗಳು ಮಂದಗತಿಯಲ್ಲಿದ್ದು ದೂರ ಪ್ರಯಾಣದಿಂದ ಆಲಸ್ಯವುಂಟಾಗುವುದು.ಪಾಲುದಾರಿಕೆ ವ್ಯವಹಾರಗಳಿಂದ ವಿಮುಖರಾಗುತ್ತೀರಿ. ವ್ಯವಹಾರಸ್ಥರಿಗೆ ಮಾಸದ ದ್ವಿತೀಯಾರ್ಥದಲ್ಲಿ ಅಧಿಕ ಲಾಭಗಳುಂಟಾಗುತ್ತವೆ. ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ.

### ವೃಶ್ಚಿಕ

ಗ್ರಹಸ್ಥಿತಿಗಳು ಮಿಶ್ರವಾಗಿವೆ. ಅಗ್ನಿಪ್ರಮಾದವಾಗುವ ಅವಕಾಶಗಳು ಇಲ್ಲದಿಲ್ಲವೆಂದು ವ್ಯಾಕುಲತೆಯಿಂದ ಮನತುಂಬಿ ವ್ಯಸನವುಂಟಾಗುವುದು. ಅಕಾಲ ಆಹಾರ ಭುಜನದಿಂದ ಉದರ ಸಂಬಂಧಿ ವ್ಯತ್ಯಯಗಳಾಗಿ ವೈದ್ಯರನ್ನು ಸಂತಾನಾಭಿವೃದ್ಧಿ ಆಶಾದಾಯಕವಾಗುವುದು. ಇತರರು ನಿಮ್ಮ ಮೊತ್ತನ್ನು ಪರಾಬರಿಸುತ್ತಾರೆ ಹಾಗೂ ಎಲ್ಲರೂ ನಿಮ್ಮನ್ನು ಪ್ರಶಂಸಿಸುವರು.

### ಧನಸ್ಸು

ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ತೊಂದರೆಗಳು, ಅಗತ್ಯ ವಿದ್ದಷ್ಟೇ ಕೆಲಸ ಮಾಡುವುದು. ಧನಧಾನ್ಯಲಾಭಗಳು, ಭೂವ್ಯವಸಾಯಗಳಲ್ಲಿ ಅಧಿಕವಾದ ಫಲ ಬರುವುದು, ಧನಧಾನ್ಯಾಭಿವೃದ್ಧಿ, ಹಣ ಕೈಯಲ್ಲಿ ನಿಲ್ಲುವುದು ಕಷ್ಟಾರ್ಜಿತವೂ ನೆಲೆ ನಿಲ್ಲುತ್ತದೆ. ವಿದ್ಯಾರ್ಥಿಗಳು ಓದಿನಲ್ಲಿ ಅನೂಹ್ಯವಾಗಿ ಮೆರೆಯುವರು. ಪರದೇಶಾಭ್ಯಾಸ, ದೂರ ಪ್ರಯಾಣಗಳು ಒದಗಿ ಬರುತ್ತವೆ.

### ಮಕರ

ಗೃಹ ವಾತಾವರಣ ಅನುಕೂಲಕರ ಮನೆಯಲ್ಲಿ ಶುಭಯೋಗಗಳು ಲೋಭತೊಂದರೆಗಳು ತಪ್ಪವು. ಆರೋಗ್ಯದಲ್ಲಿ ವ್ಯತ್ಯವಯ, ಮಿಶ್ರ ಫಲಗಳು ಗ್ರಹಸ್ಥಿತಿಯ ಫಲಿತಗಳು ಕಾರ್ಯನಾಶ, ಅಸಂತೃಪ್ತಿ, ಧನನಿಲ್ಲದು ಧೈರ್ಯದಿಂದ ಮಾಡುವ ಪ್ರತಿಕಾರ್ಯವು ಕೈಗೂಡುತ್ತದೆ. ಕಾರ್ಯಜಯ ತರುತ್ತದೆ.

### ಕುಂಭ

ಮನಸ್ಸಿನಲ್ಲಿನ ಸಂಕಟ ತೊಲಗಿ ಶರೀರಾರೋಗ್ಯವು ಚೆನ್ನಾಗಿರುವುದು ಇಷ್ಟ ಕಾಮ್ಯಾರ್ಥ ಸಿದ್ಧಿಸುವುದು. ದಾನ ಧರ್ಮಗಳನ್ನು ಮಾಡುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಬಂಧು, ಮಿತ್ರರಿಂದ ಸಂತೋಷ ಸನ್ಮಿತ್ರ ಲಾಭಗಳು ಒದಗುವುವು. ಭೂ ವ್ಯವಹಾರಗಳಲ್ಲಿ ತೊಡಕು ತೊಂದರೆಗಳಿರುತ್ತವೆ. ಎಲ್ಲರೂ ನಿಮ್ಮ ಹಾದಿಯನ್ನೇ ಹಿಡಿಯುತ್ತಾರೆ. ಧನಲಾಭವು ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

### ಮೀನ

ಶುಭಕಾರ್ಯ ಪರಂಪರೆ ಮೊದಲುಗೊಳ್ಳುತ್ತದೆ. ಮನೆಯಲ್ಲಿ ಮಂಗಳ ತಳಿರು ತೋರಣ,ಬಂಧು ಮಿತ್ರರ ಆಗಮನ,ಶುಭ ವ್ಯಯವು, ಮಿತ್ರರ ಪ್ರಶಂಸೆಗಳು ನೀವು ಮಾಡುವ ಪ್ರತಿ ಕಾರ್ಯಕ್ಕೂ ಕೂಡಿ ಬರುತ್ತದೆ. ಮಾತು ಮಾತಿಗೆ ಇತರರ ಮೇಲೆ ಕೋಪಗೊಳ್ಳುವುದು ಸರಿಯಲ್ಲ. ಇತರರ ಮಾತಿಗೆ ಕಿವಿಗೊಟ್ಟು ಸಹಕರಿಸಿಕೊಂಡು ಹೋಗಬೇಕಾಗಿ ಬರುವುದು ಆರೋಗ್ಯ ವಿಷಯದಲ್ಲಿ ಸಮಾವಾಸವುಂಟಾಗುವುದು.

# ಹನುಮಂತನ ಜನ್ಮಸ್ಥಳ ತಿರುಮಲೆಯಲ್ಲಿನ ಅಂಜನಾದ್ರಿ ಪೌರಾಣಿಕ ಆಧಾರಗಳು

- ಆಚಾರ್ಯ ರಾಣಿ ಸದಾಶಿವ ಮೂರ್ತಿ

ಅನುವಾದ: ಸೂರ್ಯವಂಶಿ

ಇಡೀ ಭಾರತ ದೇಶದಲ್ಲಿ ಮತ್ತು ಭಾರತೇತರ ದೇಶದಲ್ಲಿ ಮುಖ್ಯವಾಗಿ ಆಗ್ನೇಯ ಏಷಿಯಾದವರೆಗೂ ಅನೇಕ ಸಾವಿರ ವರ್ಷಗಳಿಂದ ಹನುಮಂತನ ಮೇಲೆ ಭಕ್ತಿ ವಿಶ್ವಾಸಗಳು ಎಲ್ಲರ ಮನದಲ್ಲೂ, ಬೇರೂರಿರುವ ವಿಷಯ. ಉತ್ತರ ಭಾರತದಲ್ಲಿ ನೋಡಿದರೆ ರಾಮಭಕ್ತಿಗೆ ಎಷ್ಟು ಪ್ರಾಧಾನ್ಯತೆಯನ್ನು ನೀಡುತ್ತಾರೋ,ಹನುಮಂತನ ಮೇಲೆ ಭಕ್ತಿಯನ್ನು ತೋರಿಸುವುದಲ್ಲೂ ಬಹಳ ಶ್ರದ್ಧೆಯನ್ನು ಹೊಂದಿರುತ್ತಾರೆ. ದಕ್ಷಿಣ ಭಾರತದಲ್ಲಿ ಅತ್ಯಂತ ಭಕ್ತಿ ಇದ್ದರೂ ಉತ್ತರ ಭಾರತದಲ್ಲಿ ಶ್ರೀ ತುಲಸೀದಾಸ ವಿರಚಿತವಾದ "ರಾಮ ಚರಿತ ಮಾನಸ್" ಗೆ ಇರುವ ಹೆಸರು ಶ್ರೀವಾಲ್ಮೀಕಿ ರಾಮಾಯಣಕ್ಕೆ ಇದೆ ಎಂದರೆ ಅತಿಶಯೋಕ್ತಿಯಲ್ಲ. ಅದರಲ್ಲೂ "ಶ್ರೀಹನುಮಾನ್ ಚಾಲೀಸ್" ಪಠಿಸದವರು ಬಹಳ ಅಪರೂಪವೆಂದೇ ಹೇಳಬಹುದು. ಇಷ್ಟು ಪ್ರಸಿದ್ಧವಾದ ಹನುಮಂತನ ಜನ್ಮಸ್ಥಳದ ಬಗೆಗೆ ಮಾತ್ರ ಭಕ್ತರು ಅಷ್ಟೊಂದು ಆಸಕ್ತಿಯನ್ನು ತೋರಿಸುವುದಿಲ್ಲ. ಆಯಾ ಸ್ಥಾನಿಕ ಜನರ ಅಭಿಪ್ರಾಯಗಳ ಪ್ರಕಾರ, ಅಲ್ಲಿನ ಪ್ರಜೆಗಳ ನಂಬಿಕೆಗಳನ್ನು ಆಧರಿಸಿ ಭಾರತದ ವಾಸಿಗಳು ಐದಾರು ಪ್ರದೇಶಗಳಲ್ಲಿ ಹನುಮಂತನ ಜನ್ಮಸ್ಥಳ ಇರುವುದೆಂದು ಹೇಳಲಾಗುತ್ತಿದೆ. ನವಸಾರಿ ಜಿಲ್ಲೆಯಲ್ಲಿ ಡಾಂಗ್ ಪ್ರಾಂತವೆಂದು ಅಲ್ಲಿನ ಸ್ಥಾನಿಕರು,ಜಾರ್ಖಂಡ್‌ನಲ್ಲಿ ಗುಮ್ಲಾದಲ್ಲಿನವರು, ಹರಿಯಾಣ ರಾಜ್ಯದಲ್ಲಿನ ಕೈಥಾಲ್ (ಕಪಿಸ್ಥಲ್) ಎಂದು ಕೆಲವರು, ನಾಸಿಕ್‌ನ ಬಳಿ ಅಂಜನೇರಿ ಎಂದು ಕೆಲವರು, ಕರ್ನಾಟಕ ದಲ್ಲಿನ ಹಂಪೆಯ ಬಳಿ ಇರುವ ಕಿಷ್ಕಿಂಧೆಯಲ್ಲಿ ಎಂದು ಆ ಪ್ರಾಂತದವರು ಹೀಗೆ ಸ್ಥಾನಿಕರ ಮಾತುಗಳಿಗೆ ಪ್ರಾಮುಖ್ಯತೆಯನ್ನು ನೀಡಿ ಕಥೆಗಳನ್ನು ಪ್ರಚಾರಕ್ಕೆ ತಂದಿದ್ದಾರೆ. ಯಾತ್ರಿಕರು ಆ ಪ್ರದೇಶಗಳನ್ನು ನೋಡುವುದಕ್ಕೆ ಹೋದಾಗ ಅದನ್ನೇ ನಂಬಿ ತಮ್ಮ ತಮ್ಮ ಊರಿಗೆ ಹೋಗುತ್ತಲೇ ಮರೆತು ಬಿಡುತ್ತಿದ್ದಾರೆ. ಈ ಐದರಲ್ಲಿ ಪ್ರಜೆಗಳ ಮಾತುಗಳೇ ಆಧಾರಗಳಾಗಿವೆ.

ಆದರೆ ಇವೆಲ್ಲದಕ್ಕಿಂತಲೂ ಭಿನ್ನವಾಗಿ ತಿರುಮಲೆಯಲ್ಲಿನ ಅಂಜನಾದ್ರಿಯ ಬಗೆಗೆ, ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳವೆಂದು ಹೇಳುವುದಕ್ಕೆ ಪುರಾಣಗಳಲ್ಲಿ ಶ್ರೀ ವೇಂಕಟಾಚಲಮಹಾತ್ಮ್ಯದಲ್ಲಿ, ಭಕ್ತಿ ಸಾಹಿತ್ಯದಲ್ಲಿ ಸಂಕೀರ್ತನಾಚಾಯವರ ಕೀರ್ತನೆಗಳಲ್ಲಿ ಆಗಮಗಳಲ್ಲಿನ ಪ್ರಸ್ತಾ ವನೆಗಳು ಅನೇಕವಿವೆ.

ಈ ಪ್ರಸ್ತಾವನೆಗಳನ್ನು ಮೂರು ರೀತಿಯಲ್ಲಿ ವಿಭಜಿಸಬಹುದು.

1. ಶ್ರೀ ಶೇಷಾಚಲಪರ್ವತ ಶ್ರೇಣಿಯೆಂದು ಕರೆಯಲ್ಪಡುವ ತಿರುಮಲೆ ಗಿರಿಗಳಲ್ಲಿ ಒಂದಾದ ಅಂಜನಾದ್ರಿ ಎಂದು ಕರೆಯಲ್ಪಡುವ ಕೆಲವು, 2. ಅಂಜನಾದೇವಿ ಇಲ್ಲಿ ಪುತ್ರನನ್ನು ಪಡೆಯುವುದಕ್ಕಾಗಿ ತಪಸ್ಸನ್ನು ಆಚರಿಸಿದಳೆಂದು ಹೇಳುವ ಕೆಲವು. 3. ಹನುಮಂತನ ಜನ್ಮಸ್ಥಳವು ಇದೆ ಎಂದು ಹೇಳುವುದು ಕೆಲವು.

ಈ ಆಧಾರಗಳನ್ನು ಪರಿಶೀಲಿಸುವ ಪ್ರಯತ್ನದಲ್ಲಿ ಅಂಜನಾದ್ರಿಯ ವಿಷಯದಲ್ಲಿ ಪುರಾಣಾಧಾರಗಳು ಯಾವ ರೀತಿ ಲಭಿಸುತ್ತಿವೆ ಎಂದು ಗಮನಿಸಬೇಕು. ಹದಿನೆಂಟು ಮಹಾಪುರಾಣಗಳಲ್ಲಿ ಉತ್ತರಭಾರತ ಮತ್ತು ದಾಕ್ಷಿಣಾತ್ಯಪ್ರತಿಗಳ ಹಲವಾರು ಕಡೆಗಳಲ್ಲಿ ಅಂಜನಾದ್ರಿಯ ಬಗೆಗೆ ಪ್ರಸ್ತಾವನೆ ಮಾಡಿದರುವುದು ಕಂಡು ಬರುತ್ತದೆ ಎಂದು ಸ್ಕಂಧಪುರಾಣಗಳಲ್ಲಿ ಹೇಳಲಾಗಿದೆ.

ಇನ್ನು ಹನ್ನೆರಡು ಪುರಾಣಗಳಲ್ಲಿನ ಶ್ರೀವೇಂಕಟಾಚಲ ಕ್ಷೇತ್ರ ಮಹಾತ್ಮೆಯನ್ನು ಒಂದು ಕಡೆಗೆ ಸೇರಿಸಿ ಶ್ರೀವೇಂಕಟಾಚಲಮಹಾತ್ಮ್ಯ ಎಂಬ ಹೆಸರಿನಿಂದ ಮುದ್ರಿಸಲಾಗಿದೆ. ಮುದ್ರಣ ಪದ್ಧತಿ ಬರುವುದಕ್ಕೂ ಮೊದಲೂ ಈ ಗ್ರಂಥಕ್ಕೆ ಶ್ರೀಮದ್ರಾಮಾನುಜಾಚಾರ್ಯರ ಕಾಲದಿಂದಲೂ ಗೌರವವಿದೆ



ಎಂಬ ವಿಷಯವನ್ನು ಶ್ರೀವೇಂಕಟಚಾಲಾ ಇತಿಹಾಸ ಮಾಲದಂತಹಾ ಗ್ರಂಥ ಗಳು ತಿಳಿಸುತ್ತಿದೆ.ಗ್ರಂಥಮುದ್ರಣ ಪದ್ಧತಿಯು ಪ್ರಾರಂಭವಾದ ನಂತರ ಮೊದಲ ಬಾರಿಗೆ ಶ್ರೀವೇಂಕಟಾಚಲ ಕ್ಷೇತ್ರದ ಮಹಾತ್ಮ್ಯ 1929 ರಲ್ಲಿ ಕಲಕತ್ತೆಯಲ್ಲಿನ ಶ್ರೀಸ್ವಾಮಿ ಮಹಂತ ಶ್ರೀಪ್ರಯಾಗದಾಸ್ ಅವರ ಮೂಲಕ ಪಂಡಿತ ಶ್ರೀಕೇಸರಿ ಕಾಂತ್ ಶರ್ಮ, ಪಂಡಿತ ಶ್ರೀಲಕ್ಷ್ಮೀಧರ ಪಾಠಕ್ ಅವರ ಸಂಪಾದಕತ್ವದಲ್ಲಿ ಮುದ್ರಿಸಲ್ಪಟ್ಟಿದೆ.

ಇದರಲ್ಲಿನ ಸ್ಕಂಧ ಪುರಾಣದ ಭಾಗದಲ್ಲಿ ಸ್ವತಂತ್ರ ಸ್ಕಂಧ ಪುರಾಣ ದಲ್ಲಿ ಕಂಡು ಬರುವ ಶ್ರೀವೇಂಕಟಾಚಲಮಹಾತ್ಮ ಎರಡೂ ಒಂದೇ ರೀತಿ ಯಾಗಿರುವುದರಿಂದ ಉಳಿದ ಹನ್ನೆರಡು ಪುರಾಣಗಳ ಭಾಗಗಳೂ ಪ್ರಮಾಣ ಗಳೇ ಎಂದು ಪಂಡಿತರೆಲ್ಲರೂ ಅಂಗೀಕರಿಸಿದ್ದಾರೆ.

ಈ ರೀತಿ ದೊರೆಯುತ್ತಿರುವ ಆಧಾರಗಳನ್ನು ಪರಿಶೀಲಿ ಸಿದರೆ ಶ್ರೀವೇದಾಂತ ದೇಶಿಕರು. ಶ್ರೀವೇಂಕಟಾಧ್ವರಿನ್ ಅಂತಹಾ ಕವಿಪುಂಗವರ ಗ್ರಂಥದಲ್ಲೂ, ಅನ್ನಮಯ್ಯ, ಪುರಂದರದಾಸರು. ತರಿಗೊಂಡ ವೇಂಗಮಾಂಬ ರಂತಹವರ ಭಕ್ತಿ ಕೀರ್ತನೆಗಳಲ್ಲಿ ಆಗಮಗಳಲ್ಲಿ ಶ್ರೀವೇಂಕಟೇಶ್ವರ ಸ್ವಾಮಿ ಯವರ ಸಹಸ್ರನಾಮಾವಳಿಯಲ್ಲಿ, ಶ್ರೀವೇಂಕಟೇಶ್ವರ ಗದ್ಯದಲ್ಲಿ, ಇತರ ಸ್ತೋತ್ರಗಳಲ್ಲಿ ಅಂಜನಾದ್ರಿ ಎಂಬ ಹೆಸರು ಕೇಳಿಬರುತ್ತದೆ.

ಅಂಜನಾದ್ರಿರ್ವೃಷಾದ್ರಿಶ್ಚ ಶೇಷಾದ್ರಿರ್ಗರುಡಾಚಲಃ

ತೀರ್ಥಾದ್ರಿಃ ಶ್ರೀನಿವಾಸಾದ್ರಿಶ್ಚಿಂತಾಮಣಿಗಿರಿಸ್ಥಥಾ,

ವೃಷಭಾದ್ರಿರ್ವರಾಹಾದ್ರಿರ್ ಜ್ಞಾನಾದ್ರಿಃ ಕನಕಾಚಲಃ

ಆನಂದಾದ್ರಿಶ್ಚ ನೀಲಾದ್ರಿಃ ಸುಮೇರು ಶಿಖರಾಚಲಃ

ವೈಕುಂಠಾದ್ರಿಃ ಪುಷ್ಕರಾದ್ರಿರಿತಿ ನಾಮಾನಿ ವಿಂಶತಿಃ

ಎಂದು ಬ್ರಹ್ಮಪುರಾಣದಲ್ಲಿ ಇರುವ ಶ್ಲೋಕದಲ್ಲಿ ಶ್ರೀಶೇಷಾಚಲ ಅಥವಾ ಶ್ರೀವೇಂಕಟಾದ್ರಿಗೆ ಇರುವ ಪ್ರಸಿದ್ಧವಾದ ಹೆಸರಿನಲ್ಲಿನ ಮೊಟ್ಟ ಮೊದಲ ಹೆಸರು ಅಂಜನಾದ್ರಿ ! ಇಲ್ಲಿ ಈ ಸಂದರ್ಭದಲ್ಲಿ ಕೆಲವು ಜ್ಞಾನಿಗಳು ಇತಿ ನಾಮಾನಿ ವಿಂಶತಿ '' ಎಂದು ೨೦ ಹೆಸರುಗಳು ಎನ್ನುತ್ತಲೇ ಶ್ಲೋಕ ಗಳಲ್ಲಿ ಹದಿನಾರು ಮಾತ್ರಾ ಹೇಳಿದ್ದಾರೆ ಆದ್ದರಿಂದ ಈ ಶ್ಲೋಕಗಳು ಸಂದೇಹ ಪೂರಿತವಾಗಿವೆ ಎಂದು ಹೇಳುತ್ತಿದ್ದಾರೆ. ಆದರೆ ಈಗಿನ ಕಾಲದ ಆಧುನಿಕ ರಿಗಾಗಿ ಬರೆದ ಶ್ಲೋಕಗಳಲ್ಲಿ ಅವೆಲ್ಲವೂ ಪರಂಪೆಯಲ್ಲಿ ಬರುತ್ತಿರುವ ಶ್ಲೋಕ ಗಳು, ಈ ಗ್ರಂಥವು ಮುದ್ರಣಕ್ಕೆ ಬರುವ ಮೊದಲೇ ಸಾವಿರ ವರ್ಷಗಳ ಕಾಲ ದಲ್ಲಿ ಈಗ ಕಂಡು ಬರದ ನಾಲ್ಕು ಹೆಸರುಗಳು ಕಳೆದು ಹೋಗಿವೆ ಎಂದು ಹೇಳಬಹುದು.ಅಷ್ಟಕ್ಕೇ ಉಳಿದ ಹದಿನಾರು ಹೆಸರುಗಳು ಅಪ್ರಾಮಾಣಿಕ ಎಂದು ಹೇಳಲಾಗುವುದಿಲ್ಲ.

ಹಾಗೆಯೇ ಪದ್ಮಪುರಾಣದಲ್ಲಿನ ಎರಡು ಸಂದರ್ಭಗಳನ್ನು ಉದಾ ಹರಿಸಲಾಗಿದೆ.

ಶ್ರೀ ವೇಂಕಟಾಚಲವನ್ನು ಸಂದರ್ಶಿಸಿದವರಲ್ಲಿ ಮೊದಲು ಹೇಳು ವಂತಹಾ ಹೆಸರು ಶ್ರೀಶುಕಮಹರ್ಷಿ. ಅವರು ತಿರುಶುಕನೂರು (ಇಂದಿನ ತಿರುಚಾನೂರು) ನಲ್ಲಿ ಪದ್ಮಾವತಿ ದೇವಿಯನ್ನು ಸೇವಿಸಿ ಅಲ್ಲಿಂದ ರಮ್ಯಾತಿ ರಮ್ಯವಾದ ಶ್ರೀವೇಂಕಟಾಚಲದಿವ್ಯ ಕ್ಷೇತ್ರವನ್ನು ವೀಕ್ಷಿಸಿದರು ಎಂದು ಹೇಳಿದ ಸಂದರ್ಭದಲ್ಲಿ ಅದನ್ನು ಅಂಜನಗಿರಿ, ಅಂಜನಾಚಲ ಎಂದು ಹೇಳಿ ದ್ದಾರೆ.ಇದು ಗಮನಿಸಬೇಕಾದ ವಿಷಯ,ಹಾಗೆಯೇ ನಾರಾಯಣಾದ್ರಿ ಎಂದು ವರ್ಣಿಸುವ ಸಂದರ್ಭದಲ್ಲೂ ಕೂಡಾ ಈ ಪರ್ವತವನ್ನು ಅಂಜನ ಗಿರಿ ಎಂದು ತಿಳಿಸುತ್ತಾ ಈ ಅಂಜನಗಿರಿಯ ತಟದಲ್ಲಿ ಸ್ವಾಮಿ ಪುಷ್ಕರಿಣಿ ಇದೆ ಎಂದು ಅಲ್ಲಿ ಸ್ನಾನವನ್ನು ಆಚರಿಸಿದವರಿಗೆ ಪ್ರಾಪ್ತಿಸುವ ಫಲವನ್ನು ವಿವರಿಸಿದ್ದಾರೆ.

## ಪದ್ಮಪುರಾಣದಲ್ಲಿ

ತಸ್ಯ ಸಾನುಮತಃ ಸೋಽಪಿ ಪದಾನಾಶ್ರಿತ್ಯ ಸತ್ವರಃ

ನಿರಾರೇಷ್ವಾಪ್ಲವಂ ಕುರ್ವನ್ ವಿಮಲೋದೇಷ್ವನನ್ಯಧೀಃ

ಅತಂದ್ರಿತೋಂಜನಗಿರಿಂ ಪ್ರಾಪ್ಯ ವಿಪ್ರೋಪವೇಶನಮ್॥೧॥

ಅಂದವಾದ ಶ್ರೇಣಿಗಳನ್ನು ಹೊಂದಿರುವ ಅಂಜನಾದ್ರಿಯನ್ನು ಸೇರಿದ ಆ ಮುನಿಯು ಅಲ್ಲಿರುವ ಪವಿತ್ರಜಲಗಳಿಂದ ಕೂಡಿದ ಜಲಪಾತ ಗಳಲ್ಲಿ ಸ್ನಾನ ಮಾಡಿ ಚೈತನ್ಯತೆಯಿಂದ ಆ ಪರ್ವತದ ಪಾದಗಳಲ್ಲಿ ಸಂಚರಿಸಿ ದನಂತೆ,

## ಶುಕಪುರಿಯಿಂದ ಶುಕನು ಶೇಷಾಚಲಕ್ಕೆ ಬಂದಿದ್ದು

ತತ್ರ ತ್ರಿಷವಣ ಸ್ನಾನಂ ಕೃತ್ವಾ ವ್ಯಾಸೋರಸೋ ಮುನಿಃ

ಉಷಿತ್ವಾತ್ರಿ ದಿನಂ ತತ್ರೋಪಾಸಕಃ ಪರಾಯಣಃ

ದ್ರಷ್ಟು ಕಾಮೋ - ಖಿಲಾಶ್ಚರ್ಯಂ ಪುನರಪ್ಯಂಜನಾಚಲೇ।

ವ್ಯಾಸಪುತ್ರನಾದ ಈ ಮುನಿಯು ಅಲ್ಲಿ ತ್ರಿಷವಣ ಸ್ನಾನ ಮಾಡಿ, ಮೂರು ದಿನಗಳು ಇದ್ದು ಉಪವಾಸದಿಂದ ಕಾಲವನ್ನು ಕಳೆದನು. ಆಗ ಆ ಅಂಜನಾಚಲದಲ್ಲಿ ಇರುವ ಆಶ್ಚರ್ಯವನ್ನು ನೋಡಬಲ್ಲವನಾದನು.

## ನಾರಾಯಣಾದ್ರಿ ವರ್ಣನೆಯಲ್ಲಿ

ಪ್ರಾಚೀನೇ ತಸ್ಯ ದೇಶಸ್ಯ ಸ್ಥಿತೋಂಜನಗಿರೇಸ್ತಟೇ

ತರುಣಾದಿತ್ಯ ಸಂಕಾಶಾಽಖಿಲಾಭೀಷ್ಟದಾ।

ಪ್ರಾಚೀನವಾದ ಈ ಪ್ರದೇಶದಲ್ಲಿ ಅಂಜನಗಿರಿಯ ತಟದಲ್ಲಿ ಉದಯ ಸೂರ್ಯನ ಕಾಂತಿಯಿಂದ ಕಂಗೊಳಿಸುತ್ತಿರುವಂತಹಾ ಸ್ವಾಮಿ ಪುಷ್ಕರಿಣಿ ಅಭೀಷ್ಟಪ್ರದಾಯಿನಿ ಎಂದು ಹೆಸುರುವಾಸಿಯಾಗಿದೆ.

ಕುಂಚೇಂಜನಗಿರೇಃ ಸ್ವಾಮಿಪುಷ್ಕರಿಣ್ಯೈಪ್ಪು, ಯೋ ನರಃ

ಕೃತಾಪ್ಲವಃ ಸಕೃತ್ ಸತ್ಯಂ ಕೃತಕೃತ್ಯೋ ಭವೇನ್ನರಃ॥೨॥

ಅಂತಹಾ ಅಂಜನಗಿರಿಯಲ್ಲಿ ಸ್ವಾಮಿ ಪುಷ್ಕರಿಣೀಯಲ್ಲಿ ಯಾರು ಸ್ನಾನವನ್ನು ಆಚರಿಸುತ್ತಾರೋ ಅವರು ತಮ್ಮ ಕಾರ್ಯಗಳಲ್ಲಿ ವಿಜಯವನ್ನು ಸಾಧಿಸುತ್ತಾರೆ.

ನಂತರ ಪುರಾಣಗಳಲ್ಲಿ ಪರಿಶೀಲಿಸಿದರೆ ಸ್ಕಂಧಪುರಾಣದಲ್ಲಿನ ವೈಷ್ಣವ ಖಂಡದಲ್ಲಿ 39,40 ಅಧ್ಯಾಯಗಳು ಎರಡರಲ್ಲೂ ವಿವರವಾಗಿ ಹನುಮಂತನ ಜನ್ಮವೃತ್ತಾಂತವನ್ನು ವರ್ಣಿಸಲಾಗಿದೆ. ಅದು ಸ್ಕಂಧಪುರಾಣದಲ್ಲಿ ಉತ್ತರ ಭಾರತ, ದಕ್ಷಿಣಭಾರತದ ಪ್ರತಿಗಳೆಲ್ಲದರಲ್ಲೂ ಇದೆ. ಅಲ್ಲಿ ಹೇಳಲಾಗಿರುವ ವಿಧದಲ್ಲಿ ಹನುಮಂತನ ಜನ್ಮಸ್ಥಳವು ಈ ವೇಂಕಟಾದ್ರಿಯಲ್ಲಿನ ಆಕಾಶ ಗಂಗೆಯ ಬಳಿ ಸಂಭವಿಸಿದೆ. ಮತಂಗ ಮಹರ್ಷಿಯ ಸೂಚನೆಯ ಮೇರೆಗೆ ಈ ಪ್ರದೇಶದಲ್ಲಿ ಅಂಜನಾದೇವಿ ತಪಸ್ಸು ಮಾಡಿದ್ದರಿಂದ ಹನುಮಂತನು ಇಲ್ಲಿ ಜನ್ಮಿಸಿದನಾದ್ದರಿಂದ ಬ್ರಹ್ಮನ ವರದಿಂದಾಗಿ ಈ ಪರ್ವತಕ್ಕೆ ಅಂಜನಾದ್ರಿ ಎಂಬ ಹೆಸರು ಲೋಕ ಪ್ರಸಿದ್ಧವಾಯಿತು ಎಂದು ಈ ಪುರಾಣವು ತಿಳಿಸುತ್ತದೆ.

ಇಲ್ಲಿ ಗಮನಿಸಬೇಕಾದ ಒಂದು ವಿಷಯವಿದೆ. ಈ ಸ್ಕಂಧ ಪುರಾಣ ವನ್ನು ಅನುಸರಿಸಿ ಅಂಜನಾದೇವಿಯ ತಂದೆ ರಾಕ್ಷಸ. ಮಹಾಬಲ ಪರಾಕ್ರಮ ಶಾಲಿ ಆತನ ಹೆಸರು ಕೇಶರಿ. ಆಕೆಯ ಪತಿ ಕಪಿವೀರನು. ಆತನ ಹೆಸರೂ ಕೇಸರಿ! ಈ ವಿಷಯವನ್ನು ಈ ಕೆಳಗಿನ ಶ್ಲೋಕದಲ್ಲಿ ನೋಡಬಹುದು.

ಮತಂಗ! ಮುನಿಶಾರ್ದೂಲ! ವಚನಂ ಮೇ ಶೃಣುಷ್ವ ಹ,

ಪಿತಾ ಮೇ ಕೇಸರಿ ರಾಮ ರಾಕ್ಷಸಃ ಶಿವತತ್ಪರಃ

(ಸ್ಕಂಧಪುರಾಣ - ಶ್ರೀವೈಷ್ಣವ ಖಂಡಂ-39-4 ರಿಂದ 6)

ಓ ಮುನಿಶ್ರೇಷ್ಠಾ ! ಮತಂಗ ಮಹರ್ಷಿ! ನನ್ನ ತಂದೆ ಕೇಸರಿ ಎಂಬ ರಾಕ್ಷಸನು. ಆತ ಪರಮ ಶಿವ ಭಕ್ತ.

ತತಃ ಕಾಲಾಂತರೇ ವಿಪ್ರಃ ಕೇಸರ್ಯಾ ಭ್ಯೋ ಮಹಾಕಪಿಃ

ಯಯಾಚೇಮಾಂ ದದಸ್ವೇತಿಪಿತರಂ ಮೇ ತತಃ ಪಿತಾ.

ತಸ್ಮೈ ಮಾಂ ದತ್ತವಾಂಶ್ಚೈವ ಪಾರಿಬರಂ ದದೌ ಚ ಸಃ

ಗವಾಂ ಲಕ್ಷಸಹಸ್ರಾಣಿ ಗಜಲಕ್ಷಂ ಮಹಾಮನಾಃ

(ಸ್ಕಂಧಪುರಾಣ - ಶ್ರೀವೈಷ್ಣವ ಖಂಡ 39 - 10,11 ಶ್ಲೋಕಗಳು)

ನಂತರ ಕೇಸರಿ ಎಂಬ ಹೆಸರು ಇರುವ ವಾನರವೀರನು ನನ್ನನ್ನು ಪತ್ನಿ ಯಾಗಿ ತನಗೆ ಕೊಡಬೇಕೆಂದು ಕೇಳಿಕೊಂಡನು. ದೊಡ್ಡಮನಸ್ಸನ್ನು ಹೊಂದಿ ರುವ ಆ ಕಪಿವೀರನಿಗೆ ನನ್ನನ್ನು ಕೊಟ್ಟು, ವಿವಾಹ ಮಾಡಿ ಕಾಣಿಕೆಯಾಗಿ ಕೋಟಿ ಸಂಖ್ಯೆಯಲ್ಲಿ ಹಸುಗಳನ್ನು, ಒಂದು ಲಕ್ಷ ಆನೆಗಳನ್ನು, ಹತ್ತು ಕೋಟಿ ಸಂಖ್ಯೆಗಳಷ್ಟು ಕುದುರೆಗಳನ್ನು, ರಥಗಳನ್ನು ಅನೇಕ ವಸ್ತುಗಳನ್ನು, ರತ್ನಗಳನ್ನು ಸಾವಿರ ಸಂಖ್ಯೆಯಲ್ಲಿ ದಾಸದಾಸೀ ಜನರನ್ನು ನೃತ್ಯಗೀತೆಗಳಲ್ಲಿ ನಿಪುಣರಾದ ಅಂತಃಪುರ ಸ್ತ್ರೀಯರನ್ನು ಸಾವಿರಾರು ವಸ್ತ್ರಗಳನ್ನು ನೀಡಿದನು.

ಇಲ್ಲಿ ಹೇಳಿರುವ ಪ್ರಕಾರ ಅಂಜನಾದೇವಿ ತಂದೆಯ ಹೆಸರು ಕೇಸರಿ, ಆತ ರಾಕ್ಷಸ ! ಆಕೆಯ ಪತಿಯ ಹೆಸರೂ ಕೇಸರಿ ! ಆದರೆ ಆತ ಕಪಿವೀರ!

ಇದೇ ವಿಷಯವನ್ನು ಶ್ರೀ ವೇಂಕಟಾಚಲ ಮಹಾತ್ಮ್ಯೆಯಲ್ಲಿ ಬ್ರಹ್ಮಾಂಡ ಪುರಾಣದ ಭಾಗದಲ್ಲೂ ನೀಡಲಾಗಿದೆ.

ತ್ರೇತಾಯುಗೇಽಸುರಃ ಕಶ್ಚಿತ್ ಕೇಸರೀತ್ಯೇವ ವಿಶ್ರುತಃ

(ಬ್ರಹ್ಮಾಂಡಪುರಾಣೇ ತೀರ್ಥ ಖಂಡೇ ಭೃಗುನಾರದ ಸಂವಾದೇ 54 ಶ್ಲೋಕ)

ತ್ರೇತಾಯುಗದಲ್ಲಿ ಕೇಸರಿ ಎಂಬ ಅಸುರನು ಬಹಳ ಪ್ರಸಿದ್ಧನಾಗಿದ್ದ.

ತತಃ ಕಪಿವರಃ ಕಶ್ಚಿತ್ ಕೇಸರೀತಿ ಭುವಿ ವಿಶ್ರುತಃ

ಅಭಿಗಮ್ಯ ಯಯಾಚೇ ತಾಂ ಕನ್ಯಾಂ ಯೌವನಶಾಲಿನೀಮ್

(ಬ್ರಹ್ಮಾಂಡಪುರಾಣೇ ತೀರ್ಥ ಖಂಡೇ ಭೃಗುನಾರದ ಸಂವಾದೇ 68 ಶ್ಲೋಕ)

ರಾಕ್ಷಸನಾದ ಕೇಸರಿಗೆ ಶಿವನ ವರದಿಂದ ಹುಟ್ಟಿದ ಮಗಳಾದ ಅಂಜನಾದೇವಿ ಯೌವ್ವನವತಿಯಾಗುತ್ತಲೇ ಕೇಸರಿ ಎಂಬ ಹೆಸರನ್ನು ಹೊಂದಿರುವ ಒಬ್ಬ ಕಪಿ ಶ್ರೇಷ್ಠನಿಗೆ ನೀಡಿ ವಿವಾಹ ಮಾಡು ಎಂದು ಕೇಳಿ ಕೊಂಡನು. ಆಕೆಯ ತಂದೆ ಅದಕ್ಕೆ ಅಂಗೀಕರಿಸಿ ಅವರ ವಿವಾಹವನ್ನು ಮಾಡಿದನು.

ಈ ರೀತಿ ಎರಡು ಪುರಾಣಗಳಲ್ಲಿ (ಸ್ಕಂಧ ಸಾಕ್ಷಾತ್ತು ಪುರಾಣವೇ ) ಬ್ರಹ್ಮಾಂಡ ಪುರಾಣದ ಭಾಗದ ಶ್ರೀವೇಂಕಟಾಚಲಮಹಾತ್ಮ್ಯೆಯಲ್ಲಿ ಇರುವ ಭಾಗದಲ್ಲಿ ಈ ವೃತ್ತಾಂತವು ಬಹಳ ವಿವರವಾಗಿದೆ. ಹಾಗೆಯೇ ಈ ಎರಡೂ ಗ್ರಂಥಗಳಲ್ಲಿ ಹನುಮಂತನು ಹುಟ್ಟಿದ ಅಂಜನಾದ್ರಿ ತಿರುಮಲೆಯ ಗಿರಿ ಯಾದ ವೇಂಕಟಾದ್ರಿಯೇ ಎಂದು ಹೇಳಲಾಗಿದೆ. ಹಾಗೆಯೇ ಬ್ರಹ್ಮಾಂಡ ಪುರಾಣ ತೀರ್ಥ ಖಂಡೇ ಭೃಗುನಾರದ ಸಂವಾದೇ ಐದನೇ ಅಧ್ಯಾಯದಲ್ಲಿ,

ಅಂಜನೇ ತ್ವಂ ಹಿ ಶೇಷದ್ರೌತಪಸ್ತಪ್ತ್ವಾ ಸುದಾರುಣಮ್

ಪುತ್ರಂ ಸೂತವತೀ ಯಸ್ಮಾಲ್ಲೋಕತ್ರಯಹಿತಾಯ ವೈ

ಪ್ರಸಿದ್ಧಿಂ ಯಾತು ಶೈಲೋಽಯಮಂಜನೇ ನಾಮತಸ್ತವ

ಅಂಜನಾಚಲ ಇತ್ಯೇವ ನಾತ್ರ ಕಾರ್ಯಾ ವಿಚಾರಣಾ

ಹೇ ಅಂಜನಾ! ನೀನು ಈ ಶೇಷಾದ್ರಿಯ ಮೇಲೆ ಘೋರವಾದ ತಪಸ್ಸನ್ನು ಮಾಡಿ ಈ ಪುತ್ರನನ್ನು ಲೋಕದ ಶ್ರೇಯಸ್ಸಿಗಾಗಿ ಜನ್ಮನೀಡಿರುವೆ. ಆದ್ದರಿಂದ ಈ ವೇಂಕಟಗಿರಿ ಅಥವಾ ಶೇಷಾದ್ರಿ ಇನ್ನು ಮೇಲೆ ನಿನ್ನ ಹೆಸರಿನಲ್ಲೇ ಅಂಜನಾದ್ರಿ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬರುತ್ತದೆ ಎಂದು ಹೇಳಿ ಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಲೋಕಕ್ಕೆ ಹೊರಟು ಹೋದರು ನಂತರ ಅಂಜನಾ ದೇವಿ ಆನಂದದಿಂದ ತನ್ನ ಮಗನೊಂದಿಗೆ ಶ್ರೀವೇಂಕಟಗಿರಿಯಲ್ಲಿನ ತನ್ನ ಆಶ್ರಮವನ್ನು ತಲುಪಿದಳು.

ಶ್ರೀವೇಂಕಟಾಚಲಮಹಾತ್ಮ್ಯೆಯಲ್ಲಿನ ವರಾಹಪುರಾಣ ಭಾಗದಲ್ಲಿ (36 ನೆಯ ಅಧ್ಯಾಯದಲ್ಲಿ 28, 29 ಶ್ಲೋಕಗಳು) ಕೂಡಾ ಕಲಿಯುಗದಲ್ಲಿನ ವೇಂಕಟಾದ್ರಿಯೇ ಎಂದು ತಿಳಿಸಲಾಗಿದೆ. ತ್ರೇತಾಯುಗದಲ್ಲಿ ಅಂಜನಾದ್ರಿ ಎಂಬ ವಿಷಯವನ್ನು ತಿಳಿಸಿದ್ದಾರೆ.

ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಮ್ ಅಂಜನಾಚಲಂ
ದ್ವಾಪರೇ ಶೇಷಶೈಲೇತಿ ಕಲೌ ಶ್ರೀವೇಂಕಟಾಚಲಮ್
ಅಂಜನಾ ಚ ತಪಃ ಕೃತ್ವಾ ಹನೂಮಂತಮಜೀಜನತ್
ತದಾ ದೇವಾಸ್ಸಮಾಗತ್ಯ ದೇವಸಾಹಾಯ್ಯಕಾರಮ್
ಯಸ್ಮಾತ್ ಪುತ್ರಮಸೂತಾऽ ಸೌ ಜಗುಃ ತಸ್ಮಾತ್ ಇಮಂ ಗಿರಿಮ್
ಅಂಜನಾ ದ್ರಿಮ್

ಎಂದು ತಿಳಿಸಿದ್ದಾರೆ. ಅಂದರೆ ಅಂಜನಾದೇವಿಯ ಪುತ್ರನನ್ನು ಹೊಂದಿದ ಪರ್ವತವಾದ್ದರಿಂದ ಇದು ಅಂಜನಾದ್ರಿ ಆಗಿದೆ. ಇಂತಹ ಉದಾಹರಣೆಗಳು ವಿವಿಧ ಪ್ರಾಚೀನ ಇತಿಹಾಸ, ಪುರಾಣ ಗ್ರಂಥಗಳಲ್ಲಿ ಎಲ್ಲೂ ಬೇರೇ ಇತರ ಪ್ರಾಂತಕ್ಕೆ ಹನುಮಂತನ ಜನ್ಮ ಭೂಮಿ ಯಾಗಿ ಸಮರ್ಥಿಸುವ ವಿಧದಲ್ಲಿ ಕಂಡು ಬರುವುದಿಲ್ಲ.

ಆದ್ದರಿಂದ ಮೇಲಿನ ಪ್ರಮಾಣಗಳ ಆಧಾರದ ಮೇಲೆ ಹನುಮಂತನ ಜನ್ಮ ಕ್ಷೇತ್ರವಾದ ವೇಂಕಟಾದ್ರಿಯಲ್ಲಿ ಆಕಾಶಗಂಗೆಯಾಗಿ ಪ್ರಾಂತದಲ್ಲಿ ಅಂಜನಾದ್ರಿ ಎಂದು ನಿರ್ಧರಿಸಬಹುದು.

ಹಾಗೆಯೇ ಶ್ರೀವೇಂಕಟಾಚಲ ಮಹಾತ್ಮೆಯಲ್ಲಿನ ಬ್ರಹ್ಮಾಂಡ ಪುರಾಣದ ಭಾಗದಲ್ಲಿ ಆಂಜನೇಯ ಸ್ವಾಮಿಯ ಜನ್ಮವೇ ಅಲ್ಲದೇ ಬಾಲ್ಯದಲ್ಲೂ ಇಲ್ಲೇ ನಿವಸಿಸಿ. ಅಲ್ಲಿ, ಗಿರಿ, ತೀರ್ಥ, ವನಾದಿಗಳನ್ನು ಸೇವಿಸುವುದೇ ಅಲ್ಲದೇ ಅಲ್ಲಿ ಭಕ್ತಿ ಜ್ಞಾನ ಪ್ರದವಾದ ವಿಷ್ಣು ತೀರ್ಥವೆಂಬ ಒಂದು ತೀರ್ಥವನ್ನೂ ತಾನು ನಿರ್ಮಿಸಿದಂತೆ ತಿಳಿದು ಬರುತ್ತದೆ.

ಹಾಗೆಯೇ ಈ ಅಂಜನಾದ್ರಿಯಲ್ಲಿ ಇರುವ 108 ಪುಣ್ಯದಾಯಕವಾದ ತೀರ್ಥಗಳಲ್ಲಿ ಶ್ರೀ ಆಂಜನೇಯತೀರ್ಥ ಎಂಬ ತೀರ್ಥವು ಇರುವುದನ್ನು ಗಮನಿಸಬಲ್ಲಂತಹಾ ವಿಶೇಷ ವಿಷಯವಾಗಿದೆ.

## ಕಾರ್ವೇಟಿನಗರ ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು
## 2022 ಮೇ 22 ರಿಂದ 31 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 22-05-2022 | ಭಾನುವಾರ | - | ಅಂಕುರಾರ್ಪಣೆ |
| 23-05-2022 | ಸೋಮವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ದೊಡ್ಡಶೇಷವಾಹನ |
| 24-05-2022 | ಮಂಗಳವಾರ | ಚಿಕ್ಕಶೇಷವಾಹನ | ಹಂಸವಾಹನ |
| 25-05-2022 | ಬುಧವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 26-05-2022 | ಗುರುವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 27-05-2022 | ಶುಕ್ರವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 28-05-2022 | ಶನಿವಾರ | ಹನುಮದ್ವಾಹನ ಸಾ॥ : ವಸಂತೋತ್ಸವ | ಗಜವಾಹನ |
| 29-02-2022 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 30-05-2022 | ಸೋಮವಾರ | ರಥೋತ್ಸವ | ಅಶ್ವವಾಹನ |
| 31-05-2022 | ಮಂಗಳವಾರ | ಚಕ್ರಸ್ನಾನ | ಧ್ವಜಾವರೋಹಣ |




# ಘಂಟನಾದವನ್ನು ಏಕೆ ಮಾಡುತ್ತೇವೆ?

- ಬಿ.ಆರ್. ಶ್ರೀಕಂಠಯ್ಯ

ದೇವಾಲಯಗಳಲ್ಲಿ ಮಾಡುವ ಘಂಟಾನಾದದ ಬಗ್ಗೆ ಎಲ್ಲರಿಗೂ ತಿಳಿದಿದೆ. ಇದರ ಹಿಂದೆ ಮಹತ್ತರವಾದ ಕಾರಣಗಳಿವೆ. ಇದು ದೇವರನ್ನು ಎಚ್ಚಿಸುವುದಕ್ಕಾಗಿಯೇ? ಅಂದರೆ ಇಲ್ಲ, ಕಾರಣ ಅವನು ನಿದ್ದೆನೇ ಹೋಗುವುದಿಲ್ಲ. ನಾವು ಬಂದಿರುವುದನ್ನು ತಿಳಿಸುವುದಕ್ಕಾಗಿ ಅಂದರೆ,ಅವನಿಗೆ ಹೇಳಬೇಕಾಗಿಲ್ಲ ಎಲ್ಲವೂ ತಿಳಿದಿದೆ. ನಾವೂ ಬರಲೂ ಅನುಮತಿ ಕೇಳುವುದಕ್ಕಾಗಿ ಅಂದರೆ,ಕಾರಣ ಅವನು ಭಕ್ತಿಯಿಂದ ಬಂದ ಭಕ್ತರನ್ನೆಲ್ಲಾ ಅನುಗ್ರಹಿಸುತ್ತಾನೆ. ಹೀಗೆ ಅನೇಕ ಸಂದೇಹಗಳು ನಮಗೆ ಬರುತ್ತದೆ. ಘಂಟಾನಾದದ ಕೆಲವು ವಿಷಯಗಳನ್ನು ತಿಳಿದುಕೊಳ್ಳೋಣ -

ಘಂಟಾನಾದ ಮಾಡುವುದು ಒಂದು ಶುಭ ಸಂಕೇತ. ಪೂಜೆಗೆ ಮುಂಚೆ, ಘಂಟೆಯನ್ನು ಬಾರಿಸುತ್ತಾರೆ. ಅದು ದೈವಶಕ್ತಿಯನ್ನು ಆಹ್ವಾನಿಸಿ, ದುಷ್ಟ ಶಕ್ತಿಯನ್ನು ಹೊರ ಕಳಿಸುವುದಕ್ಕಾಗಿ (ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್। ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಚನಮ್) ಇದರ ನಾದ "ಓಂ" ಎಂಬ ಶಬ್ದವು ನಮಗೆ ಕೇಳಿಸುತ್ತದೆ.ಸಾಮಾನ್ಯವಾಗಿ ಎಲ್ಲರೂ ಈ ಶಬ್ದವನ್ನು ಕೇಳಿರಬಹುದು. ಶಬ್ದವು ನಾವು ಹತ್ತಿರವಿದ್ದು ಏಕಾಗ್ರತೆಯಿಂದ ಕೇಳಿಸಿಕೊಂಡರೆ ಸ್ವಚ್ಛವಾಗಿ ಕೇಳಿಸುತ್ತದೆ. ಘಂಟನಾದದ ಪರಿಸರದಲ್ಲಿ ಒಂದು ರೀತಿಯ ಸ್ಪಂದನ ಇರುತ್ತದೆ. ಆ ಕಾಲದಲ್ಲಿ ಮನಸ್ಸಿಗೆ ಏಕಾಗ್ರತೆ ಬರುತ್ತದೆ.ಎಲ್ಲಾ ಕಾಲದಲ್ಲೂ ಘಂಟೆಯನ್ನು ಬಾರಿಸುವುದಿಲ್ಲ. ಪೂಜಾ ಪ್ರಾರಂಭದಲ್ಲಿ, ನೈವೇದ್ಯ ಮಾಡುವಾಗ, ದೇವರಿಗೆ ಆರತಿ ಮಾಡುವಾಗ ಘಂಟಾನಾದ ಮಾಡುತ್ತಾರೆ. ಪ್ರಾರಂಭದಲ್ಲಿ ಮೆಲ್ಲಗೆ,ನಂತರ ಜೋರಾಗಿ ಮತ್ತು ಕೊನೆಯಲ್ಲಿ ಸಣ್ಣ ಧ್ವನಿಯಲ್ಲಿ ಘಂಟೆಯನ್ನು ಬಾರಿಸುತ್ತಾರೆ. (ರೈಲಿನ ಸಂಚಾರದಂತೆ, ರೈಲು ಪ್ರಾರಂಭಧಲ್ಲಿ ನಿಧಾನವಾಗಿ, ನಂತರ ವೇಗವಾಗಿ ಮತ್ತು ನಿಲ್ದಾಣ ಹತ್ತಿರ ಬಂದಾಗ ನಿಧಾನವಾಗಿ ಚಲಿಸುತ್ತದೆ) ಈ ಘಂಟಾನಾದವು, ಜನಗಳಿಗೆ ದೇವರ ಸನ್ನಿಧಿಗೆ ಬರಲು ಒಂದು ರೀತಿಯ ಸಂಕೇತವೆಂದೇ ಹೇಳಬಹುದು. ಬಂದಾಗಲೆಲ್ಲಾ ಘಂಟೆಯನ್ನು ಬಾರಿಸಬಾರದು. ಆಯಾಯ ನಿಯಮಿತ ಕಾಲದಲ್ಲಿಯೇ ಬಾರಿಸಬೇಕು.


ಘಂಟೆಯನ್ನು ಬಾರಿಸುವಾಗ ಒಂದು ನಿಯಮವಿದೆ, ಅದು ಕೇಳಲು ಆನಂದವಾಗಿರಬೇಕು, ಆ ಸೇವೆಗಾಗಿಯೇ, ಕೆಲವು ದೇವಾಲಯಗಳಲ್ಲಿ, ಸೇವಕರನ್ನು ನೇಮಿಸಿರುತ್ತಾರೆ. ಎಲ್ಲರೂ ಕೇಳಿರಬಹುದು, ತಿಮ್ಮಪ್ಪನ ಸನ್ನಿಧಿಯಲ್ಲಿ, ಸಾಯಂಕಾಲ ನೈವೇದ್ಯ ಕಾಲದಲ್ಲಿ ಘಂಟಾನಾದವನ್ನು ಮಾಡುತ್ತಾರೆ. ಇದರಿಂದ ತಿಳಿಯುತ್ತದೆ,ಇದು ದೇವರ ನೈವೇದ್ಯ ಸಮಯ ಇತ್ಯಾದಿ. ಘಂಟೆಯನ್ನು ಎಲ್ಲರೂ ತಯಾರಿಸುವುದಿಲ್ಲ. ಅದಕ್ಕೆ ಕೆಲವು ನಿಯಮಗಳಿವೆ. ಅಯೋಧ್ಯೆಯ ಶ್ರೀರಾಮ ಮಂದಿರದ ಹೆಬ್ಬಾಗಿಲಿಗಾಗಿ ಘಂಟೆ ತಯಾರಾಗುತ್ತದೆ. ಈ ಘಂಟೆಯನ್ನು ಅಷ್ಟಧಾತುಗಳಾದ - ಚಿನ್ನ, ಬೆಳ್ಳಿ, ತ್ರಾಮ, ಸತ್ತು, ಸೀಸ, ತವರ, ಕಬ್ಬಿಣ ಮತ್ತು ಪಾದರಸದ ಮಿಶ್ರಣಗಳ ಸಮ ತೋಲನದಿಂದ ತಯಾರಿಸಲಾಗುತ್ತದೆ. ಇದರ ತೂಕ 2100 ಕೆ.ಜಿ. ಮತ್ತು ಇದನ್ನು ಬಾರಿಸಿದಾಗ ಇದರ ಧ್ವನಿ ತರಂಗಗಳು ಸುಮಾರು ೧೫ ಕಿ.ಮೀ. ಸುತ್ತಲೂ ವ್ಯಾಪಿಸುತ್ತದೆ ಎಂದು ತಿಳಿದು ಬರುತ್ತದೆ.


ಮಕ್ಕಳೇ! ತಿಳಿಯಿತಲ್ಲಾ ಘಂಟಾನಾದದ ಮಹತ್ವ.

**ಚಿತ್ರಕಥೆ**

# ಹನುಮಂತನ ಭಕ್ತಿ

ಕಥೆ: ತೆಲುಗು ಮೂಲ: ಶ್ರೀನಿವಾಸ ದೀಕ್ಷಿತರು
ಅನುವಾದ: ಆರ್.ಕೆ.
ಚಿತ್ರಗಳು: ದ್ವಾರಕನಾಥ್ ಕೆ.








ಸರ್ವೇ ಜನಾಃ ಸುಖಿನೋ ಭವಂತು !

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**

**ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...**



## ರಸಪ್ರಶ್ನೆ

**ಕ್ವಿಜ್**

ಅ) ಒಟ್ಟು ಪುರಾಣಗಳ ಸಂಖ್ಯೆ ಎಷ್ಟು ?
1. ಹದಿನಾಲ್ಕು 2. ಹನ್ನೆರಡು
3. ಹತ್ತು 4.ಹದಿನೆಂಟು

ಆ) ದಿಕ್ಕುಗಳನ್ನು ರಕ್ಷಿಸುವ ದೇವತೆಗಳನ್ನು ಏನೆಂದು ಕರೆಯುತ್ತಾರೆ?
1. ಋಷಿಗಳು 2. ಮುನಿಗಳು
3. ದಿಕ್ಪಾಲಕರು 4. ಗಂಧರ್ವರು

ಇ) ದಿಕ್ಪಾಲಕರು ಎಷ್ಟು ಜನ ?
1. ನಾಲಕ್ಕು 2.ಎಂಟು
3.ಹತ್ತು 4. ಆರು

ಈ) ಅಷ್ಟಾದಶ ಪುರಾಣಗಳಲ್ಲಿ ಮ ಕಾರದಿಂದ ಪ್ರಾರಂಭವಾಗುವ ಪುರಾಣಗಳ ಸಂಖ್ಯೆ ಎಷ್ಟು?
1.ಎರಡು 2.ನಾಲಕ್ಕು
3.ಐದು 4.ಒಂದು

ಉ) ಮತ್ಸ್ಯ ಪುರಾಣದಲ್ಲಿ ಒಟ್ಟು ಇರುವ ಶ್ಲೋಕಗಳ ಸಂಖ್ಯೇ ಎಷ್ಟು ?
1.ನಾಲಕ್ಕುಸಾವಿರ 2.ಹದಿನಾಲಕ್ಕು ಸಾವಿರ
3.ಎರಡು ಸಾವಿರ 4. ಐದು ಸಾವಿರ

ಊ) ಭಾಗವತ ಪುರಾಣದಲ್ಲಿರುವ ಒಟ್ಟು ಶ್ಲೋಕಗಳ ಸಂಖ್ಯೇ ಎಷ್ಟು ?
1. ಹತ್ತುಸಾವಿರ 2.ಹದಿನೆಂಟುಸಾವಿರ
3. ಒಂಭತ್ತುಸಾವಿರ 4. ಅರವತ್ತುಸಾವಿರ

ಋ) ಒಟ್ಟು ಇರುವ ಮನ್ವಂತರಗಳ ಸಂಖ್ಯೆ ಎಷ್ಟು?
1. ಹತ್ತು 2.ಹದಿನಾಲಕ್ಕು
3.ಐದು 4.ಏಳು

ಉತ್ತರಗಳು:
ಅ)4 ಆ) 3 ಇ) 2 ಈ)1 ಉ)2 ಊ) 2 ಋ)2

**ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....**

ಕ್ಕ ಹ ಭಾ ನ ಟು
ನ ಅ ನಂ ವ ಗೆ

ಉತ್ತರಗಳು:
ಅಕ್ಕನ ಹಗೆ, ಭಾವನ ನಂಟು


Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.






02-04-2022 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ "ಶುಭಕೃತ್" ನಾಮ ಸಂವತ್ಸರ ಯುಗಾದಿ ಆಸ್ಥಾನ, ಪುಷ್ಪ ಪ್ರದರ್ಶನದ ದೃಶ್ಯಮಾಲಿಕೆ





2022 ಏಪ್ರಿಲ್ 04 ರಿಂದ 06 ರ ವರೆಗೆ ತಿರುಮಲೆ ಧರ್ಮಗಿರಿ ಶ್ರೀವೆಂಕಟೇಶ್ವರ ವೇದವಿಜ್ಞಾನ ಪೀಠದಲ್ಲಿ ನಡೆದ
ಶ್ರೀಲಕ್ಷ್ಮೀ ಶ್ರೀನಿವಾಸ ಧನ್ವಂತರಿ ಮಹಾಯಾಗ ದೃಶ್ಯಮಾಲಿಕೆ





ಸ್ವಿಮ್ಸ್-ಟಾಟಾ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣವನ್ನು ಪರಿಶೀಲಿಸುತ್ತಿರುವ ತಿ.ತಿ.ದೇ.ಕಾರ್ಯನಿರ್ವಹಣಾಧಿಕಾರಿ ಶ್ರೀ.ಕೆ.ಎಸ್.ಜವಹರ್ ರೆಡ್ಡಿ,ಐ.ಎ.ಎಸ್., ಇವರೊಂದಿಗೆ ತಿ.ತಿ.ದೇ. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ.ವೀರಬ್ರಹ್ಮ, ಐ.ಎ.ಎಸ್., ಸ್ವಿಮ್ಸ್ ಉಸ್ತುವಾರಿ ಡಾ॥ ಬಿ.ಆರ್.ರಮಣನ್ ಮತ್ತು ತಿ.ತಿ.ದೇ., ಇತರ ಉನ್ನತಾಧಿಕಾರಿಗಳು ಪಾಲ್ಗೊಂಡ ದೃಶ್ಯಮಾಲಿಕೆ

SAPTHAGIRI (KANNADA) ILLUSTRATED MONTHLY Published by
Tirumala Tirupati Devasthanams Printing on 25-04-2022 and Posting at Tirupati
RMS.Regd. with the Registrar of Newspapers for India under RNI. No. APKAN/2021/80589.
Postal Regd.No.TRP/156/2021-2023 "Licenced to Post Without Prepayment
No. PMGK/RNP/WPP-04(6)/2021-2023" Posting on 20th of Every Month

